# ಗದಗ ಜಿಲ್ಲೆಯ ಪ್ರವಾಸಿ ತಾಣಗಳು

## ಮುನ್ನುಡಿ

ಅರ್ಹ ವಯಸ್ಸಿನ ಎಲ್ಲಾ ಮಕ್ಕಳು ಶಾಲೆಗೆ ದಾಖಲಾಗಿ ನಿರಂತರ ಶಾಲೆಗೆ ಹಾಜರಾಗಿ ಗುಣಾತ್ಮಕ ಶಿಕ್ಷಣ ಪಡೆಯುವದು ಉದ್ದೇಶ. ಇದನ್ನು ಸಾಧಿಸಲು ಶಿಕ್ಷಣ ಅಭಿಯಾನ ಕಾರ್ಯಕ್ರಮದಡಿ ಹಲವಾರು ಅವಿಷ್ಕೃತ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು ಅದರಲ್ಲಿ ''ಚಿಣ್ಣರ ಜಿಲ್ಲಾ ದರ್ಶನ'' ''ಶೈಕ್ಷಣಿಕ ಪ್ರವಾಸ'' ಕಾಯರ್ಕ್ರಮವು ಒಂದಾಗಿದೆ. ಪ್ರವಾಸವು ಸೃಜ ಅನುಭವ, ಜ್ಞಾನವನ್ನು ಪಡೆಯಲು ಸಹಾಯಕವಾಗಿದೆ. ಈ ಉಚಿತ ಪ್ರವಾಸ ಕಾರ್ಯಕ್ರಮವನ್ನು ಜಿಲ್ಲೆಯ ವೈವಿಧ್ಯಮಯ ಸಾಂಸ್ಕೃತಿಕ, ಐತಿಹಾಸಿಕ, ಶೈಕ್ಷಣಿಕ, ಸ್ಥಳಗಳ ಬಗ್ಗೆ ಧನಾತ್ಮಕ ಮನೋಭಾವನೆಯನ್ನು ಬೆಳೆಸುವದರೊಂದಿಗೆ ಪ್ರಭುತ್ವ ಮಟ್ಟದ ಕಲಿಕೆಗೆ ಪ್ರಯೋಜನವಾಗುವದು.

ಈ ಪ್ರವಾಸ ಕೈಪಿಡಿಯನ್ನು ಪರಿಷ್ಕರಿಸಿದ ಡಯಟ್ ಸಂಸ್ಥೆಯ ಸಿ.ಎಂ.ಡಿ.ಇ. ವಿಭಾಗಕ್ಕೆ ಅಭಿನಂದನೆಗಳು ಈ ಕಿರುಹೊತ್ತಿಗೆಯ ಪ್ರಯೋಜನವನ್ನು ಶಿಕ್ಷಕರು ಹಾಗೂ ಮಕ್ಕಳು ಪಡೆದುಕೊಂಡು ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಹಾರೈಸುತ್ತೇವೆ.

"ನಿಮ್ಮ ಪ್ರಯಾಣ ಸುಖಕರವಾಗಲಿ''

**ಶ್ರೀ ವೀರಣ್ಣ ತುರುಮರಿ**
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
ಜಿಲ್ಲಾ ಪಂಚಾಯತ್, ಗದಗ

**ಶ್ರೀಮತಿ ಸುನಂದಾ ಬಿ. ಮೂಗನೂರು**
ಪ್ರಾಂಶುಪಾಲರು
ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ
ಗದಗ

**ಶ್ರೀ ಎಸ್. ಎನ್. ಖಾಜಿ**
ಉಪ ನಿದೇರ್ಶಕರು
ಸಾರ್ವಜಿನಕ ಶಿPಣ ಇಲಾಖೆ
ಗದಗ

# ಶಿರಹಟ್ಟಿ ತಾಲ್ಲೂಕು

ಶಿರಹಟ್ಟಿಯು ಪ್ರಾಚೀನ ಕಾಲದಿಂದಲೂ ತನ್ನದೇ ಆದ ಸ್ಥಾನವನ್ನು ಹೊಂದಿದೆ. 'ಶಿರಪುರ' ಎಂದು ಇತಿಹಾಸದಲ್ಲಿ ದಾಖಲಾಗಿರುವ ಶಿರಹಟ್ಟಿ ವಿಜಾಪುರದ ಆದಿಲ್‌ಶಾಹಿ ಸುಲ್ತಾನರ ಕಾಲದಲ್ಲಿ ಲಕ್ಷ್ಮೇಶ್ವರ ಉಪವಿಭಾಗದ ಒಂದು ಭಾಗವಾಗಿತ್ತು. ಕೆಲ ಕಾಲ ಅಂಕುಶ್ ಖಾನನ ಜಹಗೀರಾಗಿದ್ದ ಶಿರಹಟ್ಟಿಯನ್ನು ಲಕ್ಷ್ಮೇಶ್ವರದ ಜೊತೆಯಾಗಿ ಖಾನಗೌಡ ಎಂಬ ದೇಸಾಯಿ ೧೬೦೭ ರಲ್ಲಿ ದೇಶಗತಿಯಾಗಿ ಪಡೆದನು. ಕಾಲಾಂತರದಲ್ಲಿ ಪೇಶ್ವೆಗಳು ಸಾಂಗ್ಲಿ ಸಂಸ್ಥಾನದ ಒಡೆಯರು ಶಿರಹಟ್ಟಿಯಲ್ಲಿ ಆಳ್ವಿಕೆ ನಡೆಸಿದರು. ಸ್ವಾತಂತ್ರ್ಯಾ ನಂತರ ತಾಲೂಕ ಆಗಿ ರಚನೆಗೊಂಡಿದೆ.

ಇದು ಜ್ಞಾನಪೀಠ ಪುರಸ್ಕೃತ ಕವಿ ದ. ರಾ. ಬೇಂದ್ರೆಯವರ ಹುಟ್ಟೂರು.

**ಸಂತ ಶರಣರ ಪುಣ್ಯ ಭೂಮಿ :**

ಜಗದ್ಗುರು ಫಕೀರ ಶಿದ್ರಾಮ ಮಹಾಸ್ವಾಮಿಗಳು, ಬಾಲೇಹೊಸೂರಿನ ದಿಂಗಾಲೇಶ್ವರರು, ಬನ್ನಿಕೊಪ್ಪದ ಸುಜ್ಞಾನೇಂದ್ರ ಸ್ವಾಮೀಜಿಯವರು, ವರವಿ ಮೌನೇಶ್ವರರು, ಮುಕ್ತಿ ಮಂದಿರದ ಶ್ರೀ ವಿಮಲರೇಣುಕ ಮಹಾಸ್ವಾಮಿಗಳು ಈ ನಾಡಿನ ಸಂತ ಶರಣರಲ್ಲಿ ಪ್ರಮುಖರಾಗಿದ್ದಾರೆ.

**ಫಕ್ಕೀರೇಶ್ವರ ಮಠ:**





ಹಿಂದೂ-ಮುಸ್ಲಿಂ ಭಾವೈಕ್ಯತೆಯ ಕೇಂದ್ರ ಶಿರಹಟ್ಟಿಯ ಶ್ರೀ ಫಕ್ಕೀರೇಶ್ವರ ಮಠ, ಬಿಜಾಪುರದ ಖಾಜಾ ಅಮೀನುದ್ದೀನ ಸೂಫೀ ಸಂತನಲ್ಲಿ ಬೆಳೆದ ಲಿಂಗಾಯತ ಜಂಗಮ ವಟುವಿಗೆ ಸಂತ್ ಖಾಜಾ ಅಮೀನುದ್ದೀನರು ಇಸ್ಲಾಂ ಧಾರ್ಮಿಕ ಆಚರಣೆಗಳನ್ನೆಲ್ಲ ಕಲಿಸಿದರು. ಕೊರಳಲ್ಲಿ ಇಷ್ಟಲಿಂಗ ಕಟ್ಟಿಕೊಂಡು ನಿತ್ಯ ಲಿಂಗಾರ್ಚನೆ ಮಾಡುತ್ತಾ ಇಸ್ಲಾಂ ವಿಧಿಗಳನ್ನು ಅನುಸರಿಸಿದ ವ್ಯಕ್ತಿಯೇ ಫಕೀರೇಶ್ವರರೆಂದು ಖ್ಯಾತರಾಗಿದ್ದಾರೆ. ಆ ಮಹಾ ಮಹಿಮರು ಶಿರಹಟ್ಟಿಯಲ್ಲಿ ಸ್ಥಾಪಿಸಿದ ಮಠದಲ್ಲಿ ಇಂದಿಗೂ ಹಿಂದೂ-ಮುಸ್ಲಿಂ ಬಾಂಧವರು ಒಂದು ಗೂಡಿ ತಮ್ಮ ತಮ್ಮ ಧಾರ್ಮಿಕ ವಿಧಿ ವಿಧಾನಗಳನ್ನು ಆಚರಿಸುತ್ತಾರೆ. ಇಂದಿನ ಪೂಜ್ಯ ಜಗದ್ಗುರು ಶ್ರೀ ಫಕೀರ ಸಿದ್ದರಾಮ ಮಹಾಸ್ವಾಮಿಗಳವರು ಭಾವೈಕ್ಯತೆಯ ಜೊತೆಗೆ ಶ್ರೀಮಠವನ್ನು ಶಿಕ್ಷಣಾಭಿಮುಖವಾಗಿಯೂ ಬೆಳೆಸುತ್ತಿದ್ದಾರೆ. ಪ್ರಸ್ತುತ ಮಠವು ಸುಮಾರು ೩೦೦ ವರ್ಷಗಳಷ್ಟು

ಪ್ರಾಚೀನವೆಂದು ಅಭಿಪ್ರಾಯಪಡಲಾಗಿದೆ. ಮಠದಲ್ಲಿರುವ ಒಂದು ಶಾಸನವು ಮಠವನ್ನು ಫಕೀರ ಚನ್ನವೀರ ಸ್ವಾಮೀಜಿಯವರಿಗೆ ಕ್ರಿ.ಶ. ೧೭೨೨ ರಲ್ಲಿ ದಾನ ಕೊಟ್ಟ ವಿಷಯವು ಪ್ರಸ್ತುತವಿದೆ.

**ಅವ್ವ ಲಿಂಗವ್ವನ ಗುಡಿ :**



ಲಕ್ಷ್ಮೇಶ್ವರ ದೇಶಗತಿಯ ಸಂಸ್ಥಾಪಕಿಯಾದ ಅವ್ವ ಲಿಂಗವ್ವನ ಗುಡಿ ಆಕೆಯ ಸಮಾಧಿ ಕಟ್ಟಡವೆಂದು ನಿರ್ಮಿತವಾಗಿದ್ದರು ಕಾರಣಾಂತರ ಗಳಿಂದ ಅಲ್ಲಿ ಸಮಾಧಿ ಜರುಗಲಿಲ್ಲ. ಈ ಮಠ ೩೦೦ ವರ್ಷಗಳಷ್ಟು ಪ್ರಾಚೀನವಾಗಿದ್ದು, ಆಕರ್ಷಕ ಕಲ್ಲು ಕಟ್ಟಡವಾಗಿದೆ. ದ್ವಾರಬಾಗಿಲವು ಮನಮೋಹಕ ಕೆತ್ತನೆಯಿಂದ ಕೂಡಿದೆ. ಹೊರಭಾಗದಲ್ಲಿ ಸುಂದರ ಕೆತ್ತನೆಗಳುಳ್ಳ ಅನೇಕ ಧಾರ್ಮಿಕ ಶಿಲ್ಪಗಳಿವೆ, ಕಮಲದಳ ಮತ್ತು ಸರ್ವಾಕೃತಿಯ ಕೆತ್ತನೆಗಳಿವೆ. ಇವಲ್ಲದೇ ಲಕ್ಷ್ಮೀನಾರಾಯಣ ಮತ್ತು ಮುರುಗೇಶ್ವರ ಕಲ್ಮಠಗಳು ಶಿರಹಟ್ಟಿಯಲ್ಲಿವೆ.

**ಹೊಳಲಮ್ಮ ದೇವಸ್ಥಾನ ಶ್ರೀಮಂತನಗರ :**

ಶಿರಹಟ್ಟಿಯಿಂದ ೧೮ ಕಿ.ಮಿ. ದೂರದಲ್ಲಿರುವ ದೇವಿಹಾಳ ಬಳಿಯ ಗುಡ್ಡದ ಮೇಲಿರುವ ಕೋಟೆ ಶ್ರೀಮಂತಗಡ ಎಂದೇ ಪ್ರಸಿದ್ಧಿಯಾಗಿದೆ. ಆದಿ ಶಕ್ತಿ ಅವತಾರವೆಂದೇ ಆಸ್ತಿಕರು ಭಾವಿಸುವ ಹೊಳಲಮ್ಮ ದೇವಿಯ ದೇವಸ್ಥಾನ ಇದ್ದು, ಛತ್ರಪತಿ ಶಿವಾಜಿಯು ಈ ದೇವಿಯ ನಿಷ್ಠಾವಂತ ಉಪಾಸಕನಾಗಿದ್ದನೆಂಬ ಐತಿಹ್ಯವಿದೆ. ಶ್ರೀಮಂತಗಡ ಕೋಟೆ ಅಲ್ಲಲ್ಲಿ ಶಿಥಿಲವಾಗಿದ್ದರೂ ಪುರಾತನ ವೈಭವವನ್ನು ಸ್ಮರಣೆಗೆ ತರುವಂತಿದೆ. ಬೆಟ್ಟದ ಮೇಲಿಂದ ನೋಡಿದರೆ ಸುತ್ತಲಿನ ಪ್ರದೇಶದ ಮೋಹಕ ದೃಶ್ಯ ಕಣ್ಣಿಗೆ ಕಟ್ಟುತ್ತದೆ. ದೇವಿಯ ವಿಗ್ರಹವು ವಿಜಯನಗರೋತ್ತರ ಶೈಲಿಯಲ್ಲಿದೆ.

ಇಲ್ಲಿನ ಜನಪದ ಮತ್ತು ಮೌಖಿಕ ಪರಂಪರೆಯಂತೆ ದೇವಿಹಾಳದ ಸುತ್ತಮುತ್ತಲಿನ ಪ್ರದೇಶವು "ರಣದುಲ್ಲಾಖಾನ" ಎಂಬ ಮುಸ್ಲಿಂ ಅರಸ ವಶದಲ್ಲಿತ್ತು. ಇವನು ಗುಡ್ಡದ ಮೇಲೆ ಶಿಥಿಲಾವಸ್ಥೆಯಲ್ಲಿದ್ದ ಗುಡ್ಡದ ಅಮ್ಮನ ದೇವಾಲಯವನ್ನು ಕೆಡವಿ ತನ್ನ ಸಂಪತ್ತನ್ನು ನೆಲದಲ್ಲಿ ರಹಸ್ಯವಾಗಿ ಬಚ್ಚಿಟ್ಟನು. ಆಕ್ರಮಣಕಾರರಿಗೆ ಈ ಸಂಪತ್ತು ದೊರೆಯದಂತೆ ಮಾಡಿ ಪ್ರಾಚೀನ ದೇವಾಲಯವಿದ್ದ ಸ್ಥಳದಲ್ಲಿ ಒಂದು ಹೊಸ ದೇವಾಲಯವನ್ನು ಸ್ಥಾಪಿಸಿದನು. ಅದರಲ್ಲಿ ಮೂರ್ತಿಯನ್ನು ಸ್ಥಾಪಿಸಿ "ಹೊಳ್ಳಮ್ಮ" ಎಂದು ಹೆಸರಿಸಿದ ತನ್ನ ಸಂಪತ್ತಿಗೆ ಈ ದೇವತೆಯನ್ನು ರಕ್ಷಿಸುವ ಸಲುವಾಗಿ ಸ್ಥಾಪಿಸಿದನೆಂದೂ ಆತ ತನ್ನ ಸಂಪತ್ತನ್ನು ತೆಗೆದುಕೊಳ್ಳಬೇಕೆನ್ನುವಾಗ ಹೊಳ್ಳಮ್ಮ (ಹೊರಳಮ್ಮ) ಎಂದಾಕ್ಷಣ ದೇವತೆಯು ಹೊರಳಿ ನೆಲಮನೆಯಲ್ಲಿದ್ದ ಸಂಪತ್ತಿರುವ ಸ್ಥಳಕ್ಕೆ ಹೋಗಿ ಅನುವು ಮಾಡಿಕೊಡುವ ವ್ಯವಸ್ಥೆಯನ್ನು ಮಾಡಿಕೊಂಡಿದ್ದ ಎನ್ನಲಾಗಿದೆ.

ಔರಂಗಜೇಬನ ಸೆರೆಯಲ್ಲಿದ್ದ ಶಿವಾಜಿಯ ಕನಸಿನಲ್ಲಿ ದೇವಿಯು (ಹೊಳಲಮ್ಮ) ಧ್ಯಾನ ಮಾಡುವಂತೆ ಪ್ರೇರಣೆಯಾಯಿತು. ಸೆರೆಯಿಂದ ಬಿಡುಗಡೆಯಾದ ಬಳಿಕ ದೇವಿಯು ಅವನಿಗೆ ಖಡ್ಗವನ್ನು ನೀಡಿ ರಣದುಲ್ಲಾಖಾನನ ಸಂಪತ್ತನ್ನು ಕಾಯುವ ಕೆಲಸಕ್ಕೆ ಗುರಿ ಮಾಡಿದ್ದರಿಂದ ಅವನನ್ನು ಬಲಿ ತೆಗೆದುಕೊಳ್ಳುವಂತೆ ಆಶೀರ್ವದಿಸಿದಳು. ಅದಕ್ಕೆ ಅನುಗುಣವಾಗಿ ಶಿವಾಜಿಯು ರಣದುಲ್ಲಾಖಾನನ ಮೇಲೆ ದಾಳಿ ನಡೆಸಿ ಅವನನ್ನು ಕೊಂದು ಅವನ ಸಂಸ್ಥಾನವನ್ನು ವಶಪಡಿಸಿಕೊಂಡು ಬೆಟ್ಟದ ಮೇಲೆ ವಿಜಯ ಪತಾಕೆಯನ್ನು ಹಾರಿಸಿದನು. ದೇವಿಯ ಆಜ್ಞಾನುಸಾರವಾಗಿ ನೆಲಮನೆಯ ಸಂಪತ್ತನ್ನು ತೆಗೆದು, ನೆಲಮನೆಯನ್ನು ಮುಚ್ಚಿಸಿ ಆಸ್ಥಳದಲ್ಲಿ ಈಗಿರುವ ದೇವಿಯ ಮೂರ್ತಿಯನ್ನು ಸ್ಥಾಪಿಸಿದನೆಂದು ಹೇಳಲಾಗುತ್ತದೆ. ದೇವಿಹಾಳದಲ್ಲಿ ನೆಲೆಸುವದಕ್ಕಾಗಿ ಈ ಪೂರ್ವದಲ್ಲಿ ನಿರ್ಮಿಸಿದ ಕೋಟೆಗಳಾದ ಸಿಂಹಗಡ, ಷರುಷಗಡ,

ಗಜೇಂದ್ರಗಡ ಮತ್ತು ನಾಗೇಂದ್ರಗಡಗಳಂತೆ ಇಲ್ಲಿ ಹಂತಗಡ ಎಂಬ ಕೋಟೆಯನ್ನು ಶಿವಾಜಿಯು ಕಟ್ಟಿಸಿದನು. ಇಲ್ಲಿ ಉಳಿದೆಲ್ಲ ಕೋಟೆಗಳಿಗಿಂತ ಹೆಚ್ಚು ಸಂಪತ್ತನ್ನು ಇರಿಸಿದ್ದರಿಂದ ಅವನ ಗುರು ಶ್ರೀ ರಾಮದಾಸರು ಈ ಕೋಟೆಗೆ "ಶ್ರೀಮಂತಗಡ" ಎಂದು ಹೆಸರಿಟ್ಟರು.

ಈ ಕೋಟೆಯು ಸುಮಾರು ೨೫ ಎಕರೆಯಷ್ಟು ಪ್ರದೇಶದಲ್ಲಿ ಆವರಿಸಿದ್ದು ಉತ್ತರ ದಿಕ್ಕಿಗೆ ಮುಖ್ಯ ದ್ವಾರವಿದೆ. ಕೋಟೆಯನ್ನು ಏರಲು ಅನುವಾಗುವಂತೆ ರಸ್ತೆ ನಿರ್ಮಿಸಲಾಗಿದೆ. ಕೋಟೆಯ ಗೋಡೆಯು ಸುಮಾರು ೨೫ ಅಡಿ ಎತ್ತರ, ೧೨ ಅಡಿ ಅಗಲವಿದೆ. ರಣದುಲ್ಲಾಖಾನನ ಕೇಂದ್ರ ಸ್ಥಳವಾದ ರಣತೂರನ್ನು ಬೆಟ್ಟದ ಮೇಲಿಂದ ನೋಡಬಹುದು. ಇಲ್ಲಿ ಶಿವಾಜಿಗೂ ಮತ್ತು ರಣದುಲ್ಲಾಖಾನನಿಗೆ ಯುದ್ಧ ನಡೆಯಿತೆಂದು ಹೇಳಲಾಗುತ್ತದೆ. ಇಲ್ಲಿರುವ ರಣಗಟ್ಟೆಯಮ್ಮನ ದಿಬ್ಬ ಇರುವದರಿಂದ ಇದು ರಣಭೂಮಿಯೆಂದು ಸ್ಥಳೀಯರು ಹೇಳುತ್ತಾರೆ. ಇದರಿಂದ ಈ ಊರಿಗೆ ರಣತೂರು ಎಂಬ ಹೆಸರು ಬಂದಿದೆ.

**ವರದಿಯ ಶ್ರೀ ಮೌನೇಶ್ವರ :**

ವರವಿಯು ಗದಗ ಜಿಲ್ಲೆಯ ಶಿರಹಟ್ಟಿ ತಾಲೂಕಿನಲ್ಲಿರುವ ಪುಣ್ಯ ಕ್ಷೇತ್ರ ಇದು ಶಿರಹಟ್ಟಿ ಯಿಂದ ೫ ಕಿ.ಮಿ. ದೂರದಲ್ಲಿದೆ. ಶಿರಹಟ್ಟಿಯಿಂದ ಮುಂಡರಗಿಗೆ ಹೋಗುವ ರಾಜಮಾರ್ಗದಿಂದ ೩ ಕಿ.ಮಿ. ಒಳಗಡೆ ಕಪ್ಪತಗುಡ್ಡದ ಸಾಲಿನ ಮಧ್ಯದಲ್ಲಿರುವ ಬಯಲಂಗಣದಲ್ಲಿರುವ ಚಿಕ್ಕ ಗ್ರಾಮ ಈ ಗ್ರಾಮದ ಸುತ್ತಲೂ ಕವದಿಹಳ್ಳ ಹರಿಯುತ್ತಿದ್ದು ಸುತ್ತಲೂ ಅಂದವಾಗಿ ಬೆಳೆದು ನಿಂತಿರುವ ಮರಗಳ ಸಾಲು, ಗುಡ್ಡದ ಪ್ರದೇಶವಾಗಿದ್ದರಿಂದ ನೈಸರ್ಗಿಕವಾಗಿಯೇ ಆ ಗ್ರಾಮದ ಅಂದವು ಹೆಚ್ಚಿದೆ. ಶ್ರೀ ಮೌನೇಶ್ವರರು ಗುಲ್ಬರ್ಗಾ ಜಿಲ್ಲೆಯ ಸುರಪುರ ತಾಲೂಕಿನ ದೇವರ ಗೋನಾಳ ವಿಶ್ವಕರ್ಮ ವಂಶಜರಾದ ಶೇಕಪ್ಪ ಮತ್ತು ಶೇಷಮ್ಮನವರ ಮಗನಾಗಿ ಅವತರಿಸಿದ ಮುಂದೆ ಹಲವಾರು ಸ್ಥಳಗಳಲ್ಲಿ ಸಂಚರಿಸಿದ ಕುರುಹುಗಳಿವೆ. ಶ್ರೀ ಮೌನೇಶ್ವರ ದೇವಾಲಯವು ಯಾವುದೇ ಕುಸುರಿಯಿಂದ ಅಳವಡಿಸಲ್ಪಟ್ಟಿಲ್ಲ. ಈ ದೇವಾಲಯವು ವಿಜಾಪುರದ ಆದಿಲ್‌ಶಾಹಿ ಕಾಲದಲ್ಲಿ ಕಟ್ಟಿಸಲಾಯಿತೆಂದು ಪ್ರತೀತಿ ಇದೆ.

ಗರ್ಭಗುಡಿಯಲ್ಲಿ ಶ್ರೀ ಮೌನೇಶ್ವರರು ಲಿಂಗಾಕಾರವಾಗಿ ಮಧ್ಯದಲ್ಲಿ ಪೂಜಿಸಲ್ಪಡುತ್ತಿರುವವರು. ಇಲ್ಲಿಯ ಲಿಂಗವು ಉದ್ಭವ ಲಿಂಗವೆಂದು ಪ್ರತೀತಿ ಇದೆ. ಶ್ರೀ ಮೌನೇಶ್ವರರು ವರವಿಯ ಸುತ್ತಮುತ್ತಲೂ ಅನೇಕ ಪವಾಡಗಳನ್ನು ಮಾಡುತ್ತಾ ಸಂಚರಿಸುತ್ತಿದ್ದಾಗ, ಆ ಗ್ರಾಮದ ಕ್ಯಾಸಕ್ಕಿ ಮನೆತನದ ಸೊಸೆ ಜಕ್ಕವ್ವಳು ನೀರಿಗಾಗಿ ಕೊಡ ತೆಗೆದುಕೊಂಡು ಹೊರ ವಲಯದಲ್ಲಿರುವ ಹಳ್ಳಕ್ಕೆ ಹೊರಟಿದ್ದಳು. ಅದೇ ದಾರಿಯಲ್ಲಿ ಶ್ರೀ ಮೌನೇಶ್ವರರು ಚಿಲುಮೆಯನ್ನು ಸೇದಬೇಕೆಂಬ ಹಂಬಲದಿಂದ ಚಿಲುಮೆಯನ್ನು ಹಾಕಿದರು. ಆದರೆ ಅದರಲ್ಲಿ ಬೆಂಕಿ ಇರಲಿಲ್ಲ ಬೆಂಕಿಗಾಗಿ ಕಾಯುತ್ತಿದ್ದರು. ಆ ಹೆಣ್ಣು ಮಗಳು ಬರಲು ಬೆಂಕಿ ತರಲು ಕೇಳಿಕೊಂಡರು ಅವಳು ತನ್ನ ಅಸಹಾಯಕತೆಯನ್ನು ಹೇಳಿದರೂ ಸಹ ಒತ್ತಾಯಿಸಿ ಕೇಳಿಕೊಂಡು ಬೆಂಕಿತರಲು ಕಳುಹಿಸಿದರು. ಅವಳು ಬೆಂಕಿಯನ್ನು ತಂದ ಮೇಲೆ ಅಲ್ಲಿಯೇ ತಮ್ಮ ಕೈಯಲ್ಲಿರುವ ವಸ್ತುವೊಂದರಿಂದ ನೆಲವನ್ನು ಒತ್ತಲು ಅಲ್ಲಿ ವರ್ತಿ ಉಂಟಾಗಿ ನೀರು ಹರಿಯಲು ಪ್ರಾರಂಬಿಸಿತು. ಬೆಂಕಿಯನ್ನು ತಂದ ಜಕ್ಕವ್ವಳಿಗೆ ಆ ವರ್ತಿಯಲ್ಲಿಯೇ ನೀರು ತುಂಬಿಕೊಂಡು ಹೋಗಲು ಹೇಳಿದರು. ಅದೇ ಇಂದಿನ ಅಂಬಲಿ ತೀರ್ಥ. ಆಗ ಮೌನೇಶ್ವರರು ಬೇಗ ಹೋಗಮ್ಮ ನನ್ನ ಸಲುವಾಗಿ ನಿನಗೆ ತಡವಾಯಿತು. ನಿನ್ನ ಮನೆಯವರು ಕೋಪಿಸಿಕೊಳ್ಳಬಹುದು ಬೇಗ ಹೋಗಿ ಅಂಬಲಿ ಹಾಕದೆ ಅಡುಗೆ ಮಾಡು ಎಂದು ಹೇಳಿದರು. ಅವರು ಹೇಳಿದಂತೆ ಅಂಬಲಿ ಹಾಕದಂತೆ ಅಡುಗೆ ಮಾಡಿದಳು. ಆ ದಿವಸ ಅಡುಗೆಯು ದಿನಕ್ಕಿಂತಲೂ ರುಚಿಯಾಗಿತ್ತು. ಮನೆಯವರೆಲ್ಲರೂ ಬಹುಪರಿಯಿಂದ ಹೊಗಳಿದರು. ಇದನ್ನು ನಂಬದ ಮನೆಯವರು ಮರುದಿವಸ ಅಂಬಲಿ ಹಾಕದೆ ಅಡುಗೆ ಮಾಡಿಸಿ ನೋಡಿದರು. ಅದೂ ಕೂಡ ರುಚಿಯಾಗಿದ್ದರಿಂದ ಇದಕ್ಕೆ ಅಂಬಲಿತೀರ್ಥವೆಂದು ಹೆಸರಿಟ್ಟರು. ಈ ತೀರ್ಥದಲ್ಲಿ ಸರ್ವ ರೋಗವನ್ನು ನಿವಾರಿಸುವ ಶಕ್ತಿ ಇದೆ. ಅಲ್ಲದೇ ಇಂದಿಗೂ ವರವಿ ಸುತ್ತಮುತ್ತಲಿನ ಗ್ರಾಮದ ಜನರು ಬೆಳೆಗಳಿಗೆ ಯಾವುದೇ ರೋಗ ಬಂದರೂ ಈ ನೀರನ್ನೇ ಸಿಂಪಡಿಸುತ್ತಾರೆ.

ಜಕ್ಕವ್ವನು ನೀರು ತರಲು ತಡವಾದದ್ದನ್ನು ನೋಡಿದ ಅತ್ತೆಯು ಅವಳನ್ನು ಪೀಡಿಸತೊಡಗಿದಳು. ಆಗ ಸೊಸೆಯು ನಡೆದ ಸಂಗತಿಯನ್ನು ಹೇಳಲು, ಆ ಸಾಧುವನ್ನು ನನಗೆ ತೋರಿಸು ಎಂದು ಹೇಳಲು ಜಕ್ಕವ್ವನ್ನು ಅತ್ತೆಯನ್ನು ಕರೆದುಕೊಂಡು ಸಾಧುವಿನ ವೇಷದಲ್ಲಿ ಶ್ರೀ ಮೌನೇಶ್ವರರು ಕುಳಿತ ಸ್ಥಳಕ್ಕೆ ಕರೆದು ತಂದಳಂತೆ. ಆದರೆ ಅಲ್ಲಿ ಸ್ವಾಮಿಗಳಿರಲಿಲ್ಲ. ಹಾಗೆ ಸಂಚರಿಸುವಾಗ ಮತ್ತೊಂದು ಸ್ಥಳದಲ್ಲಿ ಕಂಡರು. ಆದರೆ ಅತ್ತೆಗೆ ಮಾತ್ರ ಕಾಣಲಿಲ್ಲ. ಇದನ್ನು ತಿಳಿದ ಅತ್ತೆಯು ಅವನೊಬ್ಬ ಮೋಸಗಾರ, ಮಾಟಗಾರ ಎಂದೆಲ್ಲಾ ಹೇಳಿದಳು. ಅದನ್ನೆಲ್ಲ ತಿಳಿದ ಸ್ವಾಮಿಗಳು ''ಮಗಳೆ ನಿನ್ನ ಅತ್ತೆಗೆ ಹೇಳು ಇಂದು ರಾತ್ರಿ ಭಾರಿ ಮಳೆ ಬರುವುದು, ಎಷ್ಟು ಮಳೆ ಬಂದರೂ ಸಹ ನಾನು ಕುಳಿತಿರುವ ಸ್ಥಳದಲ್ಲಿ ಒಂದು ಹನಿ ನೀರೂ ಬಿದ್ದಿರುವದಿಲ್ಲ. ಇದೇ ನನ್ನ ಗುಟ್ಟು ಎಂದು ಹೇಳಿ ಹೋದರಂತೆ ಅದೇ ರೀತಿ ಭಾರೀ ಮಳೆ ಬಂದು ಸ್ವಾಮೀಜಿ ಕುಳಿತ ಜಾಗದಲ್ಲಿ ಒಂದು ಹನಿ ನೀರು ಸಹ ಇರಲಿಲ್ಲ. ಅತ್ತೆಗೆ ಇದನ್ನೆಲ್ಲ ನೋಡಿ, ಆಶ್ಚರ್ಯವಾಯಿತು. ಮುಂದೆ ಒಂದು ಲಿಂಗವು ಉದ್ಭವವಾಯಿತು.

**ಲಕ್ಷ್ಮೇಶ್ವರ**

ಜಿಲ್ಲೆ : ೪೦ ಕಿ. ಮೀ.

"ಪುಲಿಗೆರೆ'' ''ಹುಲಿಗೆರೆ'' ''ಪುರಿಗೆರೆ'' ''ಪುಲಿಕಾನಗರ'' ಎಂದು ಶಾಸನೋಕ್ತವಾದ ಇಂದಿನ ಲಕ್ಷ್ಮೇಶ್ವರವು ಗದಗ ಜಿಲ್ಲೆಯ ಮಹತ್ವದ ಐತಿಹಾಸಿಕ ಪ್ರಸಿದ್ಧಿಯ ಪ್ರೇಕ್ಷಣೀಯ ಸ್ಥಳವಾಗಿದೆ. ತಾಲೂಕಿನ ಅತೀ ದೊಡ್ಡ ಪಟ್ಟಣವಾಗಿದ್ದು ಶೈಕ್ಷಣಿಕ ಹಾಗೂ ವಾಣಿಜ್ಯ ಕ್ಷೇತ್ರದಲ್ಲಿಯೂ ಮುಂದೆ ಇದೆ. ಲಕ್ಷ್ಮರಸನೆಂಬ ರಾಜ ದೇವಾಲಯವೊಂದನ್ನು ನಿರ್ಮಿಸಿ ಅದಕ್ಕೆ ಲಕ್ಷ್ಮಣೇಶ್ವರನೆಂದು ಹೆಸರಿಸಿದನು. ಇದಕ್ಕೆ ಕಾಲಾಂತರದಲ್ಲಿ ಲಕ್ಷ್ಮೇಶ್ವರ ಎಂಬ ಹೆಸರು ಪ್ರಾಪ್ತವಾಯಿತು. ಜೈನ, ಶೈವ ಹಾಗೂ ವೈಷ್ಣವ ದೇವಾಲಯಗಳ ಕೇಂದ್ರವಾಗಿದ್ದ ಈ ಸ್ಥಳದಲ್ಲಿ ಈಗಲೂ ಕೆಲವು ಐತಿಹಾಸಿಕ ಸ್ಮಾರಕಗಳಿವೆ.

**ಸೋಮೇಶ್ವರನ ದೇವಾಲಯ**



ಪುಲಿಗೆರೆ ಸೋಮನಾಥ (ಜನನ ಸುಮಾರು ೧೨೬೯) ಹಳಗನ್ನಡದ ಕವಿಗಳಲ್ಲೊಬ್ಬ ಸೋಮನಾಥನು ಹಿಂದಿನ ಧಾರವಾಡ ಜಿಲ್ಲೆಯ ಶಿರಹಟ್ಟಿ ತಾಲೂಕಿನ ಪುಲಿಗೆರೆ ಯವನು. ಆದಯ್ಯನ ಪರಮ ಶಿವಭಕ್ತನಾಗಿದ್ದ, ಅವನು ಈ ದೇವಾಲಯದಲ್ಲಿ ಜೈನ ಮೂರ್ತಿಯನ್ನು ಭಗ್ನಗೊಳಿಸಿ ಶಿವನ ಮೂರ್ತಿಯನ್ನು ಪ್ರತಿಷ್ಠಾಪಿಸಿದನೆಂದು ಹರಿಹರನ ಆದಯ್ಯನ ರಗಳೆಯಲ್ಲಿ ಪ್ರಸ್ತಾಪಿಸಲಾಗಿದೆ.

ಸೌರಾಷ್ಟ್ರದಲ್ಲಿರುವ ಸೋಮನಾಥನಂತೆ ಮೂರ್ತಿಯನ್ನು ಮಾಡಿಸಿ ಇಲ್ಲಿ ಪ್ರತಿಷ್ಠಾಪಿಸಿದನೆಂದು ಹೇಳಲಾಗಿದೆ. ದೇವಾಲಯವು ಮೂಲತಃ ಜೈನ ಬಸದಿಯಾಗಿದ್ದು ಅದರಲ್ಲಿ ಶಿವನನ್ನು ಪ್ರತಿಷ್ಠಾಪಿಸುವ ಮೂಲಕ ಶಿವಾಲಯವಾಗಿದೆ. ದಂಡನಾಯಕ ನಾಗವರ್ಮಯ್ಯನು ಪುಲಿಗೆರೆಯ ೧೨೦ ಮಹಾಜನರಿಂದ ಭೂಮಿಯನ್ನು ಕೊಂಡು ಸೋಮೇಶ್ವರ ದೇವಾಲಯಕ್ಕೆ ದಾನ ಮಾಡಿದ ವಿವರಗಳಿವೆ. ಕನ್ನಡ, ಸಂಸ್ಕೃತ ಭಾಷಾ ಪಂಡಿತನಾದ ಈತನ ಅಂಕಿತ ನಾಮ ''ಹರಹರ ಶ್ರೀ ಚನ್ನಸೋಮೇಶ್ವರ'' ಕನ್ನಡದಲ್ಲಿ ರತ್ನಾಕರಂಡಕ ಕಾವ್ಯವನ್ನು ಚಂಪೂವಿನಲ್ಲಿಯು, ಸೋಮೇಶ್ವರ ಶತಕವನ್ನು ವೃತ್ತಛಂದಸ್ಸಿನಲ್ಲಿಯೂ ರಚಿಸಿದ್ದಾನೆ.

**ಶಂಖನಾಥ ಬಸದಿ :**



ಬಾದಾಮಿ ಚಾಲುಕ್ಯರ ಕಾಲಕ್ಕೂ ಮೊದಲೇ ನಿರ್ಮಾಣವಾಗಿರಬಹುದಾದ ಶಂಖನಾಥ ಬಸದಿಯು ಗರ್ಭಗ್ರಹ, ನವರಂಗ ಹಾಗೂ ವಿಶಾಲವಾದ ಮುಖಮಂಟಪ ಹೊಂದಿದೆ. ಗರ್ಭಗ್ರಹವು ಚೌಕಾಕಾರದ ತಳವಿನ್ಯಾಸ ಹೊಂದಿದ್ದು, ಪ್ರಾಚೀನ ಲಕ್ಷಣಗಳುಳ್ಳ ಜೈನ ಪಾಣೀ ಪೀಠದ ಮೇಲೆ ಧ್ಯಾನಮುದ್ರೆಯ ಆಸೀನ ನೇಮೀನಾಥ ತೀರ್ಥಂಕರ ವಿಗ್ರಹವನ್ನು ಇತ್ತೀಚೆಗೆ ೧೯೮೭ರಲ್ಲಿ ಪ್ರತಿಷ್ಠಾಪಿಸಲಾಗಿದೆ. ಗರ್ಭಗ್ರಹದ ಬಾಗಿಲು ವಾಡೆಯ ಇಕ್ಕೆಲಗಳಲ್ಲಿ ಜ್ವಾಲಾಮಾಲಿನಿ ಹಾಗೂ ಇತರ ಯಕ್ಷ ಯಕ್ಷಿಣೀಯರು ನಂತರದ ಕಾಲದ ಚಿತ್ರಗಳಿವೆ. ನವರಂಗದಲ್ಲಿ ಎರಡು ಕೊಠಡಿಗಳನ್ನು ಚಾಲುಕ್ಯ ಶೈಲಿಯ ಪಾಣೀಪೀಠದ ಮೇಲೆ ಪ್ರತಿಷ್ಠಾಪಿಸಲಾಗಿದೆ. ಬಸದಿಯ ಮಹಾದ್ವಾರವು ಚಾಲುಕ್ಯ ಶೈಲಿಯ ವಿಪುಲವಾದ ಅಲಂಕಾರವನ್ನು ಹೊಂದಿದ್ದು ಇಕ್ಕೆಲಗಳಲ್ಲಿ ಜಾಲಂಧ್ರಗಳಿವೆ. ಲಲಾಟದಲ್ಲಿ ಚಾಲುಕ್ಯ ಶೈಲಿಯ ಮುಕ್ಕೋಡೆಯಿರುವ ಜೀನಬಿಂಬವಿದೆ. ಲಕ್ಷ್ಮೇಶ್ವರದ ಅತ್ಯಂತ ಪ್ರಾಚೀನ ಹಾಗೂ ಪ್ರಭಾವೀ ಬಸದಿ ಇದೆ.

**ಜುಮ್ಮಾ ಮಸೀದಿ:**



ಲಕ್ಷ್ಮೇಶ್ವರದ ಮತ್ತೊಂದು ಮಹತ್ವದ ಆಕರ್ಷಕ ವಾಸ್ತು ಶಿಲ್ಪವೆಂದರೆ ಪೇಠಬಣದಲ್ಲಿರುವ ಆದಿಲ್ ಶಾಹಿ ಕಾಲದ ಜುಮ್ಮಾ ಮಸೀದಿ ಬಿಜಾಪುರದ ೨ ನೇ ಇಬ್ರಾಹಿಂ ಆದಿಲ್ ಶಹಾನ ಕಾಲದಲ್ಲಿ ಲಕ್ಷ್ಮೇಶ್ವರದಲ್ಲಿ ಆಡಳಿತಾಧಿಕಾರಿಯಾಗಿದ್ದ ಅಂಕುಷಖಾನನು ಕ್ರಿ.ಶ. ೧೬೧೭ರಲ್ಲಿ ಈ ಬಸದಿಯನ್ನು ನಿರ್ಮಿಸಿದನೆಂದು ದಾಖಲೆ ಇದೆ. ಎತ್ತರವಾದ ಕೋಟೆಯ ಬಾಗಿಲಿನಂತಹ ಮಹಾದ್ವಾರದಿಂದ ಪ್ರವೇಶಿಸಿದರೆ ಎತ್ತರವಾದ ಎರಡು ಮಿನಾರಗಳಿಂದ ಹಾಗೂ ಅರ್ಧಗೋಲಾಕಾರದ ದೊಡ್ಡ ಗೋಪುರದಿಂದ ಇಂಡೋಸಾರ್ಸೆನಿಕ್ ಶೈಲಿಯ ವಾಸ್ತು ರಚನೆಯನ್ನು ಮೈದಳೆದಿರುವ ಭವ್ಯ ಕಟ್ಟಡವಾಗಿದೆ. ವಿಶಾಲವಾದ ಪ್ರಾರ್ಥನಾ ಸ್ಥಳವಿದ್ದು, ಛಾವಣಿಯಲ್ಲಿ ಷಟ್ ಕೋನಾಕೃತಿಯ ಅಂಕಣಗಳಿವೆ. ಇವುಗಳಲ್ಲಿ ಆಳವಾದ ಭುವನೇಶ್ವರಿ ಮಾದರಿಯನ್ನು ಹೋಲುವ ಅಲಂಕಾರವು ಚಿತ್ತಾಕರ್ಷಕವಾಗಿದೆ. ಛಾವಣಿಯ ಶೈಲಿಯ ಅನುಕರಣೆಯಾದ ಕಲ್ಲಿನ ಸರಪಳಿಯು ನಮ್ಮ ಗಮನವನ್ನು ಸೆಳೆಯುತ್ತದೆ. ಮೇಲ್ಭಾಗದಲ್ಲಿರುವ ಗುಮ್ಮಟದ ತಳದಿಂದ ಮೇಲಿರುವ ಕಮಲದ ದಳದ ಅಲಂಕಾರವಿದೆ.

**ದೂದಪೀರಾ ದರ್ಗಾ:**



ಹಲವು ಮಂದಿ ಮಹಾಪುರುಷರನ್ನು ಜನ್ಮವೆತ್ತಿದ ಈ ನಾಡು ನಿಜಕ್ಕೂ ಭಾವೈಕ್ಯತೆಯ ಸಂದೇಶ ಸಾರುವ ಪವಿತ್ರ ಭೂಮಿ. ಅನೇಕ ಮಹಿಮಾ ಪುರುಷರು ಸಂತರು, ಶರಣರು, ದಾಸರು ಹಾಗೂ ಸೂಫಿಗಳು ತಮ್ಮ ಅರ್ಥಪೂರ್ಣ ಸಿದ್ಧಾಂತಗಳ ಮೂಲಕ ಜನಸಮುದಾಯದಲ್ಲಿ ಸೌಹಾರ್ದತೆಯ ಬೀಜ ಬಿತ್ತಿ ಸರ್ವರೂ ಒಂದಾಗಿ ಬಾಳಲು ಒಂದೊಂದು ಸ್ಥಳವನ್ನು ತಮ್ಮ ಕರ್ಮಭೂಮಿಯನ್ನಾಗಿ ಆಯ್ಕೆ ಮಾಡಿಕೊಂಡರು. ಅವುಗಳಲ್ಲಿ ಗದಗ ಜಿಲ್ಲೆಯ

ಲಕ್ಷ್ಮೇಶ್ವರವೂ ಒಂದಾಗಿದೆ. ಲಕ್ಷ್ಮೇಶ್ವರದಲ್ಲಿ ಹಲವು ದೇವಾಲಯ ಮಸೀದಿ, ಬಸದಿಗಳು, ಕೋಟೆ ಕೊತ್ತಲಗಳಿವೆ. ಹೀಗಾಗಿ ಲಕ್ಷ್ಮೇಶ್ವರ ನಗರವು ''ದೇವಾಲಯಗಳ ಬೀಡು, ನಾಡೋಜ ಪಂಪನ ಸಾಂಸ್ಕೃತಿಕ ಕೇಂದ್ರ'' ವೆಂದು ಕರೆಯುತ್ತಾರೆ.

"ಪ್ರೀತಿಗಿಂತ ಮಿಗಿಲಾದ ಧರ್ಮವಿಲ್ಲ'' ಎಂದು ಸಾರುವ ಸೂಫಿ ತತ್ವ ಪ್ರಚಾರಕ್ಕಾಗಿ ತಮ್ಮ ಗುರುವಿನ ಆಜ್ಞೆಯಂತೆ, ಹಜರತ್ ಸೈಯದ ಸಿದ್ದಿಕ್ ಸುಲ್ತಾನ ಬಾದಷಾಹ ಖಾದ್ರಿ ಅವರು ಕ್ರಿ.ಶ. ೧೩೬೪ರಲ್ಲಿ ಲಕ್ಷ್ಮೇಶ್ವರಕ್ಕೆ ಪ್ರಪ್ರಥಮವಾಗಿ ಪಾದಾರ್ಪಣೆ ಮಾಡಿದ ಸೂಫಿಯಾಗಿದ್ದಾರೆ. ಪ್ರಮುಖ ಸಂತರಲ್ಲಿ ಸೌಹಾರ್ದತೆಯ ಸಮರ್ಥ ಪ್ರತಿಪಾದಕರಾಗಿ ಪ್ರಕಾಶ ಮಾನರಾದ, ಭಾವೈಕ್ಯತೆಯ ಹರಿಕಾರ ''ವಿಶ್ವಭ್ರಾತೃತ್ವದ ಸೂಫಿ ಸಂತ ದೂದಪೀರಾಂ'' ಅಗ್ರಮಾನ್ಯರು. ಪವಿತ್ರ ತಪೋಭೂಮಿಯಾದ ಲಕ್ಷ್ಮೇಶ್ವರ ನಗರವು ಮಹಾಯೋಗಿ ದೂದಪೀರಾರವರ ಪಾದ ಸ್ಪರ್ಶದಿಂದ ಪಾವನವಾಗಿದೆ. ದೂದಪೀರಾರವರು ಜನರಲ್ಲಿ ಬಹುದಿನಗಳಿಂದಲೂ ಬೇರೂರಿರುವ ಅಜ್ಞಾನ, ಮೂಢನಂಬಿಕೆ, ದಾರಿದ್ರ್ಯವನ್ನು ದೂರಮಾಡಿ ಮಾನವೀಯ ಮೌಲ್ಯಗಳಿಗೆ ಹೆಚ್ಚು ಒತ್ತು ನೀಡಿದರು.

ಭಕ್ತರ ಇಷ್ಟಾರ್ಥಗಳನ್ನು ಈಡೇರಿಸುವ ದರ್ಗಾ ಎಂದೇ ಹೆಸರಾಗಿದೆ. ಜಿಯಾರತ್ ಗಾಗಿ ಬರುವ ಭಕ್ತರಲ್ಲಿ ಸಂತಾನಫಲ, ದೀರ್ಘಕಾಲದ ಕಾಯಿಲೆ, ಅಲ್ಪಕಾಲದ ಕಾಯಿಲೆ, ಮಾನಸಿಕ ಕಾಯಿಲೆ, ಕೌಟುಂಬಿಕ ಸಮಸ್ಯೆ ಹಾಗೂ ಮಾನಸಿಕ ನೆಮ್ಮದಿಗಾಗಿ ಬರುವ ಭಕ್ತರಿಗೆ ಅತೀ ಶೀಘ್ರವಾಗಿ ಪರಿಹಾರ ದೊರೆತಿರುವ ನಿದರ್ಶನವಿದೆ. ಇಂತಹ ಪವಿತ್ರ ದರ್ಗಾ ಲಕ್ಷ್ಮೇಶ್ವರ ನಗರದಲ್ಲಿದೆ.

**ಮುಕ್ತಿಮಂದಿರ:**



ಲಕ್ಷ್ಮೇಶ್ವರ ನಗರದಿಂದ ೪ ಕಿ.ಮಿ. ಅಂತರದಲ್ಲಿರುವ ಪವಿತ್ರ ಕ್ಷೇತ್ರವೇ ಮುಕ್ತಿಮಂದಿರ. ಬಾಳೆಹೊನ್ನೂರಿನ ರಂಭಾಪುರಿ ಪೀಠದ ಲಿಂಗೈಕ್ಯ ರೇಣುಕ ವೀರಗಂಗಾಧರಸ್ವಾಮಿಗಳು ೧೯೪೦ರಲ್ಲಿ ಈ ಪ್ರದೇಶದಲ್ಲಿ ವಾಸಿಸಲು ಆರಂಭಿಸಿ ಅಲ್ಲಿದ್ದ ಕಾಡನ್ನು ಕಡಿದು ಕೃಷಿ ಮಾಡಿ ದೀನ ದಲಿತರಿಗೆ ಕೃಷಿ ಉತ್ಪನ್ನಗಳನ್ನು ನೀಡುತ್ತಿದೆ. ಜೊತೆಗೆ ಧರ್ಮದ ಸಂದೇಶವನ್ನೂ ಸಹ ನೀಡುತ್ತದೆ. ಇವರ ಕಾಯಕ ಭೂಮಿಯು ತಪೋವನವಾಗಿ ರೂಪಾಂತರಗೊಂಡಿದೆ. ಇವರು ಎಲ್ಲಾ ಧರ್ಮಗಳು ಒಂದೇ ಮತ್ತು ಅವುಗಳು ಮುಕ್ತಿಯನ್ನು ನೀಡುತ್ತವೆ. ''ಮಾನವ ಧರ್ಮಕ್ಕೆ ಜಯವಾಗಲಿ, ಧರ್ಮದಿಂದಲೇ ವಿಶ್ವಕ್ಕೆ ಶಾಂತಿ'' ಎಂಬ ಮಂತ್ರವನ್ನು ಜನರಲ್ಲಿ ಬಿತ್ತಿದರು. ಎಲ್ಲಾ ಧರ್ಮಗಳನ್ನು ಪ್ರತಿನಿಧಿಸುವಂತೆ ಮುಕ್ತಿ ಮಂಟಪವನ್ನು ನಿರ್ಮಿಸಲಾಗಿದೆ. ಈಗ ತ್ರಿಕೋಟಿ ಲಿಂಗಗಳನ್ನು ಸ್ಥಾಪಿಸಲಾಗಿದೆ.

೧೯ನೇ ಶತಮಾನದಲ್ಲಿದ್ದ ಸಂತ ಶಿಶುನಾಳ ಶರೀಫರು ಈ ಭಾಗದಲ್ಲಿ ಸಂಚರಿಸುವಾಗ ಒಂದೆಡೆ ಕುಳಿತು ಚಿಲುಮೆ ಸೇದುವಾಗ ಅದರಿಂದ ಹರಳು ಜಾರಿ ಬಿತ್ತು ಹರಳಿಗೆ ಎರಡು ಕಲ್ಲುಗಳನ್ನು ಇಟ್ಟು ಗುಡಿಯನ್ನು ನಿರ್ಮಿಸಿ ಪ್ರಸಿದ್ಧಿಯನ್ನು ಹೊಂದು ಎಂದು ಆಶೀರ್ವದಿಸಿದ್ದರಿಂದ ಈ ಸ್ಥಳವು ಧಾರ್ಮಿಕ ಕ್ಷೇತ್ರವಾಗಿ ಬೆಳೆಯಿತು ಎನ್ನುವುದು ಇಲ್ಲಿಯ ಜನರ ನಂಬಿಕೆಯಾಗಿದೆ. ಮುಕ್ತಿಮಂದಿರವು ಕುಂದಗೋಳ ತಾಲೂಕಿನ ಹರ್ಲಾಪುರ ಸಮೀಪದ ಗ್ರಾಮವಾಗಿದೆ. ಪ್ರಸ್ತುತ ಜಗದ್ಗುರು ವಿಮಲ ರೇಣುಕ ಸ್ವಾಮಿಯವರ ನೇತೃತ್ವದಲ್ಲಿ ಇಲ್ಲಿ ಧರ್ಮ ಪ್ರಚಾರ ಕಾರ್ಯ ಮುಂದುವರೆದಿದೆ.

# ರೋಣ ತಾಲ್ಲೂಕು

**ಐತಿಹಾಸಿಕ ಹಿನ್ನೆಲೆ :**

ರೋಣ ತಾಲೂಕು ಪ್ರಾಚೀನ ಕಾಲದಿಂದಲೂ ಪ್ರಸಿದ್ಧ ಅರಸು ಮನೆತನಗಳ ಆಡುಂಬೋಲವಾಗಿದ್ದಿತು, ಸುಖಸಮೃದ್ಧಿಗಳ ತೌರಾಗಿದ್ದಿತು. ರೋಣ ತಾಲೂಕಿನ ಇತಿಹಾಸದ ಮೇಲೆ ಬೆಳಕು ಚೆಲ್ಲುವ ಬದಾಮಿ ಚಾಲುಕ್ಯರ, ರಾಷ್ಟ್ರಕೂಟರ, ಕಲ್ಯಾಣದ ಚಾಲುಕ್ಯರ, ಕಳಚೂರ್ಯರ, ಯಾದವರ, ಹೊಯ್ಸಳರ ಮತ್ತು ವಿಜಯನಗರ ಅರಸರ ಕಾಲಕ್ಕೆ ಸೇರಿದ ಸುಮಾರು ೧೦೦- ೧೫೦ ಕ್ಕೂ ಹೆಚ್ಚು ಶಿಲಾಶಾಸನಗಳು ಹಾಗೂ ವೀರಗಲ್ಲುಗಳು ಗರುಡಗಲ್ಲುಗಳು ಮಹಾಸತಿಕಲ್ಲುಗಳು, ಕೀಳ್ಗುಂಟಿಗಳು ಕಂಡು ಬರುತ್ತವೆ. ಶಾಸನಗಳ ಪ್ರಕಾರ ರೋಣ ತಾಲೂಕು ಹಿಂದೆ ಬೆಳ್ವೊಲ-೩೦೦ ಮತ್ತು ಕಿಸುಕಾಡು-೭೦ (ಸುಳ್ಳಾಟಿವಿ- ೭೦) ರ ಹಲವು ಭಾಗಗಳನ್ನು ಒಳಗೊಂಡಿದ್ದಿತು. ‘‘ಬೆಳ್ವೊಲ’’ ಎಂದರೆ ಬೆಳೆವ ಹೊಲ ಅಥವಾ ಫಲವತ್ತಾದ ಭೂಮಿ ಎಂದರ್ಥ. ಬೆಳ್ವಲನಾಡಲ್ಲಿ ರೋಣ, ಕೌಜಗೇರಿ, ಬೆಳ್ವಣಕಿ-೧೨, ನರೆಯಂಗಲ್ಲು-೧೨, ಜಕ್ಕಲಿ, ಸವಡಿ, ಅಬ್ಬಿಗೇರಿ, ಮೊದಲಾದ ಗ್ರಾಮಗಳು ಸೇರಿದ್ದವು. ‘‘ಕಿಸುಕಾಡು’’ ಎಂದರೆ ಕೆಂಪು ಭೂಮಿ ಎಂದರ್ಥ. ಕಿಸುನಾಡಲ್ಲಿ ಇಟ್ಟಿಗೆ, ಕಳ್ಳಮನಪಳ್ಳಿ, ನಿಡಗುಂದಿ, ಅಲಂಗೆರೆ, ಕಿರಿಯ ನರೆಯಂಗಲ್ಲು (ಕೋಡಿಕೊಪ್ಪ) ಮೊದಲಾದ ಗ್ರಾಮಗಳು ಸೇರಿದ್ದವು.

**ಸಾಹಿತ್ಯ ಸಂಸ್ಕೃತಿಯ ಪರಂಪರೆ :**

ರೋಣ ತಾಲೂಕು ನಾಡು, ನುಡಿ, ಸ್ವಾತಂತ್ರ್ಯ ಹೋರಾಟ, ಮತಧರ್ಮ, ಶಿಕ್ಷಣ, ಸಾಹಿತ್ಯ, ಶಿಲ್ಪಕಲೆ, ಸಂಸ್ಕೃತಿ, ಕ್ರೀಡೆ, ಹೀಗೆ ಹತ್ತು ಹಲವು ರಂಗಗಳಲ್ಲಿ ತನ್ನ ಶ್ರೀಮಂತಿಕೆಯನ್ನು ಮೆರೆದಿದೆ. ಕ್ರಿ.ಶ. ೧೧೧೧ರ ಶಾಸನದಲ್ಲಿನ ‘‘ವಾಕ್‌ಶ್ರೀ ರಮಣೀ ರಮಣರಿರ್ಪ ___________ ಧರಣೀ ವನಿತೆಯ ಹಾರಂ ರೋಣಾಗ್ರಹಾರಂ’’ ಎಂಬ ಉಲ್ಲೇಖವು ನಮ್ಮ ಪೂರ್ವಿಕರ ಸಾಹಿತ್ಯ, ಸಂಸ್ಕೃತಿಯ, ಶ್ರೀಮಂತಿಕೆಗೆ ಹಿಡಿದ ಕನ್ನಡಿಯಾಗಿದೆ.

೧೧ನೇ ಶತಮಾನದ ಕರ್ನಾಟಕ ಪಂಚತಂತ್ರದ ಕವಿ ದುರ್ಗಸಿಂಹನಿಂದ ಹಿಡಿದು ಇಲ್ಲಿಯವರೆಗೆ ‘ಪಂಡಿತ’ ‘ವಿದ್ಯಾರತ್ನ’ ‘ವಿದ್ಯಾಭೂಷಣ‘ಪಂಪಪ್ರಶಸ್ತಿ’,‘ರಾಜ್ಯ ಮತ್ತು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ‘ಪಡೆದ ಹಲವು ವಿದ್ವಾಂಸರ ನೆಲೆಬೀಡಾಗಿದ್ದು’.

ನರೇಗಲ್‌ನ ಶಿವಬಸಪ್ಪಶಾಸ್ತ್ರಿ, ದಿವಂಗತ ರಾಮಭಟ್ಟ ಪುರೋಹಿತ ‘ಭವ್ಯಮಾನವ’ ಆಧುನಿಕ ಮಹಾಕಾವ್ಯದ ಕವಿ ದಿ. ಸಂ. ಶಿ. ಭೂಸನೂರಮಠ, ಶಾಂತಕವಿಗಳು, ‘ವಿದ್ಯಾರತ್ನ’ – ‘ವಿದ್ಯಾಭೂಷಣ’ ದಿ.ಎಸ್.ಪಂಚಮುಖಿ, ದಿ.ಪಂಡಿತ ಬಸವರಾಜ ಶಾಸ್ತ್ರಿ ಕೋಡಿ ಕೊಪ್ಪಮಠ, ‘ಕನ್ನಡ ಸಾಹಿತ್ಯ ಚರಿತ್ರೆ’ ಬರೆದ ರಸಿಕರಂಗ ಕಾವ್ಯನಾಮದ ರಂ. ಶ್ರೀ ಮುಗಳಿ, ಕರ್ನಾಟಕದ ಏಕೀಕರಣದ ರೂವಾರಿ ಜಕ್ಕಲಿಯ ದಿ. ಅಂದಾನಪ್ಪ ದೊಡ್ಡಮೇಟಿ, ಕರ್ನಾಟಕ ಕುಲಪುರೋಹಿತ ದಿ ಆಲೂರು ವೆಂಕಟರಾಯರು, ಪ್ರಖ್ಯಾತ ಭಾಷಾ ಶಾಸ್ತ್ರಜ್ಞ ಅರ್. ಸಿ. ಹಿರೇಮಠ,ಜನಪದ ಸಾಹಿತಿ ಡಾ|| ಸೋಮಶೇಖರ ಇಮ್ರಾಪುರ ಪ್ರಖ್ಯಾತ ಡಾ|| ಗಿರಡ್ಡಿ ಗೋವಿಂದರಾಜ, ಡಾ. ಬಿ.ವಿ.ಮಲ್ಲಾಪೂರ, ಶ್ರೀ ಎ.ಎಸ್.ಹಿರೇಮಠ, ಶಿಶುಸಾಹಿತಿ ಎಂ. ಡಿ. ಗೋಗೇರಿ ಚುಟುಕು ಕವಿ ಜಿ.ಎಸ್ ಅನ್ನದಾನಿ, ಉತ್ತರ ಕರ್ನಾಟಕದ ಪ್ರಥಮ ಕಾದಂಬರಿಕಾರ ಗೂಳಪ್ಪ ಕೊಟ್ರಪ್ಪ ಅರಳಿ ಜಾನಪದ, ಲಾವಣೀ, ಗೀಗೀ ಪದ ಹಾಡುವ ಮಾಳವಾಡದ ಮಲ್ಲಯ್ಯ ರಾಚಯ್ಯ ತೋಟಗಂಟಿ ಇನ್ನೂ ಮುಂತಾದ ಸಾರಸ್ವತ ಪುತ್ರರತ್ನರ ಪುಣ್ಯ ಭೂಮಿಯಾಗಿದೆ.

**ರೋಣ**

**ಜಿಲ್ಲೆ ४೫ ಕಿ.ಮೀ.**

**ಪುರಾಣ ಇತಿಹಾಸ :**

ಪ್ರಾಚೀನ ಕಾಲದಲ್ಲಿ ಪುಲಿಗೆರೆ-೩೦೦ ಕ್ಕೆ ಸೇರಿದ್ದ ರೋಣವು ೧೦೪ ಮಹಾಜನರನ್ನೊಳ ಗೊಂಡ ಅಗ್ರಹಾರವಾಗಿತ್ತು. ಹಿಂದೆ ಮಹಾಭಾರತದ ದ್ರೋಣಾಚಾರ್ಯರು ಇಲ್ಲಿ ಗುರುಕುಲ ನಡೆಸುತ್ತಿದ್ದರಿಂದಾಗಿ ಈ ಊರಿಗೆ 'ದ್ರೋಣಪುರವೆಂದು ಹೆಸರು ಬಂತೆಂದು ಐತಿಹ್ಯ. ಇಲ್ಲಿಯ ಕಂಚಿಯವರ ಓಣಿಯಲ್ಲಿರುವ ಗುಡಿಯನ್ನು ಸ್ಥಳೀಕರು ಇಂದಿಗೂ ದ್ರೋಣಾಚಾರ್ಯ ಗುಡಿಯೆಂದು ಕರೆಯುತ್ತಾರೆ. ಆದರೆ ಶಾಸನಗಳಲ್ಲಿ ಮಾತ್ರ ರೋಣವನ್ನು 'ರೋಣ' 'ಮಹಾ ಅಗ್ರಹಾರ ರೋಣ' ಉಖಿಸಲಾಗಿದೆ. ಈ ಊರಿಂದ ಈ ವರೆಗೆ ರಾಷ್ಟ್ರಕೂಟರ, ಕಲ್ಯಾಣದ ಚಾಲುಕ್ಯ, ಕಲಚೂರಿಗಳ ಕಾಲಕ್ಕೆ ಸೇರಿದ ೧೭ ಶಾಸನಗಳು ವರದಿಯಾಗಿವೆ.

**ಅನಂತಶಯನ ಗುಡಿ ಹಾಗೂ ಪಾರ್ಶ್ವನಾರ್ಥ ಬಸದಿ:**



ಅನಂತಶಯನ ಗುಡಿ ಗರ್ಭಗೃಹ ಹಾಗೂ ಸಭಾಮಂಟಪವನ್ನು ಹೊಂದಿದ್ದು, ಇಲ್ಲಿ ಅನಂತಶಯನನ ಸುಂದರ ಮೂರ್ತಿ ಇದೆ. ಈ ಗುಡಿಯ ಪ್ರವೇಶದ್ವಾರದಲ್ಲಿ ಗಜಲಕ್ಷ್ಮಿಯಿದೆ. ಇದು ಕೂಡಾ ಕ್ರಿ.ಶ. ೧೨ನೇ ಶತಮಾನದಲ್ಲಿ ರಚನೆ ಯಾಗಿದೆ. ಪಾರ್ಶ್ವನಾಥ ಬಸದಿ ಕಲ್ಯಾಣ ಚಾಲುಕ್ಯರ ಕಾಲದ್ದು, ಚಾಲುಕ್ಯ ಶೈಲಿಯ ಬಾಗಿಲುವಾಡಗಳು ಹಾಗೂ ಸ್ಥಂಭಗಳನ್ನಿಲ್ಲಿ ಕಾಣಬಹುದು. ಗರ್ಭಗೃಹದಲ್ಲಿ ಪಾರ್ಶ್ವನಾಥ ತೀರ್ಥಂಕರನ ಶಿಲ್ಪವಿದ್ದು ಅದರ ಪಾದಪೀಠದ ಮೇಲೆ "ಮೂಲ ಸಂಘದ ದೇವಗಣ" ಎಂದು ಆರಂಭವಾಗುವ ಕಿರು ಶಾಸನವಿದೆ.

**ಪ್ರೇಕ್ಷಣೀಯ ಬಾವಿಗಳು::**



ರೋಣದ ಗೌಡರ ಬಾವಿ ಹಾಗೂ ಶೆಟ್ಟರ ಭಾವಿಗಳು ಆಕರ್ಷಕವಾಗಿದೆ. ಈ ಬಾವಿಗಳಲ್ಲಿ ಚಿಕ್ಕ ಈಶ್ವರ, ನಂದಿ, ಗಣಪತಿ ಕೆತ್ತನೆಗಳಿದ್ದು, ಕೆಳಗಿಳಿಯಲು ಸೋಪಾನಗಳಿ.. ಶೆಟ್ಟರ ಬಾವಿಯಲ್ಲಿರುವ ಶಾಸನದಿಂದ ಇದು ಕ್ರಿ.ಶ. ೧೨ ನೇ ಶತಮಾನದ್ದು ಎಂದು ಗೊತ್ತಾಗುತ್ತದೆ. ಶೆಟ್ಟರ ಬಾವಿಯಲ್ಲಿ ಉಗ್ರ ನರಸಿಂಹ, ಗಣಪತಿ, ನಂದಿ, ಮಹಿಷಂಮರ್ದಿನಿ ಹಾಗೂ ಮಿಥುನ ಉಬ್ಬುಶಿಲ್ಪಗಳ ಕೆತ್ತನೆಗಳಿವೆ.

**ಜಲಶುದಾಗಾರ:**

ರೋಣ-ಬದಾಮಿ ರಸ್ತೆಯಲ್ಲಿರುವ ಜಲಶುದ್ಧಾಗಾರವು ಕಲುಷಿತ ನೀರನ್ನು ಕುಡಿಯುವ ನೀರಾಗಿ ಶುದ್ಧೀಕರಿಸುವ ಜಲಾಗಾರವಾಗಿದೆ. ಇದು ಆಧುನಿಕ ತಂತ್ರಜ್ಞಾನ ಬಳಸಿ ನೀರನ್ನು ಶುದ್ಧೀಕರಿಸುವ ಮಾಹಿತಿಯನ್ನು ಪರಿಚಯಿಸುವ ಮೂಲಕ ವಿದ್ಯಾರ್ಥಿಗಳ ಜ್ಞಾನ ತೃಷೆಯನ್ನು ತಣಿಸಬಲ್ಲ ಸ್ಥಳವಾಗಿದೆ.

**ಸೂಡಿ**

ಜಿಲ್ಲೆ: ೫೮ ಕಿ.ಮೀ.

ತಾಲೂಕ: ೧೯ ಕಿ.ಮೀ.

ಸೂಡಿಯು ರೋಣದಿಂದ ಈಶಾನ್ಯಕ್ಕೆ ಗಜೇಂದ್ರಗಡ ರಸ್ತೆಯ ಮಾರ್ಗದಲ್ಲಿ ಬರುತ್ತದೆ. ಪ್ರಾಚೀನ ಶಾಸನಗಳಲ್ಲಿ "ಸೂಂಡಿ" ಎಂದೇ ಉಲ್ಲೇಖಿತಗೊಂಡ ಈ ಐತಿಹಾಸಿಕ ಪ್ರಸಿದ್ಧಿಯ ಊರನ್ನು ಪ್ರವೇಶಿಸುವಾಗ ದೂರದಿಂದಲೇ ಕಾಣುವ ಸುಂದರವಾದ ಪುರಾತನ ದೇವಾಲಯಗಳು ಮತ್ತು ಎತ್ತರವಾದ ಹುಡೆ ನಿಮ್ಮನ್ನು ಆಕರ್ಷಿಸುತ್ತವೆ.

೧೧ನೇಯ ಶತಮಾನದಲ್ಲಿ ಸೂಡಿಯು ಕಲ್ಯಾಣ ಚಾಲುಕ್ಯ ಅರಸರ ಮಗಳಾದ ಹಾಗೂ ೫ನೇ ವಿಕ್ರಮಾದಿತ್ಯನ ತಂಗಿಯೂ ಇಮ್ಮಡಿ ಜಯಸಿಂಹನ ಅಕ್ಕನೂ, "ರಣಭೈರವಿ" ಎಂಬ ಬಿರುದನ್ನು ಹೊಂದಿದ 'ಅಪ್ರತಿಮ ಮಹಿಳೆ' ಅಕ್ಕಾದೇವಿಯು ಕ್ರಿ.ಶ. ೧೦೫೦ ರಲ್ಲಿ ಕಿಸುನಾಡು-೭೦, ಅಮಾಸವಾಡಿ-೧೪೦ ರ ಭಾಗಗಳನ್ನು ಆಳುತ್ತಿದ್ದಳೆಂದು ಶಾಸನಗಳಿಂದ ತಿಳದುಬರುತ್ತದೆ. ಇವಳ ಆಡಳಿತಕಾಲದಲ್ಲಿ ಸೂಡಿ ವಿದ್ಯಾಭ್ಯಾಸಕ್ಕೆ ಪ್ರಸಿದ್ಧಿ ಪಡೆದಿತ್ತು. ರಾಷ್ಟ್ರಕೂಟರ ಕಾಲದ ಶಾಸನವೊಂದರಿಂದ ಪುಲಿಗೆರೆಯ ಬದ್ದೆಗನು ಮೂರ್ತಿ ಶಿವಾಚಾರ್ಯ ಹಾಗೂ ೭೦ ಮಹಾಜನರ ಸನ್ನಿಧಿಯಲ್ಲಿ ಸೂಡಿಯ ಬ್ರಾಹ್ಮಣಕೇರಿಗೆ 'ಬ್ರಹ್ಮಪುರಿ' ಎಂದು ನಾಮಕರಣ ಮಾಡಿದನೆಂದು ತಿಳಿದುಬರುತ್ತದೆ. ಇಲ್ಲಿಯ ವಿಶ್ವವಿದ್ಯಾನಿಲಯದಲ್ಲಿ ಶಿಲ್ಪಕಲೆ, ಲಲಿತಕಲೆ, ಅಚಾರಸಂಹಿತೆ, ನಾಟ್ಯಶಾಸ್ತ್ರ, ಭಾಷಾ ಅಧ್ಯಯನ ಕಲಿಸಲಾಗುತ್ತಿತ್ತೆಂದು ತಿಳಿದು ಬಂದಿದೆ. ಅಲ್ಲದೇ ೬ ನೇ ವಿಕ್ರಮಾದಿತ್ಯನ ಕಾಲದಲ್ಲಿ ಇಲ್ಲಿ ಪ್ರಸಿದ ಟಂಕಶಾಲೆ (ಕಮ್ಮಟ) ಇದ್ದು, ಇದರ ಅಧಿಕಾರಿ ಇವನೇ ಆಗಿದ್ದನೆಂದು ತಿಳಿದುಬಂದಿದೆ. ಈ ವರೆಗೆ ಇಲ್ಲಿಂದ ೧೬ ಶಾಸನಗಳು ವರದಿಯಾಗಿವೆ.

**ಜೋಡುಕಳಸದ ಗುಡಿ (ನಾಗೇಶ್ವರ ದೇವಸ್ಥಾನ)**



ಈ ಊರ ಹೊರ ವಲಯದಲ್ಲಿ ಗಜೇಂದ್ರಗಡ ರಸ್ತೆಯಲ್ಲಿ ಕಾಣುವ ಕೆಂಪು ಕಲ್ಲಿನಿಂದ ಕೆತ್ತಿದ ಗುಡಿಯೇ ಜೋಡು ಕಳಸದೇವರ ಗುಡಿ, ಹೆಸರೇ ಸೂಚಿಸುವಂತೆ ಎರಡು ಕಳಶಗಳನ್ನುಳ್ಳ ದ್ವಿಕೂಟವಾಗಿದ್ದು ಇದನ್ನು ಒಂದನೆಯ ಸೋಮೇಶ್ವರನ ದಂಡನಾಯಕ ನಾಗದೇವರು ಕ್ರಿ.ಶ. ೧೦೬೧ ರಲ್ಲಿ ನಿರ್ಮಿಸಿ ಭೂದಾನ ಮಾಡಿದ ಅಂಶವನ್ನು ಅಲ್ಲೇ ಇರುವ ಶಾಸನ ಹೇಳುತ್ತಿದೆ. ಇದನ್ನು ನಾಗೇಶ್ವರ ದೇವಾಲಯವೆಂದು ಕರೆದಿದೆ.

**ಚತುರ್ಭಜಾಧಾರಿ ಗಣೇಶ**



ಊರ ಪ್ರದೇಶದ ಇರುವ ಗಣೇಶಗುಡಿ ಗರ್ಭಗೃಹವನ್ನಷ್ಟೇ ಹೊಂದಿದ್ದು ಉಳಿದ ಭಾಗಗಳು ಹಾಳಾಗಿವೆ. ಸುಮಾರು ಒಂಬತ್ತು ಅಡಿ ಎತ್ತರವಿರುವ ಆಸೀನ ಗಣೇಶ ಮೂರ್ತಿಯು ಚತುರ್ಭುಜಾಧಾರಿಯಾಗಿದ್ದು ವಿನೂತನವೂ, ಬಹು ಸುಂದರವೂ ಆಗಿದೆ. ಇದು ಹಂಪೆಯ ಕಡಲೆಕಾಳು, ಸಾಸಿವೆಕಾಳು ನೆನಪಿಸುವಂತಿದೆ.

**ಕಲಾತ್ಮಕ ನಾಗರಕುಂಡಬಾವಿ (ರಸದ ಬಾವಿ)**



ಗಣೇಶ ಗುಡಿಯ ಬಳಿಯಲ್ಲೇ ೮೦ ಅಡಿ ಆಳದ ಭವ್ಯವಾದ ನಾಗರಭಾವಿ (ರಸದ ಭಾವಿ) ಇದೆ. ಮೂರು ಹಂತದಲ್ಲಿರುವ ಈ ಚೌಕಾಕಾರದ ಹೊಂಡಕ್ಕೆ ಪಶ್ಚಿಮದಲ್ಲಿ ಇಳಿಯಲು ಸೋಪಾನವಿದೆ. ಈ ಭಾವಿಯ ಮೂರು ಪಾರ್ಶ್ವದ ಭಿತ್ತಿಯ ಒಳಮುಖದ ಮೇಲೆ ಇರುವ ಕಿರು ಶಿಖರ ಮಾದರಿಗಳ ರಚನೆ ಹಾಗೂ ಅಲಂಕಾರಿಕ ಕಂಬಗಳ ಕೆತ್ತನೆಗಳು ಕಲಾತ್ಮಕತೆಯ ಆಗರವಾಗಿವೆ. ಬಾವಿಯ ಪಾರ್ಶ್ವ ಭಿತ್ತಿಯ ಒಳಮೈಮೇಲಿನ ಈ ಕೆತ್ತನೆಗಳು, ದೇವಾಲಯದ ಭಿತ್ತಿಯನ್ನು ಹೋಲುವಷ್ಟು ಮೀರಿಸುವಷ್ಟು ಸುಂದರವಾಗಿವೆ. ಇದೇ ಆವರಣದಲ್ಲಿದ್ವಾರ ಪಾಲಕ, ನಂದಿ ಶಿವಲಿಂಗ ಮೂರ್ತಿಗಳಿವೆ.

**ಮಲ್ಲಿಕಾರ್ಜನ ಗುಡಿ:**



ಊರ ನಡುವೆ ಪೂರ್ವಾಭಿಮುಖವಾಗಿರುವ ಮಲ್ಲಿಕಾರ್ಜುನ ದೇವಾಲಯವಿದೆ. ತ್ರಿಕೂಟಾಚಲವಾದ ಈ ಗುಡಿಯ ಅಷ್ಟಕೋನಾಕಾರದ ಗರ್ಭಗೃಹದಲ್ಲಿ ಶಿವಲಿಂಗವಿದೆ. ಅರ್ಧಮಂಟಪದಲ್ಲಿ ನಂದಿಯಿದ್ದು, ತ್ರಿಮೂರ್ತಿ ಕೆತ್ತನೆಯಿರುವ ಆಕರ್ಷಕವಾದ ಮಕರ ತೋರಣವಿದೆ. ದಕ್ಷಿಣದ ಗರ್ಭಗೃಹದಲ್ಲಿ ಆಭರಣಾಲಂಕೃತ ಶೇಷಶಯನ ಪದ್ಮನಾಭನ ಸುಂದರ ಶಿಲ್ಪವಿದ್ದು, ಇದರ ಪ್ರಭಾವಳಿಯಲ್ಲಿ ದಶಾವತಾರದ ಕೆತ್ತನೆಗಳಿವೆ. ಉತ್ತರದ ಗರ್ಭಗೃಹದಲ್ಲಿ ಸ್ಥಾನಿಕ ಉಮಾ ಮಹೇಶ್ವರ ಶಿಲ್ಪವಿದೆ. ನಂದಿಯನ್ನು ಬಲಕ್ಕೂ ಕಾರ್ತಿಕೇಯ, ಗಣಪತಿಗಳನ್ನು ಎಡಬದಿಯಲ್ಲೂ ಕೆತ್ತಲಾಗಿದ್ದು, ಇವು ಕೂಡಾ ಸುಂದರವಾದ ಶಿಲ್ಪವಾಗಿವೆ. ಈ ಗುಡಿಯು ಎತ್ತರವಾದ ವೇದಿಕೆ ಮೇಲಿದ್ದು ಇದರ ಎಡಬದಿಯಲ್ಲಿ ಗಣಪತಿಯ ಚಿಕ್ಕಗುಡಿಯಿದೆ. ಇದರ ಶಿಖರ ದ್ರಾವಿಡಶೈಲಿಯಲ್ಲಿದ್ದು ಹೊರಭಿತ್ತಿಯಲ್ಲಿ ಅಲ್ಪ ಅಲಂಕಾರವಿದೆ.

**ಹುಡೆ (ಬತೇರಿ)**

ಊರ ಮಧ್ಯದಲ್ಲಿ ದೀರ್ಘ ವ್ಯಾಸವುಳ್ಳ ವೃತ್ತಾಕಾರದ ಅತೀ ಎತ್ತರವಾದ ಒಂದು ಹುಡೆ ಇದೆ. ಇದರ ಮೇಲಿನಿಂದ ಸುತ್ತಲಿನ ಹತ್ತಿಪ್ಪತ್ತು ಮೈಲು ದೂರದವರೆಗೆ ನೋಡಬಹುದು. ಇವುಗಳೊಂದಿಗೆ ಊರಲ್ಲಿ ನಗರೇಶ್ವರ, ಲಕ್ಷ್ಮೀನರಸಿಂಹ, ನಾರಾಯಣ, ಬಸವಣ್ಣ ಮುಂತಾದ ಪ್ರಾಚೀನ ಗುಡಿಗಳಿದ್ದು ಶಿಥಿಲಾವಸ್ಥೆಯಲ್ಲಿವೆ.

**ಇಟಗಿ**

ಜಿಲ್ಲೆ : ೫೮ ಕಿ.ಮೀ.

ತಾಲೂಕ : ೧೩ ಕಿ.ಮೀ.

ರೋಣ ತಾಲೂಕಿನ ಇಟಗಿ ರೋಣದಿಂದ ಈಶಾನ್ಯಕ್ಕೆ ೧೩ ಕಿ.ಮೀ. ದೂರದಲ್ಲಿದೆ. ಈ ಊರು ಪ್ರಾಚೀನ ಶಾಸನಗಳಲ್ಲಿ 'ಯಿಟ್ಟಿಗೆ' 'ಇಟ್ಟಿಗೆ' ಎಂದೇ ಉಲ್ಲೇಖಗೊಂಡಿದ್ದು, ಹಿಂದೆ ಕಿಸುಕಾಡು-೭೦ ಕ್ಕೆ ಸೇರಿದ ಮಹಾ ಅಗ್ರಹಾರವಾಗಿತ್ತು. ಈ ಊರಿಂದ ಈ ವರೆಗೆ ಎರಡು ಶಾಸನಗಳು

ವರದಿಯಾಗಿವೆ. ನಿಷಿಧಿ ಶಾಸನದಿಂದ, ಇದೊಂದು ಜೈನಕೇಂದ್ರವೂ ಆಗಿತ್ತೆಂಬ ಅಂಶ ಮೊದಲ ಬಾರಿಗೆ ಬೆಳಕಿಗೆ ಬಂದಂತಾಗಿದೆ. ಶಾಸನಗಳಿಂದ ಇಟಗಿಯಲ್ಲಿ ಸ್ವಯಂಭು ಸಿದ್ಧೇಶ್ವರ, ಮತ್ತು ರಾಜೇಶ್ವರಿ ದೇವಾಲಯಗಳಿದ್ದವೆಂಬ ಅಂಶ ಗೊತ್ತಾದರೂ ಇಂದು ಉಳಿದಿರುವದು ಶಂಭುಲಿಂಗ ದೇವಾಲಯ ಒಂದೇ.

**ಶಂಭುಲಿಂಗ ದೇವಾಲಯ:**



ಶಾಸನದಲ್ಲಿ ಸ್ವಯಂಭು ದೇವಾಲಯವೆಂದೇ ಕರೆದಿರುವ ಇಂದಿನ ಶಂಭುಲಿಂಗ ದೇವಾಲಯ ಕ್ರಿ.ಶ. ೧೦೫೪ ರಲ್ಲಿ ಶ್ರೀಧರ ದಂಡನಾಯಕನಿಂದ ನಿರ್ಮಾಣಗೊಂಡಿದ್ದು ಚಾಲುಕ್ಯ ಶೈಲಿಯ ಸುಂದರ ದೇವಾಲಯವಾಗಿದೆ. ಕೆರೆಯ ದಂಡೆಯ ಮೇಲಿರುವ ಈ ಗುಡಿ ಪೂರ್ವಾಭಿಮುಖವಾಗಿದ್ದು ಗರ್ಭಗೃಹ, ಅಂತರಾಳ ನವರಂಗ ಹಾಗೂ ಸಭಾಮಂಟಪವನ್ನು ಹೊಂದಿದೆ. ಗರ್ಭಗೃಹದಲ್ಲಿ ಸ್ವಯಂಭು ಲಿಂಗವಿದೆ. ಇದರ ಬಾಗಿಲವಾಡವು ತ್ರೀಶಾಲಂಕೃತವಾಗಿದ್ದು, ಲಲಾಟದಲ್ಲಿ ಗಜಲಕ್ಷ್ಮಿಯಿದೆ. ಅಂತರಾಳದ ದ್ವಾರ ಬಂಧ ಪಂಚಶಾಖಾಲಂಕಾರವನ್ನು ಹೊಂದಿದ್ದು, ಇಕ್ಕೆಲದಲ್ಲಿ ಜಾಲಂದ್ರವಿದೆ. ನವರಂಗದಲ್ಲಿರುವ ದೇವಕೋಷ್ಟಗಳಲ್ಲಿ ಶಿವಪಾರ್ವತಿ, ಮಹಿಷಾಸುರಮರ್ದಿನಿ, ಕಾರ್ತಿಕೇಯ ಮತ್ತು ಆದಿತ್ಯನ ಸುಂದರ ಬಿಡಿ ಶಿಲ್ಪಗಳಿವೆ. ನವರಂಗದ ಪ್ರವೇಶದ್ವಾರವು ಪಂಚಶಾಖಾಲಂಕೃತವಾಗಿದ್ದು. ಆಕರ್ಷಕವಾಗಿದೆ. ನಕ್ಷತ್ರಾಕಾರವಾಗಿರುವ ಈ ಗುಡಿಯ ಸಭಾಮಂಟಪವನ್ನು ಆರು ಮಾದರಿಯ ಸ್ತಂಭಗಳು ಹೊತ್ತುನಿಂತಿದ್ದು ಇಳಿಜಾರಾದ ಛಾವಣಿಯನ್ನು ಹೊಂದಿದೆ. ಸಭಾಮಂಟಪದ ಅಂಚಿನುದ್ದಕ್ಕೂ ಕಕ್ಷಾಸನವನ್ನು ರಚಿಸಲಾಗಿದೆ. ಸಭಾಮಂಟಪಕ್ಕೆ ಮೂರು ದಿಕ್ಕಿನಿಂದಲೂ ಮುಖಮಂಟಪವಿರುವ ಪ್ರವೇಶದ್ವಾರಗಳಿವೆ. ಗುಡಿಯ ಹೊರಭಿತ್ತಿ ನಿರಾಡಂಬರವಾಗಿದ್ದು, ಗರ್ಭಗೃಹಕ್ಕೆ ಸುಂದರವಾದ ಕದಂಬನಾಗರ ಶಿಖರವಿದೆ.

**ಭೀಮಾಂಬಿಕೆಯ ಪೂರ್ವಾಶ್ರಮ : ಪವಾಡ ಮಹಿಮೆಗಳು**



೧೮ ನೇ ಶತಮಾನದ ಕೊನೆಯಲ್ಲಿ, ಹಲವಾರು ಪವಾಡ ಮೆರೆದು ಕಲಿಯುಗದ "ಧರ್ಮದೇವತೆ" ಎಂದು ಖ್ಯಾತಳಾಗಿದ್ದಾಳೆ, ಭವರೋಗ ವೈದ್ಯಳೂ, ಸಕಲರ ಸಂಕಟ ಪರಿಹಾರಣಿಯೂ ಆಗಿದ್ದ ಭೀಮಮ್ಮಳ ಕರ್ತೃತ್ವ ಗದ್ದಗೆಯ ದರ್ಶನಕ್ಕಾಗಿ ಪ್ರತಿ ಅಮವಾಸ್ಯೆಗೆ ಭಕ್ತ ಮಹಾಪೂರವೇ ಹರಿದು ಬರುತ್ತದೆ. "ನೆನೆದವರ ಮನದಾಗಿರುತೀನಿ, ಅವರ ಮನಿ ಕರ ಕಟ್ಟುವ ಗೂಟದಾಗಿರತೀನ", "ಸಂಗಟಿ ಉಂಡು ಸಂಕಟ ಕಳಕೋ" "ಪಥ್ಯೆ ಮಾಡಿದರ ಧರ್ಮನ ಸತ್ಯ ಏನುಳಿತು" ಇವು ಭೀಮಾಂಬಿಕೆಯ ಅಭಯ ವಾಕ್ಯಗಳು.

**ಗಜೇಂದ್ರಗಡ**

ಜಿಲ್ಲೆ : ೫೧ ಕಿಮೀ.

ತಾಲೂಕ : ೨೭ ಕಿಮೀ.

ರೋಣ ತಾಲೂಕಿನ ಗಜೇಂದ್ರಗಡವು ಜಿಲ್ಲೆಯ ಪ್ರಮುಖ ಗಡಿ ಪ್ರದೇಶವಾಗಿದೆ. ಈ ಪುರಾಣ ಐತಿಹಾಸಿಕ ಊರಿನ ಉಗಮದ ಬಗ್ಗೆ ರೋಚಕ ಪುರಾಣ ಕಥೆ ಇದೆ. ಮಹಿಷಾಸುರನ ಮಗ ಗಜಾಸುರನು ಕಾಲಕಾಲೇಶ್ವರನಿಂದ ಹತನಾಗಿ ಮೋಕ್ಷ ಕಾಲದಲ್ಲಿ ಬೇಡಿದ ವರದಫಲವಾಗಿ 'ನಿನ್ನ ಹೆಸರು ಚಿರಸ್ಥಾಯಿಯಾಗಿ ಉಳಿಯುವಂತೆ ನಿನ್ನ ಹೆಸರಿನ ಪುರವು ಇಲ್ಲಿ ನೆಲೆ ನಿಲ್ಲುತ್ತದೆ' ಎಂದು ಶಿವನು ಹರಸಿದ, ಮುಂದೆ ಗಜಾಸುರನ ಹೆಸರಿನಿಂದ "ಗಜೇಂದ್ರಪುರ" ವು ಬೆಳೆದು ಬಂತೆಂದು, ನಂತರ ಮರಾಠರ ಆಳ್ವಿಕೆ ಕಾಲದಲ್ಲಿ ಈ ಊರು ಗುಡ್ಡದ ಹತ್ತಿರ ಎತ್ತರದ ಪ್ರದೇಶದಲ್ಲಿ ಇರುವದರಿಂದ 'ಘಡ' ಎಂಬ ಮರಾಠಿ ಪದ ಸೇರಿ 'ಗಜೇಂದ್ರಗಡ' ವೆಂದು ಹೆಸರಾಯಿತೆಂದು ಪೌರಾಣಿಕ ಮತ್ತು ಐತಿಹಾಸಿಕ ಘಟನೆಗಳನ್ನು ತಳಕು ಹಾಕಿ ಅರ್ಥೈಸುತ್ತಾರೆ. ಈ ಊರಿನಲ್ಲಿ ನಮ್ಮ ಭವ್ಯಪರಂಪರೆಗೆ ಜೀವಂತಸಾಕ್ಷಿಗಳೆಂಬಂತೆ ಸರ್ವಧರ್ಮಸಮನ್ವಯತೆಯ ಕುರುಹುಗಳಾಗಿ ಸಾಮರಸ್ಯದ ಸಂದೇಶ ಸಾರುತ್ತಿರುವ ೧೮ ಮಠಗಳು, ೧೮ ಮಸೀದಿಗಳು ೧೮ ಬಾವಿಗಳಿರುವುದು ಒಂದು ವೈಶಿಷ್ಟ್ಯ.

**ಗಜೇಂದ್ರಗಡ ಕೋಟೆ:**



ಈ ಕೋಟೆಯನ್ನು ಛತ್ರಪತಿ ಶಿವಾಜಿ ಕಟ್ಟಿಸಿದನೆಂದು ಪ್ರತೀತಿಯಿದೆ. ಕ್ರಿ.ಶ. ೧೭ ನೇ ಶತಮಾನದ ಶಾಸನವು ಈ ಕೋಟೆಯ ನಿರ್ಮಾಣದ ಬಗೆಗೆ ಉಲ್ಲೇಖಿಸುತ್ತದೆ. ಕ್ರಿ.ಶ. ೧೭ನೇ ಶತಮಾನದಿಂದ ೧೯೪೭ರ ವರೆಗೆ ಈ ಪ್ರದೇಶದ ಅಧಿಕಾರವು ಘೋರ್ಪಡೆ ಮನೆತನಕ್ಕೆ ಇನಾಂ ಆಗಿತ್ತು. ಈ ಕೋಟೆಯ ಮಹಾದ್ವಾರವು ತಕ್ಷಣ ಕಾಣದಂತೆ ನಿರ್ಮಾಣ ಮಾಡಿದ್ದರಿಂದ ಇದನ್ನು 'ಗುಹ್ಯಗಿರಿದುರ್ಗ'ದ ಸಾಲಿಗೆ ಸೇರಿಸಲಾಗಿದೆ. ಬೆಟ್ಟದ ಮೇಲಿನ ವಿಶಾಲ ಕೋಟೆಯೊಳಗೆ ಮದ್ದಿನ ಕೋಣೆ, ಹಾಲು ಮೊಸರಿನ ಹೊಂಡ, ಅಕ್ಕ-ತಂಗಿಯರ ಹೊಂಡ, ಹುಲಿ-ಆಕಳ ಹೊಂಡ, ಮಂಗ್ಯಾನ ಹೊಂಡ, ಅಕ್ಕ-ತಂಗಿಯರ ಕಲ್ಲು, ಒಂದು ತೊಲೆಯ ಮೇಲೆ ಒಂಭತ್ತು ತೊಲೆಗಳಿರುವ ಸ್ಮಾರಕ, ತೊಟ್ಟಿಲ ಹುಡೇವು, ಹನಮಂತ ದೇವರ ಗುಡಿ, ಹಜರತ್ ಮೆಹಬೂಬ ಸುಭಾನಿ ದರ್ಗಾ ಮುಂತಾದವು ಕಂಡು ಬರುತ್ತವೆ.

**ಸೂಫಿಸಂತರ ಭ್ರಾತೃತ್ವದ ತವರೂರು**



ಹಿಂದೂ-ಮುಸ್ಲಿಂ ಭ್ರಾತೃತ್ವವನ್ನು ಬೆಸೆದ ಐತಿಹಾಸಿಕ ಪ್ರಸಿದ್ಧಿ ಪಡೆದ ಸೂಫಿ ಸಂತರಾದ ಹಜರತ್ ಸೈಯ್ಯದ್ ಮಾಸೂಮ್‌ಅಲಿಶಾಹ್ ಪೀರಾಂ (ರ-ಅ) ಹಜರತ್ ಸೈಯ್ಯದ ನಿಶಾರ್‌ಅಲಿಶಾಹ್ ಪಿರಾಂ (ಹೊರಗಿನ ಟಕ್ಕೆ) ಮುಂತಾದವರು ಆಗಿ ಹೋಗಿದ್ದು ಸರ್ವಧರ್ಮ ಸಮನ್ವಯತೆ ಸಾರಿದ್ದಾರೆ.

**ಪವನ ವಿದ್ಯುತ್ ಘಟಕ:**



ಇತ್ತೀಚಿಗೆ ಗಜೇಂದ್ರಗಡ, ಕುಂಟೋಜಿ, ವದೇಗೋಳ, ಗುಡ್ಡದ ಮೇಲೆ ಸ್ಥಾಪಿತವಾಗಿರುವ ಯಾವ ಕಾಲಕ್ಕೂ ತುಕ್ಕು ಹಿಡಿಯದ ಜಿ.ಆಯ್ ಲೋಹದಿಂದ ನಿರ್ಮಿತವಾದ ಸಂಪೂರ್ಣ ಕಂಪ್ಯೂಟರ್ ನಿಯಂತ್ರಣ ಹೊಂದಿದ ಒಟ್ಟು ೪೮ ಅತ್ಯಾಧುನಿಕ ಬೃಹತ್ ಗಾಳಿ ವಿದ್ಯುತ್ ಯಂತ್ರಗಳಿರುವ 'ಪವನ ವಿದ್ಯುತ್' ಘಟಕವು ದಿನಾಂಕ ೦೧-೦೪-೨೦೦೭ ರಿಂದಾ ಕಾರ್ಯಾರಂಭ ಮಾಡಿದೆ ಮಿಂಚುನಿರೋಧಕ ೧೮೦ ಅಡಿ ಎತ್ತರದ ಠ್ದಿವರ್‌ನ ಶಿರೋಭಾಗದಲ್ಲಿರುವ ಜನರೇಟರ್‌ನ ಕೋಣೆಗೆ ಅಳವಡಿಸಿದ ೮೦ ಅಡಿ ಉದ್ದದ ೩ ಪೈಬರ್ ರೆಕ್ಕೆ (ಬ್ಲೇಡ್) ಗಳು ೧೫೦೦ ಆರ್.ಪಿ.ಎಂ ವೇಗದಲ್ಲಿ ತಿರುಗಿದಾಗ ಜನರೇಟರ್ ಮೂಲಕ ವಿದ್ಯುತ್ ಉತ್ಪಾದನೆ ಆಗುತ್ತದೆ. ಪ್ರತಿ ಯಂತ್ರವೂ ೬೦೦ ಕಿಲೋವ್ಯಾಟ ವಿದ್ಯುತ್ ಉತ್ಪಾದನಾ ಸಾಮರ್ಥ್ಯ ಹೊಂದಿದ್ದು, ವಾರ್ಷಿಕ ಸರಾಸರಿ ಉತ್ಪಾದನೆ ೨ ಲಕ್ಷದಿಂದ ೨.೫ ಲಕ್ಷ ಯುನಿಟ್ ವರೆಗೆ ಇದೆ. ಪ್ರತಿ ಯಂತ್ರದ ಸ್ಥಾಪನಾ ವೆಚ್ಚ ಅಂದಾಜು ೩.೫ ಕೋಟಿಗೂ ಅಧಿಕ.

ಗುಡ್ಡದ ಮೇಲೆ ಬಾನತ್ತರಕ್ಕೆ ತಲೆಯತ್ತಿ ನಿಂತು ಕೈಬೀಸಿ ಕರೆಯುತ್ತಿರುವಂತೆ ಭಾಸವಾಗುವ ಈ ಗಿರಿಗಿತ್ರಿಗಳ ಅಭೂತ ಪೂರ್ವ ದೃಶ್ಯ ನೋಡುಗರ ಕಣ್ಮನಗಳನ್ನು ಸೆಳೆದು ಮೂಕವಿಸ್ಮಿತರನ್ನಾಗಿಸುತ್ತವೆ. ಅಲ್ಲದೇ ಇವು ನವೀಕರಿಸಬದುದಾದ ಸಂಪನ್ಮೂಲ 'ಗಾಳಿ' ಯನ್ನು ಬಳಸಿ ವಿದ್ಯುತ್ ಉತ್ಪಾದಿಸುವ ಹೊಸ ತಂತ್ರಜ್ಞಾನವು ವಿದ್ಯುತ್ ಕೊರತೆ ನೀಗಿಸಬಲ್ಲ, ಇಂಧನ ವೆಚ್ಚ ರಹಿತ ವಾಯುನೈರ್ಮಲ್ಯ ರಹಿತ ತಂತ್ರೋಪಾಯವಾಗಿದೆ ಎಂಬ ಸಂದೇಶವನ್ನು ಸಾರುವ 'ಸದಾಕಾರ್ಯತತ್ಪರರಾದ ಆಧುನಿಕ ವಿಜ್ಞಾನದ ಮನುಕುಲ ಸೇವಕರಂತೆ' ಕಂಡು ಬರುತ್ತವೆ.

**ಕಾಲಕಾಲೇಶ್ವರ : ಸ್ಥಳ ಪುರಾಣ ಇತಿಹಾಸ**



ಗಜೇಂದ್ರಗಡದಿಂದ ೫ ಕಿ.ಮೀ. ದೂರದಲ್ಲಿ ೩೦೦ ಅಡಿ ಎತ್ತರದ ಗುಡ್ಡದ ಮಧ್ಯದಲ್ಲಿ ಕಂಗೊಳಿಸುವ, ಕಾಶಿಯಷ್ಟೇ ಪವಿತ್ರವೂ, ನಿಸರ್ಗ ನಿರ್ಮಿತವೂ ಆಗಿರುವ "ದಕ್ಷಿಣ ಕಾಶಿ" ಅಭಿದಾನದ ಬಹುಪುರಾತನ ಪುಣ್ಯಕ್ಷೇತ್ರವೇ ಶ್ರೀ ಕಾಲಕಾಲೇಶ್ವರ ಗವಿ ದೇವಸ್ಥಾನ. ಕಾಲಕಾಲೇಶ್ವರದ ವಿಸ್ತಾರದ ವರ್ಣನೆಯು ಸ್ಕಂದ ಪುರಾಣದಲ್ಲಿ ವಿವರಿಸಲ್ಪಟ್ಟಿದೆ. ಪ್ರಾಚೀನ ಕಾಲದಲ್ಲಿ ಗಜೇಂದ್ರಗಡ ಸುತ್ತಲಿನ ಗುಡ್ಡ ಪ್ರದೇಶವು ' ಜಾಳಿಂದ್ರಗಿರಿ' ಎಂಬ ಹೆಸರಿನಿಂದ ಗುರ್ತಿಸಲ್ಪಡುತ್ತಿತ್ತು. ದಟ್ಟ ಕಾನನದ ಈ ಗಿರಿ ಪ್ರದೇಶದ ವ್ಯಾಪ್ತಿಯಲ್ಲಿ ನೆಲೆಸಿ ಪೂಜೆ, ಜಪ-ತಪ ಗೈಯುತ್ತಿದ್ದ ಸಾಧು-ಸಂತ, ಭಕ್ತ-ಜನರನ್ನು ಹಿಂಸಿಸಿ ಭಕ್ಷಿಸುತ್ತಿದ್ದ ಗಜಾಸುರ, ಮಲಯಾವತಿಯರೆಂಬ ರಾಕ್ಷಸರು ಈ ಗಿರಿಶ್ರೇಣಿಯಲ್ಲಿ ನೆಲೆಸಿದ್ದರು, ಇವರ ಹಿಂಸೆ ತಾಳದೇ ಭಕ್ತ ಜನ ಶಿವನಲ್ಲಿ ಮೊರೆ ಇಟ್ಟಾಗ, ಶಿವನು ' ಕಾಳಕಾಳೇಶ್ವರ ' ಅವತಾರ ತಾಳಿ 'ರುದ್ರಪಾದ' ಎಂಬ ಗುಡ್ಡದ ತುದಿಯಿಂದ ಲಂಘಿಸಿ ಈ ರಾಕ್ಷಸರನ್ನು ಸಂಹರಿಸಿದ. ಅವರ ಆಸೆಯಂತೆ ಕಾಲಾಂತರದಲ್ಲಿ ಗಜಾಸುರನ ಹೆಸರು 'ಗಜೇಂದ್ರಗಡ' ನಗರವಾಗಿ ಮಲಯಾವತಿ ಹೆಸರು 'ಮಲಿಯಮ್ಮನ ಕೊಳ್ಳ' ವಾಗಿ ಹೆಸರು ಪಡೆದು ಇಂದಿಗೂ ಶಿವನ ಅವತಾರ ಮಹಿಮೆ ಸಾರುತ್ತಿವೆ. ಸಾಧು-ಸಂತರ ಪ್ರಾರ್ಥನೆ ಮನ್ನಿಸಿ, ಕಾಲಕಾಲೇಶ್ವರ ಶಿವನು 'ಗಗನಾವತಿ' ಎಂಬ ಗುಹೆಯಲ್ಲಿ ಪಾರ್ವತಿ (ಬೋರಾದೇವಿ), ಗಂಗೆ (ಅಂತರಗಂಗೆ), ನಂದಿ (ಗೋ ಬಸವ), ವೀರಭದ್ರ (ಉದ್ದಾನ ವೀರಭದ್ರ) ಸಮೇತನಾಗಿ ಕಾಲಕಾಲಾಂತರದಲ್ಲೂ ಭಕ್ತರನ್ನು ಪೊರೆಯುವ ಅಭಯ ನೀಡಿ ಸ್ವಯಂಭು ಲಿಂಗವಾಗಿ ನೆಲೆ ನಿಂತ. ಈ ಗವಿಯನ್ನೇ ಪರಿವರ್ತಿಸಿ ದೇವಾಲಯವನ್ನಾಗಿ ಮಾರ್ಪಡಿಸಿದ್ದಾರೆ.

**ಶ್ರೀ ಕ್ಷೇತ್ರ ಮಹಿಮೆ**

ಕಾಲಾಂತರದಲ್ಲಿ ನಡೆದು ಹೋದ-ನಡೆಯುತ್ತಿರುವ ಮಹಿಮೆಗಳಾದ ಆನೆಗುಂದಿ ಅರಸರ ಆನೆಯ ಕೊರಳಲ್ಲಿರುವ ಎರಡು ಚೀಲ ಅಂಬರಿ ಕಾಳು ಹಿಡಿಯುವಷ್ಟು ದೊಡ್ಡದಾದ ಘಂಟೆಯು ಕಳುವಾಗಿ ಸುಣ್ಣ ಹಚ್ಚಿಕೊಳ್ಳುವ ಎತ್ತರದ ಪಡೆಯಲ್ಲಿ ಕಟ್ಟಿದ್ದ ಘಟನೆ, ಮುಂದೆ ಇದೇ ಘಂಟೆ ಸುಮಾರು ೨೦೦-೩೦೦ ವರ್ಷಗಳ ಹಿಂದೆ ಒಂದು ರಾತ್ರಿ ಜೋರಾಗಿ ಭಾರಿಸುತ್ತಾ ಕಾಣೆಯಾದ ಆಕಾಶ ಘಂಟೆ ಘಟನೆ. ಇಂದು ಈ ಘಂಟೆ ಸಿಂಧೂ ನದಿ ಮೂಲದ ಕಂಕಾಳೇಶ್ವರ ದೇವಾಲಯದಲ್ಲಿರುವದಾಗಿ ಸುಪ್ರಸಿದ್ಧ ಜ್ಯೋತಿಷ್ಯ ಕೋಡಿಮಠದವರು ಹೇಳುವಂಥ ವಿಚಾರ. ಇಂದಿಗೂ ಸಹ ಕಣ್ಣಾರೆ ಕಾಣಬಹುದಾದ ಕುರುಹುಗಳಾದ ಕ್ಷೇತ್ರ ಪ್ರವೇಶವಾದ ಕೂಡಲೇ ಬೆಟ್ಟದ ಮಧ್ಯದಲ್ಲಿ ಬಣ್ಣದಿಂದ ಬರೆದಂತೆ ಕಾಣುವ ಈಶ್ವರ, ನಂದಿ, ಸೂರ್ಯ, ಚಂದ್ರ, ಲಾಂಛನಗಳು, ಗಗನಾವತಿ ಗುಹೆಯಲ್ಲಿ ಎಂದೂ ಬತ್ತದ ಏಳು ನೀರಿನ ಹೊಂಡಗಳು, ಪುಟ್ಟಗುಡಿಯಲ್ಲಿ ಬೆಳೆಯುತ್ತಿರುವ ಗೋಬಸವ. ಎತ್ತರದ ಪಡೆಯಿಂದ ಶಿವನ ಜಡೆಯನ್ನು ಹೋಲುವ ಬೇರುಗಳನ್ನು ಬಳಸಿ ಸದಾಕಾಲ ಜಿನಗುವ ಪಾವನ ತೀರ್ಥ ಅಂತರಗಂಗೆ, ಪ್ರತಿ ವರ್ಷ ಯುಗಾದಿ ಪಾಡ್ಯಾದ ರಾತ್ರಿ ಅತೀ ಎತ್ತರದ ಪಡೆಗೆ ತಾನೆ ಸುಣ್ಣ-ಸುರಮ, ಬಳಿದುಕೊಳ್ಳುವ ಪವಾಡ, ಪ್ರತಿ ದವನದ ಹುಣ್ಣಿಮೆ ರಥೋತ್ಸವದ ಮುನ್ನ ಸಂಜೆ ಪಶ್ಚಿಮದಲ್ಲಿ ಕಾಣುವ ಒಂದೇ ನಕ್ಷತ್ರ ದಂತಹ ಪವಾಡ ಮಹಿಮೆಗಳು ಇಂದಿಗೂ ಈ ಕ್ಷೇತ್ರವು ಶಿವನ ಅವತಾರದ ಜಾಗೃತ ಶಕ್ತಿ ಕೇಂದ್ರವೆಂದು ಸಾರಿಹೇಳುತ್ತ

**ಶ್ರೀ ಮೊರಾರ್ಜಿ ದೇಸಾಯಿ ಮಾದರಿ ವಸತಿ ಶಾಲೆ  ಕಾಲ ಕಾಲೇಶ್ವರ:**



೧೯೯೭-೯೮ ಶೈಕ್ಷಣಿಕ ಸಾಲಿನಲ್ಲಿ ಪ.ಜಾತಿ/ಪ.ಪಂ. ಇತರೆ ಹಿಂದುಳಿದ ೨೫೦ ವಿದ್ಯಾರ್ಥಿಗಳಿಗೆ ವಸತಿಯುತ ಶಿಕ್ಷಣ ಸೌಲಭ್ಯ ಕಲ್ಪಿಸಬಲ್ಲ ಕರ್ನಾಟಕ ಸರ್ಕಾರದ ರೋಣ ತಾಲೂಕಿನ ಈ ವಸಯುತ ಶಾಲೆಯು ಶ್ರೀ ಕಾಲಕಾಲೇಶ್ವರ ಪುಣ್ಯಕ್ಷೇತ್ರದ ರಮ್ಯಪ್ರಕೃತಿಯ ಮಡಿಲಲ್ಲಿ 'ಜ್ಞಾನ ಸುಮ' ದಂತೆ ಅರಳಿ ನಿಂತಿದೆ ಸಹ ಶಿಕ್ಷಣ ಪದ್ಧತಿಯ ಕನ್ನಡ ಮಾಧ್ಯಮ ಬೋಧನೆಯ ಈ ವಸತಿ ಶಾಲೆಯು ಇಂದು ಅತ್ಯಾಕರ್ಷಕ ಸ್ವಂತ ಸುಸಜ್ಜಿತ ಕಟ್ಟಡವನ್ನು ಹೊಂದಿದೆ. ೬ ಜನ ಬೋಧಕ ಶಿಕ್ಷಕರು, ಒಬ್ಬ ದೈಹಿಕ ಶಿಕ್ಷಣ ಶಿಕ್ಷಕರು ಹಾಗೂ ಮುಖ್ಯೋಪಾಧ್ಯಾಯರಿದ್ದು ಸುಸಜ್ಜಿತ ಬೋಧನಾ ಕೊಠಡಿಗಳಿವೆ, ವಿಶಾಲ ಸಂಕೀರ್ಣದಲ್ಲಿ ವಿದ್ಯಾರ್ಥಿ/ನಿಯರಿಗೆ ಪ್ರತ್ಯೇಕ ವಸತಿ ನಿಲಯಗಳಿದ್ದು, ವಾರ್ಡನ್ ಅಡುಗೆ ಸಿಬ್ಬಂದಿ ಇರುತ್ತಾರೆ.

ಪ್ರತಿ ವರ್ಷ ೫ ನೇ ತರಗತಿಯಲ್ಲಿ ಉತ್ತೀರ್ಣರಾದ ಮಕ್ಕಳಿಗೆ ತಾಲೂಕಾ ಮಟ್ಟದಲ್ಲಿ ಸ್ಪರ್ಧಾತ್ಮಕ ಪರೀಕ್ಷೆ ನಡೆಸಿ ಹೆಚ್ಚಿನ ಅಂಕಗಳಿಸಿದ ೫೦ ಜನ ಪ.ಜಾತಿ/ ಪ.ಪಂ. ಮತ್ತು ಇತರ ಹಿಂದುಳಿದ ವಿದ್ಯಾರ್ಥಿ/ನಿಯರಿಗೆ ಶೇಕಡಾ ೩೭% ಶೇ ೧೩% ರ ತಲಾ ಮೀಸಲಾತಿ ಆಧಾರದ ಮೇಲೆ ಕೌನ್ಸಲಿಂಗ ಮೂಲಕ ೬ ನೇ ತರಗತಿಗೆ ಪ್ರವೇಶ ನೀಡಿ ೧೦ ನೇ ತರಗತಿ ವರೆಗೆ ಉತ್ತಮ ಶಿಕ್ಷಣ ನೀಡಲಾಗುತ್ತದೆ. ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ಶಾಲಾ ಅವಧಿಯ ನಂತರ ವಿಷಯ ಬೋಧನಾ ತರಗತಿಗಳನ್ನು ಸಹ ನಡೆಸಲಾಗುತ್ತದೆ. ಇದುವರೆಗೂ ೬ ಬಾರಿ ಎಸ್. ಎಸ್.ಎಲ್.ಸಿ ಪರೀಕ್ಷೆಯನ್ನು ಎದುರಿಸಿರುವ ಈ ಶಾಲೆಯ ಮಕ್ಕಳು ಸತತ ಐದು ವರ್ಷವು ೧೦೦% ರ ಫಲಿತಾಂಶ ಸಾಧನೆ ಮಾಡಿರುವುದು ಹೆಮ್ಮೆಯ ಸಂಗತಿ.

**ಸವಡಿ**

ಜಿಲ್ಲೆ : ೩೧ ಕಿ.ಮೀ.

ತಾಲೂಕ : ೧೮ ಕಿ.ಮೀ



ಪ್ರಾಚೀನ ಶಾಸನಗಳಲ್ಲಿ 'ಸಯ್ಯಡಿ', 'ಸೈವಿಡಿ' ಎಂದೆಲ್ಲಾ ಉಲ್ಲೇಖಿತಗೊಂಡಿದೆ. ಇದೊಂದು ವಿದ್ಯಾಕೇಂದ್ರವಾಗಿದ್ದು ಇಲ್ಲಿಯ ಬ್ರಹ್ಮೇಶ್ವರ ಗುಡಿಯು ರಾಷ್ಟ್ರಕೂಟರ ರಚನೆಯಾಗಿದ್ದು, ವಿಜಯನಗರದರಸರು ಜೀರ್ಣೋದ್ಧಾರ ಮಾಡಿದ್ದಾರೆ. ಗರ್ಭಗೃಹ, ತೆರೆದ ಮಂಟಪ ಮತ್ತು ಸಭಾಮಂಟಪಗಳನ್ನು ಹೊಂದಿರುವ ಗರ್ಭಗೃಹದಲ್ಲಿ ಒಂದೇ ಪೀಠದಲ್ಲಿ ಹಂಸಪೀಠದ ಚತುರ್ಮುಖ ಬ್ರಹ್ಮ, ನಂದಿಪೀಠದ ಶಿವಲಿಂಗ, ಗರುಡಪೀಠದ ಚತುರ್ಭುಜ ವಿಷ್ಣು ಮೂರ್ತಿಗಳಿವೆ. ಗರ್ಭಗೃಹದ ಬಾಗಿಲವಾಡ ಪಂಚಾಶಾ ಖಾಲಂಕೃತವಾಗಿದ್ದು ಹಂಸಾವಳಿಯ ಸಾಲನ್ನು ಹೊಂದಿದೆ. ಲಲಾಟದಲ್ಲಿ ಗಜಲಕ್ಷ್ಮಿ ಕೆತ್ತನೆಯಿದೆ. ಇದರ ಹಿಂಬದಿಯಲ್ಲಿರುವ ನಾರಾಯಣ ಗುಡಿಯು ಎರಡು ಗರ್ಭಗೃಹ ತೆರೆದ ಅಂತರಾಳ ಹಾಗೂ ನವರಂಗವನ್ನು ಹೊಂದಿದೆ. ಪ್ರಧಾನ ಗರ್ಭಗೃಹದಲ್ಲಿರುವ ನಾರಾಯಣನ ಮೂರ್ತಿಯ ಪ್ರಭಾವಳಿಯಲ್ಲಿ ದಶಾವತಾರ ಕೆತ್ತನೆಯಿದೆ. ಗರ್ಭಗೃಹದ ಪಂಚಶಾಲಾಂಕೃತ ಬಾಗಿಲವಾಡವು ಹಂಸಾವಳಿಯನ್ನು ಹೊಂದಿದೆ. ಲಲಾಟದಲ್ಲಿ ಗಜಲಕ್ಷ್ಮಿಯಿದೆ. ತೆರೆದ ಅಂತರಾಳದ ಸ್ತಂಭದಲ್ಲಿ ರತಿ-ಮನ್ಮಥರ ಶಿಲ್ಪಗಳಿವೆ. ಹೊರಭಿತ್ತಿಯು ಕಿರುಶಿಖರ ಮಾದರಿ ಹಾಗೂ ಚಿಕಣಿ ಶಿಲ್ಪಗಳಿಂದ ಅಲಂಕೃತವಾಗಿದೆ.

**ಹೊಳೆ – ಆಲೂರು**

ಜಿಲ್ಲೆ : ೫೯ ಕಿ.ಮೀ.

ತಾಲೂಕ : ೧೮ ಕಿ.ಮೀ

**ಕಾಷ್ಠಶಿಲ್ಪದ ಕಲಾ ತವರೂರು**



ಕರ್ನಾಟಕದ ಕಾಷ್ಠಶಿಲ್ಪ ಪರಂಪರೆಯಲ್ಲಿ ಹೊಳೆ-ಆಲೂರಿನ ಸೂಕ್ಷ್ಮ ಕುಸುರಿ ಕೆತ್ತನೆಯುಳ್ಳ ಬಾಗಿಲು ವಾಡಗಳಿಗೆ ದೇಶಾದ್ಯಂತ ಬೇಡಿಕೆ ಯಿದೆ. ರಾಮಾಯಣ ಮಹಾ ಭಾರತಗಳ ಕಥಾಸಂದರ್ಭಗಳನ್ನು ಒಳಗೊಂಡ ಕೆತ್ತನೆಯಿರುವ ಬಾಗಿಲುಗಳು ಹೂ-ಬಳ್ಳಿಗಳ ಸುಳುಹುಗಳನ್ನು ಹೊಂದಿ ಚಿತ್ತಾಕರ್ಷಕವಾಗಿವೆ

**ರೋಣ ತಾಲಕಿನ ಇತರ ಪ್ರಾಚೀಣ ದೇವಾಲಯಗಳು :**

ಮೆಣಸಗಿಯ ಕಲ್ಲೇಶ್ವರ ದೇವಾಲಯ, ನರೇಗಲ್ಲಿನ ತ್ರಿಪುರಾಂತಕ ದೇವಾಲಯ, ಕಲ್ಮೇಶ್ವರ ದೇವಾಲಯ, ನಿಡಗುಂದಿಯ ನಾರಾಯಣದೇವರ ಗುಡಿ, ದಾಸಿಮೇಶ್ವರ ದೇವಾಲಯಗಳು, ಅಬ್ಬಿಗೇರಿಯ ಜ್ಯೋತಿರ್ಲಿಂಗ ಗುಡಿ, ಕರಮುಡಿಯ ಕಲ್ಮೇಶ್ವರ ಗುಡಿ, ಕೋಡಿಕೊಪ್ಪದ (ಮಲ್ಲಿಕಾರ್ಜುನ) ಮೂಲ ಬ್ರಹ್ಮೇಶ್ವರ ಗುಡಿ, ಜಕ್ಕಲಿಯ ಕಲ್ಮೇಶ್ವರ ಹಾಗೂ ಸಂಗಮೇಶ್ವರ ದೇವಾಲಯಗಳು, ಹಿರೇಹಾಳದ ರಾಮೇಶ್ವರ ದೇವಾಲಯ, ಯಾವಗಲ್ಲಿನ

ಹೇಮಲಿಂಗೇಶ್ವರ ಅಸೂಟಿಯ ಮಹಿಷ ಮರ್ದಿನಿ ಶಿಲ್ಪ, ಬೆಳವಣಿಕೆಯ ವೀರಭದ್ರ ದೇವಸ್ಥಾನ ಮತ್ತು ರಾಜೂರಿನ ಕಲ್ಮೇಶ್ವರ ದೇವಾಲಯಗಳೂ ಉಲ್ಲೇಖಾರ್ಹವಾಗಿವೆ.

## ಗದಗ ಗ್ರಾಮೀಣ ತಾಲ್ಲೂಕು

ಜಿಲ್ಲೆ: ೧೦ ಕಿ.ಮೀ.

**ಲಕ್ಕುಂಡಿ:**

ಲಕ್ಕುಂಡಿ ಗದಗ ಜಿಲ್ಲೆಯ ಒಂದು ಮಹತ್ವದ ಊರು. ಇದರ ಐತಿಹಾಸಿಕ ಹೆಸರು ಲೊಕ್ಕಿಗುಂಡಿ. ಲೊಕ್ಕಿ ಎನ್ನುವ ದೇವತೆ ಈ ಊರಿನ ಅಧಿದೇವತೆ. ಇವಳು ಜೈನ ದೇವತೆಯಾಗಿರಬಹುದು.

ಲಕ್ಕುಂಡಿಯನ್ನು ಕಲ್ಯಾಣದ ಚಾಲುಕ್ಯರು, ಕಳಚೂರಿಗಳು, ಯಾದವರು ಹಾಗೂ ಹೊಯ್ಸಳರು ಆಳಿದ್ದಾರೆ. ೧೧೯೨ರಲ್ಲಿ ೨ನೇ ವೀರಬಲ್ಲಾಳನು ಲಕ್ಕುಂಡಿಯನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡಿದ್ದನು. ಲಕ್ಕುಂಡಿಯೊಂದಿಗೆ ದಾನಚಿಂತಾಮಣಿ ಅತ್ತಿಮಬ್ಬೆಯ ಹೆಸರು ಚಿರಸ್ಥಾಯಿಯಾಗಿ ನೆಲೆ ನಿಂತಿದೆ. ಇರಿವೆ ಬೆಡಂಗ ಸತ್ಯಾಶ್ರಯದೇವನು ಗುಜರಾತವನ್ನು ಗೆದ್ದು ಬಂದ ಸಂದರ್ಭದಲ್ಲಿ ಅತ್ತಿಮಬ್ಬೆ ಲೊಕ್ಕಿಗುಂಡಿಯಲ್ಲಿ (ಲಕ್ಕುಂಡಿಯಲ್ಲಿ) ೧೫೦೦ ಜಿನಬಸದಿಗಳನ್ನು ಕಟ್ಟಿಸಿದಳು. ಶರಣ ಶಿರೋಮಣಿಗಳಾದ ಅಣ್ಣ, ತಂಗಿ ಅಜಗಣ್ಣ ಹಾಗು ಮುಕ್ತಾಯಕ್ಕರಿಗೆ ಆಶ್ರಯ ನೀಡಿದ ತಾಣ ಲಕ್ಕುಂಡಿ.

ಲಕ್ಕುಂಡಿಯಲ್ಲಿ ಸುಮಾರು ೨೦ರಷ್ಟು ಸುಂದರ ಪ್ರಾಚೀನ ದೇವಸ್ಥಾನಗಳಿವೆ. ಉತ್ತರ ಕರ್ನಾಟಕ ಹಾಗೂ ದಕ್ಷಿಣ ಕರ್ನಾಟಕಗಳ ಅದ್ಭುತ ಮಿಶ್ರಣವಾದ ವೇಸರ ಶೈಲಿಯಲ್ಲಿ ರಚಿತವಾದ ಕಾಶಿ ವಿಶ್ವೇಶ್ವರ ದೇವಸ್ಥಾನವು ಇಲ್ಲಿಯ ಅತ್ಯಂತ ಖ್ಯಾತ ಪ್ರಾಚೀನ ದೇವಸ್ಥಾನ.

ಕ್ರಿ.ಶ. ೧೧-೧೨ ನೆಯ ಶತಮಾನದಲ್ಲಿ ಇಲ್ಲಿ ನಾಣ್ಯ ಟಂಕಿಸುವ ಟಂಕಶಾಲೆ ಇದ್ದುದಾಗಿ ಶಾಸನಗಳು ಹೇಳುತ್ತವೆ.

**ಲಕ್ಕುಂಡಿಯ ದೇವಾಲಯಗಳು– ಜನಾಲಯಗಳು**

**ಬ್ರಹ್ಮ ಜನಾಲಯ::**



ಲಕ್ಕುಂಡಿಯ ಪುರಾತನ ಕಟ್ಟಡಗಳಲ್ಲಿ ಸುಂದರ ಹಾಗೂ ಬೃಹತ್ ಕಟ್ಟಡವೆಂದರೆ ಬ್ರಹ್ಮ ಜಿನಾಲಯ. ಕ್ರಿ. ಶ. ೧೦೦೭ರಲ್ಲಿ ದಾನ ಚಿಂತಾಮಣಿ ಅತ್ತಿಮಬ್ಬೆ ಹಲವಾರು ದಾನಗಳನ್ನು ನೀಡಿ ದೇವಾಲಯವನ್ನು ಕಟ್ಟಿಸುವುದರೊಂದಿಗೆ ಕಲ್ಯಾಣ ಚಾಲುಕ್ಯ ದೊರೆ ಇರಿವೆ ಬೆಡಂಗ ಸತ್ಯಾಶ್ರಯ ಆಹವಮಲ್ಲನಿಂದ ದೇವಾಲಯಕ್ಕೆ ದೇಣಿಗೆಯನ್ನು ಕೊಡಿಸಿದಳು. ದೇವಾಲಯವು ಚೌಕಾಕಾರದ ಗರ್ಭಗೃಹ, ಅರ್ಧಮಂಟಪ, ನವರಂಗ ಹಾಗೂ ತೆರೆದ ಮುಖಮಂಟಪ ಹೊಂದಿದೆ. ಚೌಕಾಕಾರದ ಗರ್ಭಗೃಹದಲ್ಲಿ ಎತ್ತರವಾದ ಅಲಂಕೃತ ಪಾಣಿಪೀಠದ

ಮೇಲೆ ನಿಂತಿರುವ ಮಹಾವೀರನ ವಿಗ್ರಹವನ್ನು ಬ್ರಹ್ಮಜಿನನೆಂದು ಕರೆಯಲಾಗಿದ್ದು, ತುಂಬ ಆಕರ್ಷಕವಾಗಿದೆ. ಈ ಕಪ್ಪುಶಿಲಾಮೂರ್ತಿಯ ಹಿಂಭಾಗದಲ್ಲಿ ಅಲಂಕೃತ ಪ್ರಭಾವಳಿ ಹಾಗೂ ಅಕ್ಕಪಕ್ಕದಲ್ಲಿ ಚಾಮರಧಾರಣಿಯರ ಉಬ್ಬು ಶಿಲ್ಪಗಳಿವೆ.

**ನನ್ನೇಶ್ವರ ದೇವಾಲಯ:**



ನನ್ನೇಶ್ವರ ದೇವಾಲಯದಲ್ಲಿ ಗರ್ಭಗೃಹ, ಅರ್ಧಮಂಟಪ, ನವರಂಗ ಹಾಗೂ ಮುಂಭಾಗದಲ್ಲಿ ತೆರೆದ ಮುಖಮಂಟಪಗಳಿವೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು, ನವರಂಗಕ್ಕೆ ಪೂರ್ವ ಹಾಗೂ ದಕ್ಷಿಣದಿಂದ ಎರಡು ಪ್ರವೇಶದ್ವಾರಗಳಿವೆ. ನವರಂಗದ ಕಂಬಗಳೂ ತುಂಬ ನುಣುಪಾಗಿದ್ದು ನೋಡುವವರ ಮುಖ ಪ್ರತಿಫಲಿಸುವಂತಿವೆ. ಹೊರಗೋಡೆಯಲ್ಲಿ ಕೋಷ್ಠ ಪಂಜರಗಳಿವೆ. ನವರಂಗಕ್ಕಿರುವ ಮಹಾದ್ವಾರಬಂಧವು ಅಲಂಕಾರಿಕ ವಿಫುಲ ಕೆತ್ತನೆಗಳನ್ನು ಹೊಂದಿದೆ.

**ಮುಸಕಿನ ಬಾದಿ:**



ನನ್ನೇಶ್ವರ ದೇವಾಲಯ ಮುಂಭಾಗದಲ್ಲಿ ವಿಶಾಲವಾದ ನಿವೇಶನದಲ್ಲಿ ಕಲ್ಲಿನಿಂದ ಅಲಂಕೃತಗೊಂಡ ದೊಡ್ಡದಾದ ನೆಲಬಾವಿ ಅಥವಾ ಪುಷ್ಕರಣಿ ಇದೆ. ಇದನ್ನು ಮುಸುಕಿನ ಬಾವಿಯಂತಲೂ, ಸಿದ್ಧರ ಬಾವಿಯಂತಲೂ ಕರೆಯುತ್ತಾರೆ. ಆದರೆ ಶಾಸನದಲ್ಲಿ ಇದು ನಾಗರಬಾವಿ ಎಂದು ಉಲ್ಲೇಖಿತವಾಗಿದೆ. ಬಾವಿಯ ಕಲ್ಲಿನ ಕಟ್ಟಡವು ದೇವಾಲಯಕ್ಕೆ ಉಪಯೋಗಿಸಲಾಗುವ ಕಪ್ಪುಶಿಲೆಯಿಂದಲೇ ನಿರ್ಮಿಸಲಾಗಿದ್ದು, ಸುತ್ತಲೂ ಹಲವಾರು ಚಿಕ್ಕ ಚಿಕ್ಕ ಗುಡಿಗಳಿದ್ದು ಈಗ ಖಾಲಿ ಇವೆ. ನೀರನ್ನು ತಲುಪಲು ಸುವ್ಯವಸ್ಥಿತವಾದ ಮೆಟ್ಟಿಲುಗಳಿವೆ.

**ಹಾಲಗುಂದ ಬಸವೇಶ್ವರ ದೇವಾಲಯ**

ತ್ರಿಕೂಟೇಶ್ವರ ಅಥವಾ ಗವರೇಶ್ವರ ದೇವಾಲಯವೆಂದೂ ಕರೆಯುವ ಈ ದೇಗುಲ ಚಾಲುಕ್ಯ ಶೈಲಿಯ ತ್ರಿಕೂಟಾಚಲ. ಮೂರು ಗರ್ಭಗೃಹಗಳ ಮುಂಭಾಗದಲ್ಲಿ ಪ್ರತ್ಯೇಕ ಅರ್ಧಮಂಟಪಗಳಿದ್ದು ಮಧ್ಯಭಾಗದಲ್ಲಿ ಕೇಂದ್ರಿಯ ನವರಂಗವಿದೆ. ಮೂರು ಗರ್ಭಗೃಹಗಳ ಲಲಾಟದಲ್ಲಿ ಗಜಲಕ್ಷ್ಮಿಯ ಶಿಲ್ಪಗಳಿವೆ. ಮುಖ್ಯದ್ವಾರಬಂಧವು ಹಲವಾರು ಶಿಲ್ಪಗಳಿಂದ ಅಲಂಕೃತವಾದ ಆಕರ್ಷಕವಾಗಿದೆ. ಈ ದೇವಾಲಯವು ನಂದಿಯ ಬೃಹತ್ ವಿಗ್ರಹವಿದ್ದು ಅದು ಪೂರ್ವಾಭಿಮುಖವಾಗಿದೆ. ಈ ದೇವಾಲಯದ ಎದುರು ಭಾಗದಲ್ಲಿ ಸ್ಥಳೀಯವಾಗಿ ಮಜ್ಜಲಬಾವಿ ಎಂದು ಕರೆಯುವ ಒಂದು ಬಾವಿ. ಇದೆ. ಇದರಲ್ಲಿರುವ ನೀರು ಕೆಲವು ಮಾಸಗಳಲ್ಲಿ ಕೆಂಪು, ನೀಲಿ ಹಾಗೂ ಕಪ್ಪು ಬಣ್ಣಗಳಲ್ಲಿ ತೋರುತ್ತದೆ ಎಂದು ಹೇಳಲಾಗುತ್ತದೆ.

**ಇತರ ದೇವಾಲಯಗಳು:**

ಒಟ್ಟು ನೂರೊಂದು ಬಾವಿ, ನೂರೊಂದು ದೇಗುಲಗಳಿದ್ದವೆಂದು ಹೇಳಲಾಗುವ ಲಕ್ಕುಂಡಿಯಲ್ಲಿ ಇಂದು ಕೆಲವು ದೇವಾಲಯಗಳು ಮಾತ್ರ ಕಾಣಲು ಸಿಗುತ್ತವೆ. ಅವುಗಳಲ್ಲಿ ಶಿಥಿಲಾವಸ್ಥೆಯಲ್ಲಿರುವವೂ ಸೇರಿವೆ.ಚಂದ್ರಮೌಳೇಶ್ವರ, ಮಲ್ಲಿಕಾರ್ಜುನ, ವಿರೂಪಾಕ್ಷ, ಲಕ್ಷ್ಮೀನಾರಾಯಣ, ವೀರಭದ್ರ, ಸೋಮೇಶ್ವರ, ನೀಲಕಂಠೇಶ್ವರ, ವಿಶ್ವನಾಥ, ಕುಂಬಾರ ಗಿರೀಶ್ವರ (ಅಥವಾ ನಾರಾಯಣದೇವ) ಮುಂತಾದ ದೇಗುಲಗಳು ಉಲ್ಲೇಖಾರ್ಹವಾಗಿವೆ.

ಗದಗ ಜಿಲ್ಲೆಗೆ ಬಂದವರು ಲಕ್ಕುಂಡಿಯನ್ನು ಸಂದರ್ಶಿಸದೇ ಮುಂದೆ ಹೋಗುವುದೇ ಇಲ್ಲ. ಅಪೂರ್ವ ಶಿಲ್ಪ ಕೆತ್ತನೆಗಳಿಂದ ಕೂಡಿದ ಈ ಶಿಲ್ಪಕಾಶಿ ಪ್ರವಾಸಿಗರನ್ನು ಕೈಮಾಡಿ ಕರೆಯುತ್ತಿವೆ.

**ಕೇಂದ್ರ ಪ್ರಾಚ್ಯವನ್ನು ಸರ್ವೇಕ್ಷಣಾಲಯ (ವಸ್ತು ಸಂಗ್ರಹಾಲಯ):**



ಬ್ರಹ್ಮ ಜಿನಾಲಯದ ಬಲಭಾಗದಲ್ಲಿ ಕೇಂದ್ರ ಪ್ರಾಚ್ಯವಸ್ತು ಸರ್ವೇಕ್ಷಣಾಲಯವಿದೆ. ಈ ವಸ್ತು ಸಂಗ್ರಹಾಲಯದಲ್ಲಿ ನಾನಾ ಭಾಗಗಳಿಂದ ತಂದಿರುವ ಅನೇಕ ಬಿಡಿ ಶಿಲ್ಪಗಳನ್ನು ಕಾಲಕ್ಕನು ಗುಣವಾಗಿ ವಿಂಗಡಿಸಿ ಪ್ರದರ್ಶಿಸಲಾಗಿದೆ. ತೀರ್ಥಂಕರ, ದ್ವಾರ ಪಾಲಕ, ಶೇಷಶಯನ,ವಿಷ್ಣು ಚಾಮರಧಾರಿಣಿ, ಸಿಂಹಮುಖ ಕುಬೇರ, ಋಷಭನಾಥ, ಸ್ತ್ರೀ ವಿಗ್ರಹ (ಭಗ್ನ), ತೀರ್ಥಂಕರ, ಕಾಮದೇವ, ಸಪ್ತಮಾತೃಕೆ (ಭಗ್ನ) ಶಿವಪರಮೇಶ್ವರ, ತೀರ್ಥಂಕರ ಶಿರೋಭಾಗ, ಜೈನ ಪಾರ್ಶ್ವನಾಥ, ಕಾರ್ತಿಕೇಯ, ಚಾಮರಧಾರಿಣಿ, ಆನೆ, ವಿಷ್ಣು, ಕೀರ್ತಿಮುಖ ಇತ್ಯಾದಿ ಸುಂದರ ಚಾಳುಕ್ಯ ಶೈಲಿಯ ಶಿಲ್ಪಗಳಿವೆ. ಹೊರ ಆವರಣದಲ್ಲಿಯ ವೀರಗಲ್ಲುಗಳು, ಶಾಸನಗಳು ಮುಂತಾದ ಶಿಲ್ಪಗಳು ಪ್ರವಾಸಿಗರಿಗೂ, ಅಭ್ಯಾಸಿಗಳಿಗೂ ಕೈಮಾಡಿ ಕರೆಯುತ್ತಿವೆ.

**ಚಿಂಚಲಿ : ಛಾಯಾ ಚಂದ್ರನಾಥ:**

ಜಿಲ್ಲೆ: ೧೫ ಕಿ.ಮೀ.



ಗದಗ ತಾಲ್ಲೂಕಿನ ಚಿಂಚಲಿ ಸಮೀಪದ ಗುಡ್ಡದ ದಕ್ಷಿಣ ಭಾಗದಲ್ಲಿರುವ ಶಿಲೆಯ ಮೇಲಣ ಛಾಯಾ ಚಂದ್ರನಾಥ ಜೈನರ ಶ್ರದ್ಧಾಕೇಂದ್ರವಾಗಿದೆ. ಬೆಳಗಿನ ಪ್ರಥಮ ಸೂರ್ಯಕಿರಣಗಳು ಈ ಶಿಲೆಯ ಮೇಲೆ ಬಿದ್ದಾಗ ತೀರ್ಥಂಕರ ರೂಪದ ಗುಲಾಬಿ ಬಣ್ಣದ ಆಕೃತಿ ಗೋಚರಿಸುತ್ತಿದ್ದು ಇದನ್ನೆ ಛಾಯಾ ಚಂದ್ರನಾಥ ಎಂದು ಕರೆಯಲಾಗುತ್ತದೆ. ಅನೇಕ ಜೈನ ಯತಿಗಳು, ವಿದ್ವಾಂಸರು, ಸಾಹಿತಿಗಳು ಹಾಗೂ ಸಾವಿರಾರು ಶ್ರದ್ಧಾಳುಗಳು ಈ ದೃಶ್ಯ ವೀಕ್ಷಿಸಿ ವಿಸ್ಮಿತರಾಗಿದ್ದಾರೆ.

**ಮುಳಗುಂದ:**

ಜಿಲ್ಲೆ ೨೧ ಕಿ.ಮೀ.





ಜಿಲ್ಲಾ ಕೇಂದ್ರದಿಂದ ೨೧ ಕಿಲೋಮೀಟರ ದೂರದಲ್ಲಿರುವ ಮುಳಗುಂದ ಪ್ರಸಿದ್ಧ ಐತಿಹಾಸಿಕ ಸ್ಥಳವಾಗಿದೆ. ಪ್ರಾಚೀನ ಕಾಲದಲ್ಲಿ ಬೆಳ್ವೊಲ – ೩೦೦ ಪ್ರದೇಶ ವ್ಯಾಪ್ತಿಯಲ್ಲಿದ್ದು ಮುಳಗುಂದ – ೧೨ ಎಂಬ ಆಡಳಿತ ವಿಭಾಗದ ರಾಜಧಾನಿಯಾಗಿದ್ದ ಈ ಸ್ಥಳ ಧರ್ಮ, ಸಾಹಿತ್ಯ, ಸಂಸ್ಕೃತಿಗಳ ನೆಲೆವೀಡು, ಮುಳಗುಂದದಲ್ಲಿರುವ ಶೋಭನೇಶ್ವರ, ನಗರೇಶ್ವರ, ಸಿದ್ಧೇಶ್ವರ ದೇವಾಲಯಗಳು ಪ್ರೇಕ್ಷಣೀಯವಾಗಿವೆ. ಒಂದು ಕಾಲದಲ್ಲಿ ಪ್ರಮುಖ ಜೈನಕೇಂದ್ರವಾಗಿದ್ದ ಮುಳಗುಂದದಲ್ಲಿ ಈಗ ಉಲ್ಲೇಖಿಸಬಹುದಾದ ಬಸದಿಗಳೆಂದರೆ ಪಾರ್ಶ್ವನಾಥ ಮತ್ತು ಚಂದ್ರನಾಥ ಬಸದಿಗಳು. ಅನುಭಾವಿ ಕವಿ ಬಾಲಲೀಲಾ ಮಹಾಂತ ಶಿವಯೋಗಿಗಳ ಗವಿಮಠ ಇಲ್ಲಿದ್ದು ಈಗಿನ ಪೀಠಾಧಿಪತಿಗಳಾದ ಪೂಜ್ಯ ಮಲ್ಲಿಕಾರ್ಜುನ ಮಹಾಸ್ವಾಮಿಗಳಿಂದ ಜೀರ್ಣೋದ್ಧಾರಗೊಳ್ಳುತ್ತಿದೆ.

**ದಾವಲ್ ಮಲಿಕ್ :**



ಲಕ್ಷ್ಮೇಶ್ವರ- ಗದಗ ಮಾರ್ಗ ಮಧ್ಯದಲ್ಲಿ ಮುಳಗುಂದ ಗ್ರಾಮದ ಹತ್ತಿರದ ಗುಡ್ಡದ ಮೇಲಿರುವ ಕಲ್ಲಿನ ಕಟ್ಟಡವೇ ದಾವಲ ಮಲಿಕ್ ಇದು ಹಿಂದೂ ಮುಸ್ಲಿಂ ಭಾವೈಕ್ಯತೆಯ ಕೇಂದ್ರವಾಗಿದೆ. ಪ್ರತಿ ಅಮವಾಸ್ಯೆ ದಿನದಂದು ಸಾವಿರಾರು ಹಿಂದೂ-ಮುಸ್ಲಿಂ ಭಕ್ತರು ದರ್ಶನ ಪಡೆದು ತಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಂಡಿದ್ದಾರೆ.

**ಕಣಗಿನಹಾಳ**

ಜಿಲ್ಲೆ : ೧೦ ಕಿ.ಮೀ.



ಏಷ್ಯಾ ಖಂಡದ ಪ್ರಪ್ರಥಮವಾಗಿ ಕಣಗಿನಹಾಳ ಗ್ರಾಮದಲ್ಲಿ "ಕೃಷಿ ಪತ್ತಿನ ಸಹಕಾರ ಸಂಘವನ್ನು ಪ್ರಾರಂಭಿಸಿದವರು ಶ್ರೀ ಸಿದ್ಧನಗೌಡ ಸಣ್ಣರಾಮನಗೌಡ ಪಾಟೀಲರವರು (೧೮೪೩-೧೯೩೩)''

ಈ ಗ್ರಾಮದಲ್ಲಿ ಇರುವ ನಾರಾಯಣದೇವರ ಗುಡಿ ಸುಮಾರು ಕ್ರಿ.ಶ. ೧೨ನೇ ಶತಮಾನದಲ್ಲಿ ಚಾಲುಕ್ಯ ಶೈಲಿಯಲ್ಲಿ ನಿರ್ಮಾಣಗೊಂಡಿರುವ ಗುಡಿಯಾಗಿದ್ದು, ಗರ್ಭಗೃಹ, ಅಂತರಾಳ ಹಾಗೂ ನವರಂಗವನ್ನು ಹೊಂದಿದೆ. ಗರ್ಭಗೃಹದ ಮೂಲೆಯಲ್ಲಿರುವ ಕಿರುಪ್ರಮಾಣದ ಉಮಾಮಹೇಶ್ವರ ಶಿಲ್ಪವಿದ್ದು, ಇದರ ಬಾಗಿಲವಾಡದ ಲಲಾಟದಲ್ಲಿ ಗಜಲಕ್ಷ್ಮೀ ಇದೆ. ದುಂಡಾದ ಅಡ್ಡಕೊಯ್ತದ ನಾಲ್ಕು ಸ್ಥಂಭಗಳು ನವರಂಗ ಛತ್ತನ್ನು ಹೊತ್ತು ನಿಂತಿದ್ದು, ಸುಂದರವಾಗಿ ಬಿಡಿಸಿದ ಕಮಲದ ಮೊಗ್ಗು ಅಲಂಕರಿಸಿದೆ.

**ಕೋಟುಮಚಗಿ : ಸೋಮೇಶ್ವರ ಗುಡಿ**

ಜಿಲ್ಲೆ: ೧೮ ಕಿ.ಮೀ.

ಇದು ಶಾಸನೋಕ್ತ ಸ್ವಯಂಭು ಸೋಮೇಶ್ವರ ಗುಡಿಯಾಗಿದ್ದು ಸುಮಾರು ಕ್ರಿ. ಶ. ೧೧ ನೇ ಶತಮಾನದಲ್ಲಿ ನಿರ್ಮಾಣಗೊಂಡ ಚಾಲುಕ್ಯ ಶೈಲಿಯ ಗುಡಿ ಇದಾಗಿದೆ. ಗರ್ಭಗೃಹ, ಅಂತರಾಳ, ನವರಂಗ ಹಾಗೂ ನಂತರದಲ್ಲಿ ಸೇರಿರುವ ತೆರೆದ ಮುಖಮಂಟಪವನ್ನು ಹೊಂದಿದೆ. ಎತ್ತರದ ಪ್ರಾಕಾರದ ಪ್ರವೇಶದ್ವಾರವನ್ನು ಕಪ್ಪು ಅಮೃತಶಿಲೆಯಿಂದ ರಚಿಸಲಾಗಿದ್ದು ಲಲಾಟದಲ್ಲಿ ಇರುವ ಉಮಾಮಹೇಶ್ವರ ಕೆತ್ತನೆ ಚಿತ್ತಾಕರ್ಷಕವಾಗಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು ನವರಂಗದಲ್ಲಿ ನಂದಿಯಿದೆ. ಹೊರಭಿತ್ತಿಯಲ್ಲಿ ಕಿರು ಶಿಖರ ಹಾಗೂ ಅಲಂಕಾರಿಕ ಕಂಬಗಳಿವೆ. ಗುಡಿಗೆ ದ್ರಾವಿಡ ಶೈಲಿಯ ಶಿಖರವಿದೆ.

**ಹೊಂಬಳ :ಶಂಕರಲಿಂಗ ಗುಡಿ:**

ಜಿಲ್ಲೆ ೨೦ ಕಿ.ಮೀ.




ಇದು ಶಂಕರಲಿಂಗ ಗುಡಿ ಎಂದು ಗುರುತಿಸುವ ದೇವಾಲಯ ಬಹುಶಃ ಶಾಸನೋಕ್ತ ಕುಮಾರ ಬೋಂತೇಶ್ವರ ಗುಡಿಯಾಗಿದ್ದಿರ ಬೇಕೆಂದೆನಿಸುತ್ತದೆ. ವಿಶಾಲವಾದ ಪ್ರಾಕಾರದಲ್ಲಿ ಎತ್ತರವಾದ ಸ್ಥಳದಲಿ ಪೂರ್ವಾಭಿಮುಖವಾಗಿರುವ ಈ ಗುಡಿಯು ಗರ್ಭಗೃಹ, ನವರಂಗ ಹಾಗೂ ಸಭಾಮಂಟಪಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಸ್ವಯಂಭೂ ಲಿಂಗವಿದ್ದು, ಇದರ ಬಾಗಿಲವಾಡ ಆಕರ್ಷಕವಾಗಿದೆ. ನವರಂಗದಲ್ಲಿ ಐದು ದೇವಕೋಷ್ಟಗಳಿದ್ದು ಇವುಗಳಲ್ಲಿ ಉಮಾಮಹೇಶ್ವರ, ಅನಂತಪದ್ಮನಾಭ, ಮಹಿಶಮರ್ದಿನಿ ಹಾಗೂ ಗಣಪತಿ ಶಿಲ್ಪಗಳಿವೆ.

**ವೆಂಕಟಾಪುರ:**

ವೆಂಕಟೇಶ್ವರ ದೇವಾಲಯ

ಜಿಲ್ಲೆ ೧೬ ಕಿ.ಮೀ.

ಗದುಗಿನಿಂದ ವಾಯುವ್ಯಕ್ಕೆ ೧೬ ಕಿ.ಮೀ ದೂರದಲ್ಲಿ ಗುಡ್ಡದ ಮೇಲೆ ನೈಸರ್ಗಿಕ ಪರಿಸರದಲ್ಲಿರುವ ವೆಂಕಟೇಶ್ವರ ದೇವಾಲಯ ಒಂದು ಪವಿತ್ರ ಕ್ಷೇತ್ರವಾಗಿದೆ. ಈ ದೇವಾಲಯವು ಆಧುನಿಕ ಕಟ್ಟಡವನ್ನು ಹೊಂದಿದ್ದು ಇದನ್ನು ಸುಮಾರು ೧೫೦ ವರ್ಷಗಳ ಹಿಂದೆ ನಿರ್ಮಿಸಿದರೆಂದು ಹೇಳಲಾಗುತ್ತಿದೆ. ಗರ್ಭಗೃಹದಲ್ಲಿ ವೆಂಕಟೇಶನ ಸ್ಥಾನಿಕ ಮೂರ್ತಿಯಿದ್ದು, ಇದರ ಪಕ್ಕದಲ್ಲೇ ಲಕ್ಷ್ಮೀದೇವಿಯ ಆಸೀನ ವಿಗ್ರಹವೂ ಇದೆ.

**ಇತರ ಪ್ರಾಚೀನ ದೇವಾಲಯಗಳು:**

ಸೂರ್ಯನಾರಾಯಣ ಗುಡಿ ಅಂತೂರು, ಈಶ್ವರ ದೇವಾಲಯ, ಅಸುಂಡಿ ಕೆರೆಯವ್ವನ ಗುಡಿ ಭೋಗೇಶ್ವರ ದೇವಾಲಯ ಎಲೆಶಿರೂರು, ಈಶ್ವರ ದೇವಾಲಯ, ಮೈಲಾರಲಿಂಗನ ಗುಡಿ ಕಣವಿ, ಕಲ್ಮೇಶ್ವರ ದೇವಸ್ಥಾನ, ವೀರಭದ್ರ ಗುಡಿ ಕುರ್ತಕೋಟಿ, ಸೋಮೇಶ್ವರ ಗುಡಿ ಕೋಟುಮಚಗಿ, ಮಲ್ಲಿಕಾರ್ಜುನ ದೇವಾಲಯ, ಬಸವಣ್ಣ ದೇವಾಲಯ ಚಿಂಚಲಿ, ಸೋಮೇಶ್ವರ ದೇವಾಲಯ, ಕೋಡಿ ಬಸವಣ್ಣನಗುಡಿ ನಾಗಾವಿ, ಶಂಭುಲಿಂಗೇಶ್ವರ ದೇವಾಲಯ, ಬೆಂತೂರು ಸೋಮೇಶ್ವರ ಹಾಗೂ ನಾರಾಯಣ ದೇವಾಲಯಗಳು ನೀಲಗುಂದ, ಈಶ್ವರ ಗುಡಿ ಬೆಳಹೊಡ, ನಾರಾಯಣ ಗುಡಿ, ಸೊರಟೂರು ಹಾಗೇ ಹರ್ತಿ ಗ್ರಾಮದಲ್ಲಿ ಬಸವಣ್ಣನ ದೇವಸ್ಥಾನಗಳು ಬಳಗಾನೂರಿನ ಶ್ರೀ ಚನ್ನವೀರ ಶರಣರಮಠ, ಇತ್ತೀಚಿನ ರಾಜರಾಜೇಶ್ವರಿ ದೇವಾಲಯವು ಪವಿತ್ರ ಪ್ರೇಕ್ಷಣೀಯ ಸ್ಥಳಗಳಾಗಿವೆ.

# ಗದಗ

ಗದಗ

ಗದಗ ಉತ್ತರ ಕರ್ನಾಟಕದ ಒಂದು ಜಿಲ್ಲೆ. ಇಲ್ಲಿ ಬೆಳೆಯಲ್ಪಡುವ ಮುಖ್ಯ ಬೆಳೆಗಳು ಜೋಳ, ಗೋಧಿ, ಮೆಕ್ಕೆಜೋಳ, ಬೇಳೆಗಳು, ನೆಲಗಡಲೆ, ಸೂರ್ಯಕಾಂತಿ, ಹತ್ತಿ, ಈರುಳ್ಳಿ ಮತ್ತು ಮೆಣಸಿನಕಾಯಿ.

**ಪ್ರಾಕೃತಿಕ ಪರಿಚಯ:**

ಇದು ಒಂದು ಒಳನಾಡು ಬಯಲು ಪ್ರದೇಶದ ಜಿಲ್ಲೆ. ಉತ್ತರದ ಗಡಿಯಲ್ಲಿ ಮಲಪ್ರಭೆ, ದಕ್ಷಿಣದ ಗಡಿಯಲ್ಲಿ ತುಂಗಭದ್ರೆ ನದಿಗಳು ಹರಿಯುತ್ತವೆ. ಇದಲ್ಲದೇ ಜಿಲ್ಲೆಯಲ್ಲಿ ಹರಿದಿರುವ ಬೆಣ್ಣೆಹಳ್ಳ, ರೋಣ ತಾಲೂಕಿನಲ್ಲಿ ಮಲಪ್ರಭಾ ನದಿಯನ್ನು ಸೇರುತ್ತದೆ. ಜಿಲ್ಲೆಯಾದ್ಯಂತ ಕಪ್ಪುಮಣ್ಣು, ಅಲ್ಲಲ್ಲಿ ಕೆಂಪು ಭೂಮಿಯೂ ಇದೆ.

**ಹವಾಮಾನ** :

ಉಷ್ಣಾಂಶದಿಂದ ಕೂಡಿದ ಹಿತಕರ ಮತ್ತು ಆರೋಗ್ಯಕರ ಹವಾಮಾನವನ್ನು ಜಿಲ್ಲೆಯೊಳಗೊಂಡಿದೆ. ಫೆಬ್ರುವರಿಯಿಂದ ಮೇ ವರೆಗೆ ಬೇಸಿಗೆ ಕಾಲ, ಜೂನ್ ದಿಂದ ಸಪ್ಟೆಂಬರವರೆಗೆ ಮುಂಗಾರು ಮಳೆಗಾಲದಿಂದ ಹವೆ ತಂಪಾಗಿರುತ್ತದೆ. ಅಕ್ಟೋಬರ್ – ನವ್ಹಂಬರ್ ತಿಂಗಳುಗಳಲ್ಲಿ

ಈಶಾನ್ಯ ಮಾರುತ ಕಾರಣವಾಗಿ ಮಳೆ ಬೀಳುವ ಸಾಧ್ಯತೆಗಳಿವೆ. ಡಿಸೆಂಬರದಿಂದ ಫೆಬ್ರುವರಿವರೆಗೆ ಚಳಿಗಾಲ. ಏಪ್ರೀಲ್ ಮೇ ತಿಂಗಳಲ್ಲಿ ಗರಿಷ್ಠ ಉಷ್ಣಾಂಶ ೪೨ ಸೆಂ. ಗ್ರೆ. ಮತ್ತು ಡಿಸೆಂಬರ್ ಜನೆವರಿ ತಿಂಗಳುಗಳಲ್ಲಿ ಕನಿಷ್ಠ ಉಷ್ಣಾಂಶ ೧೬ ಸೆಂ. ಗ್ರೇಡ್ ವರೆಗೂ ಇರುತ್ತದೆ.

ಗದಗದ ವಿಶೇಷ ಖಾದ್ಯ ಮಿರ್ಚಿ ಭಜಿಯನ್ನು ಸಾಮಾನ್ಯ ಭಜಿಯ ಹಾಗೆಯೇ ಎಣ್ಣೆಯಲ್ಲಿ ಕರಿದು ತಯಾರಿಸಲಾಗುತ್ತದೆ. ಆದರೆ ವಿಶೇಷತೆಯೆಂದರೆ ಅದರೊಳಗಿರುವ ಖಾರವಾದ ಮಿರ್ಚಿ ಅಂದರೆ ಹಸಿಮೆಣಸಿನಕಾಯಿ. ಇದು ಭಜಿಗೆ ಬೇಕಾದ ರುಚಿಯನ್ನು ನೀಡುತ್ತದೆ. ಇದು ಜಿಲ್ಲೆಯ ವಿಶೇಷ ಖಾದ್ಯ.

ಒಂದು ಕಾಲದಲ್ಲಿ ಗದಗ ಶಹರದಲ್ಲಿ ಎಲ್ಲೇ ನಿಂತು ಕಲ್ಲು ತೂರಿದರೂ ಅದು ಯಾವದಾದರೊಂದು ಪ್ರಿಂಟಿಂಗ್ ಪ್ರೆಸ್‌ಗೆ ಹೋಗಿ ಬೀಳುತ್ತದೆಂಬ ಪ್ರತೀತಿ ಇತ್ತು. ಅಕರ್ಷಕ ಮುದ್ರಣಾಲಯಗಳು ಗದಗನಲ್ಲಿದ್ದವು. ಮುದ್ರಣ ಕ್ಷೇತ್ರದಲ್ಲಿ ಕರ್ನಾಟಕದಲ್ಲೇ ಗದಗನ್ನು ಮೀರಿಸಿದವರಿಲ್ಲ.

**ಧಾರ್ಮಿಕ ಸಮನ್ವಯ::**

ಧರ್ಮ ಸಹಿಷ್ಣುತೆಗೆ ಇಡೀ ರಾಷ್ಟ್ರಕ್ಕೆ ಮಾದರಿಯಾಗಬಲ್ಲ ಜಿಲ್ಲೆ ಗದಗ. ವೈಷ್ಣವ ಸಂಪ್ರದಾಯದ ಶ್ರೀ ವೀರನಾರಾಯಣ ದೇವಾಲಯ, ಶೈವ ಸಂಪ್ರದಾಯದ ಶ್ರೀ ತ್ರಿಕೂಟೇಶ್ವರ ದೇವಾಲಯ ಹಾಗೂ ಇಸ್ಲಾಂ ಧರ್ಮದ ಜುಮ್ಮಾಮಸೀದೆ ಈ ಮೂರು ಧಾರ್ಮಿಕ ಸಂಸ್ಥೆ ಸೇರಿ ಒಂದೇ ಟ್ರಸ್ಟ್ ಇರುವುದು ವಿಶ್ವಕ್ಕೆ ಮಾದರಿ. ಶಿರಹಟ್ಟಿಯ ಫಕ್ಕೀರೇಶ್ವರ, ವರವಿಯ ಮೌನೇಶ್ವರ ಹಿಂದೂ- ಇಸ್ಲಾಂ ಎರಡೂ ಧರ್ಮಗಳ ಸಮನ್ವಯದ ಸಾಮರಸ್ಯ ಕೇಂದ್ರಗಳು. ಗದುಗಿನ ಶ್ರೀ ಜಗದ್ಗುರು ತೋಂಟದಾರ್ಯ ಮಠವಂತೂ ಸರ್ವಧರ್ಮಗಳಿಗೆ ಮುಕ್ತವಾಗಿ ಬಾಗಿಲನ್ನು ತೆರೆದು ಸರ್ವಧರ್ಮೀಯರ ಶ್ರದ್ಧಾಕೇಂದ್ರ. ಲಕ್ಷ್ಮೇಶ್ವರದ ದೂದ ಪೀರಾ ಸೂಫೀ ಗದ್ದುಗೆಯು ಹಿಂದೂ – ಮುಸ್ಲಿಂಮರಿಗೆ ಸಮಾನ ಪೂಜ್ಯ ಸ್ಥಳ.

**ಸಾಹಿತ್ಯ – ಸಂಸ್ಕೃತಿ – ಕ್ರೀಡಾಲೋಕ :**



ಕವಿ ಕುಮಾರವ್ಯಾಸನ ಕರ್ಮಭೂಮಿ, ಕವಿ ಚಾಮರಸನ ಜನ್ಮಭೂಮಿ (ನಾರಾಯಣಪುರ). ಗದಗ ಜಿಲ್ಲೆ, ಅಲ್ಲದೇ ರೋಣ ತಾಲೂಕಿನ ಸವಡಿ ಗ್ರಾಮದ ದುರ್ಗಸಿಂಹ, ಮುಳಗುಂದ ದನಯಸೇನ, ಮಲ್ಲಿಷೇಣ, ಬಾಲಲೀಲಾ ಮಹಾಂತ ಶಿವಯೋಗಿ, ಲಕ್ಕುಂಡಿಯ ಮುಕ್ತಾಯಕ್ಕ, ಲಕ್ಷ್ಮೇಶ್ವರದ ಆಚಣ್ಣ, ಪರಮಭಕ್ತ ಕವಿ, ಸುರಂಗ ಕವಿ, ಬೆಟಗೇರಿಯ ಸಿದ್ಧಮಲ್ಲಾರ್ಯ, ದಾನಪಾರ್ಯ, ನರಗುಂದದ ಶ್ರೀಧರಾಚಾರ್ಯ ಮುಂತಾದ ಕವಿಕೋಗಿಲೆಗಳ ಪುಣ್ಯಧಾಮವಿದು.

ಆಧುನಿಕ ಸಾಹಿತ್ಯ ಕ್ಷೇತ್ರಕ್ಕೂ ಗದಗ ಜಿಲ್ಲೆಯ ಕೊಡುಗೆ ದೊಡ್ಡದು. ಹುಯಿಲಗೋಳ ನಾರಾಯಣರಾಯರು, ಕನ್ನಡ ಕುಲ ಪುರೋಹಿತರು ಆಲೂರು ವೆಂಕಟರಾಯರು, ಶಾಂತಕವಿಗಳು, ಸಂಗ್ಯಾ-ಬಾಳ್ಯಾ ಖ್ಯಾತಿಯ ಪತ್ತಾರ ಮಾಸ್ತರ, ರಂ. ಶ್ರೀ. ಮುಗಳಿ, ಡಾ|| ಆರ್. ಸಿ. ಹಿರೇಮಠ, ಕವಿ. ಸಂ. ಶಿ. ಭೂಸನೂರಮಠ, ಚೆನ್ನವೀರ ಕಣವಿ, ಸೋಮಶೇಖರ ಇಮ್ರಾಪುರ. ಎಂ. ಎಸ್. ಸುಂಕಾಪುರ, ಕೋಡಿಕೊಪ್ಪದ ಬಸವರಾಜ ಶಾಸ್ತ್ರಿ, ಬಿ.ವಿ. ಮಲ್ಲಾಪುರ, ನಾಟಕಕಾರ ಗರೂಡ ಸದಾಶಿವರಾಯರು, ಎಚ್.ಎನ್. ಹೂಗಾರ, ಫ. ಶಿ. ಭಾಂಡಗೆ, ಎನ್ಕೆ ಕುಲಕರ್ಣಿ, ಕೆ. ಬಿ. ಅಂಗಡಿ, ಜಿ. ಎನ್. ಜಾಡಗೌಡರ, ಎಂ. ಜೀವನ ಮುಂತಾದವರೆಲ್ಲ ಕನ್ನಡ ಸಾಹಿತ್ಯಕ್ಕೆ ಗದಗ ಜಿಲ್ಲೆ ಸಲ್ಲಿಸಿದ ಸಾಹಿತ್ಯ ಸುಮಗಳು.

ಖ್ಯಾತ ಅಂತರ ರಾಷ್ಟ್ರೀಯ ಕ್ರಿಕೆಟ ಕ್ರೀಡಾಪಟು ಸುನೀಲ್ ಜೋಶಿ, ಕಬಡ್ಡಿ, ಆಟಗಾರ್ತಿ ಸುನಿತಾ ಬಟ್ಟೂರ, ರಾಷ್ಟ್ರೀಯ ಅಥ್ಲೆಟ್ ವಿಲಾಸ ನೀಲಗುಂದ, ಸೈಕ್ಲಿಸ್ಟ ನೀಲಮ್ಮ ಮಲ್ಲಿಗವಾಡ ಇನ್ನೂ ಮೊದಲಾದ ಕ್ರೀಡಾ ಪ್ರತಿಭೆಗಳು ಗದಗ ಜಿಲ್ಲೆಯಲ್ಲಿದ್ದಾರೆ.

**ಗದಗ ಜಿಲ್ಲೆಯಲ್ಲಿರುವ ತಾಲೂಕುಗಳು :**

- ಗದಗ (ಶಹರ ಮತ್ತು ಗ್ರಾಮೀಣ)
- ಮುಂಡರಗಿ
- ನರಗುಂದ
- ರೋಣ
- ಶಿರಹಟ್ಟಿ

## ಗದಗ-ಶಹರ ತಾಲ್ಲೂಕು

**ಕುಮಾರವ್ಯಾಸ**

ಕುಮಾರವ್ಯಾಸ ಕನ್ನಡದ ಅತ್ಯುನ್ನತ ಕವಿಗಳಲ್ಲಿ ಒಬ್ಬ. ಕುಮಾರವ್ಯಾಸನ ಮೂಲ ಹೆಸರು ನಾರಾಯಣಪ್ಪ "ಗದುಗಿನ ನಾರಾಯಣಪ್ಪ" ಎಂದು ಸಾಮಾನ್ಯವಾಗಿ ಕುಮಾರವ್ಯಾಸನನ್ನು ಗುರುತಿಸಲಾಗುತ್ತದೆ. ಈತನ ಕಾವ್ಯ ನಾಮ ಕುಮಾರವ್ಯಾಸ. ಈತನ ಕಾಲ ಸುಮಾರು ಕ್ರಿ. ಶ. ೧೪೩೦ ಎಂದು ನಿಗದಿಪಡಿಸಿವೆ.

ಕುಮಾರವ್ಯಾಸನ ಹುಟ್ಟೂರು ಈಗ ಗದಗ ಜಿಲ್ಲೆಯಲ್ಲಿರುವ ಕೋಳಿವಾಡ ಗ್ರಾಮ; ಕಾವ್ಯರಚನೆಯನ್ನು ಮಾಡಿದ್ದು ಗದುಗಿನ ವೀರನಾರಾಯಣ ಗುಡಿಯಲ್ಲಿ. ಈಗಲೂ ಸಹ ಆ ಗುಡಿಯಲ್ಲಿ ಕುಮಾರವ್ಯಾಸನ ಕಂಬ ಎಂಬ ಒಂದು ಕಂಬವಿದೆ "ಕುಮಾರವ್ಯಾಸ ಈ ಕಂಬದ ಅಡಿಯಲ್ಲೇ ಭಾರತವನ್ನು ರಚಿಸಿ ಓದುತ್ತಿದ್ದ ಎಂಬ ಪ್ರತೀತಿ ಸಹ ಇದೆ.

ಕುಮಾರವ್ಯಾಸನ ಅತಿ ಪ್ರಸಿದ್ಧ ಕೃತಿ ಕರ್ಣಾಟ ಭಾರತ ಕಥಾಮಂಜರಿ. ಇದಕ್ಕೆ ಗದುಗಿನ ಭಾರತ, ಕನ್ನಡ ಭಾರತ, ಕುಮಾರವ್ಯಾಸ ಭಾರತ ಎಂದೂ ಹೆಸರು. ಮಹಾಕವಿ ವ್ಯಾಸರ ಸಂಸ್ಕೃತ ಮಹಾಭಾರತದ ಅನುವಾದ ಎನ್ನಬಹುದು. ಆದರೆ ಕೇವಲ ಅನುವಾದವಾಗಿ ಉಳಿಸದೆ ಕುಮಾರವ್ಯಾಸ ತನ್ನ ಕಾವ್ಯಸಾಮರ್ಥ್ಯವನ್ನು ಈ ಕೃತಿಯಲ್ಲಿ ಸಂಪೂರ್ಣವಾಗಿ ಧಾರೆಯೆರೆದಿದ್ದಾನೆ.

**ಪಂಚಾಕ್ಷರಿ ಗವಾಯಿಗಳು**



ಶ್ರೀ ಪಂಚಾಕ್ಷರ ಗವಾಯಿಗಳು ಗದುಗಿನಲ್ಲಿರುವ ಪ್ರಸಿದ್ಧ ಸಂಗೀತ ಆಶ್ರಮವಾದ "ಶ್ರೀ ವೀರೇಶ್ವರ ಪುಣ್ಯಾಶ್ರಮ" ದ ಸಂಸ್ಥಾಪಕರು.

ಸಂಗೀತಶಾಲೆಗಳ ಖರ್ಚು ತೂಗಿಸಲು ನಾಟಕ ಕಂಪನಿಯೊಂದನ್ನು ಪ್ರಾರಂಭಿಸಿ ಕೈಸುಟ್ಟುಕೊಂಡರು. ನಡುವೆ ೧೯೩೦ರಲ್ಲಿ ಬರಗಾಲ ಬಿದ್ದದ್ದರಿಂದ ಪಂಚಾಕ್ಷರಿ ಗವಾಯಿಗಳು ತಮ್ಮ ಶಿಷ್ಯರಿಗಾಗಿ ಪಟ್ಟ ಪಾಡು ಅಷ್ಟಿಷ್ಟಲ್ಲ. ಆಗ ಮುಂದೆ ಬಂದು ನೆರವು ನೀಡಿದವರು ಬಸರಿಗಿಡದ ವೀರಪ್ಪನವರು. ಇವರು ಗವಾಯಿಗಳಿಗಾಗಿ ಗದಗಿನಲ್ಲಿಯೇ ತಮ್ಮ ಜಾಗದಲ್ಲಿ ಒಂದು ತಗಡಿನ ಪಾಠಶಾಲೆ ಕಟ್ಟಿಸಿಕೊಟ್ಟು, ಧನ-

ಧಾನ್ಯದ ಸಹಾಯವನ್ನು ಸಹ ನೀಡಿದರು. ಈ ಸಂಗೀತಶಾಲೆಗೆ ಗವಾಯಿಗಳು "ಶ್ರೀ ವೀರೇಶ್ವರ ಪುಣ್ಯಾಶ್ರಮ" ಎಂದೇ ಹೆಸರಿಟ್ಟರು.

ಸುಮಾರು ನಾಲ್ಕು ವರ್ಷಗಳವರೆಗೆ ಗವಾಯಿಗಳು ಉದರ ರೋಗದಿಂದ ಬಳಲಿದರು. ಕೊನೆಗೆ ದಿನಾಂಕ ೧೧ ನೇ ಜೂನ್ ೧೯೪೪ ರಂದು ಪಂಚಾಕ್ಷರ ಗವಾಯಿಗಳು ವಿಶ್ವ ಸಂಗೀತದಲ್ಲಿ ಲೀನರಾದರು.

**ಭೀಮಸೇನ ಜೋಷಿ:**



ಪಂಡಿತ ಭೀಮಸೇನ ಜೋಷಿ, (ಗುರುರಾಜ ಜೋಷಿ) ಇವರು ೪ ಫೆಬ್ರುವರಿ ೧೯೨೨ ರಲ್ಲಿ ಗದಗ ಜಿಲ್ಲೆಯ ಗದಗ ತಾಲ್ಲೂಕಿನ ಹೊಂಬಳ ಗ್ರಾಮದಲ್ಲಿ ಜನಿಸಿದರು. ಹಿಂದುಸ್ತಾನಿ ಸಂಗೀತ ಪದ್ಧತಿಯ ಅತಿ ಪ್ರಸಿದ್ಧ ಗಾಯಕರಲ್ಲಿ ಒಬ್ಬರು. ಇವರು ಭಾರತ ರತ್ನ ಪ್ರಶಸ್ತಿ ಪಡೆದ ಮೊದಲು ಹಿಂದುಸ್ತಾನಿ ಸಂಗೀತ ಪದ್ಧತಿಯ ಗಾಯಕರು.

ಸಣ್ಣ ವಯಸ್ಸಿನಲ್ಲಿಯೇ ಸಂಗೀತ ಕಲಿಯಲೆಂದು ಮನೆಯನ್ನು ಬಿಟ್ಟು ಜೋಷಿಯವರು ಧಾರವಾಡ ಜಿಲ್ಲೆಗೆ ಹಿಂದಿರುಗಿ ಕುಂದಗೋಳದ ಪ್ರಸಿದ್ಧ ಗಾಯಕರಾದ ಸವಾಯಿ ಗಂಧರ್ವರ ಶಿಷ್ಯರಾದರು.

ಕನ್ನಡ ಭಾಷೆಯ ದಾಸಶ್ರೇಷ್ಟರ ಪದ್ಯಗಳಾದ ''ಭಾಗ್ಯದ ಲಕ್ಷ್ಮೀ ಬಾರಮ್ಮ'' ಮತ್ತು ''ಎನ್ನ ಪಾಲಿಸೋ'' ಹಾಡುಗಳನ್ನು ಸೊಗಸಾಗಿ ಗಾಯನ ಮಾಡಿದ್ದಾರೆ. ಇವು ಭೀಮಸೇನ ಜೋಷಿಯವರ ಮುಖ್ಯ ಆಲ್ಬಮ್ ಗಳಾಗಿವೆ.

**ವೀರನಾರಾಯಣ ದೇವಸ್ಥಾನ :**



ವೀರನಾರಾಯಣ ದೇವಸ್ಥಾನ ಗದಗನಲ್ಲಿದೆ. ಗದುಗಿನ ಮಹಾಭಾರತ ಅಥವಾ ಕರ್ನಾಟ ಭಾರತ ಕಥಾಮಂಜರಿ ರಚಿಸಿದ ಕುಮಾರವ್ಯಾಸ ಇದೇ ದೇವಸ್ಥಾನದಲ್ಲಿ ಕುಳಿತು ಮಹಾಭಾರತವನ್ನು ರಚಿಸಿದನೆಂದು ಹೇಳಲಾಗುತ್ತದೆ. ಆತ ದೇವಸ್ಥಾನದ ಯಾವ ಕಂಬದ ಕೆಳಗೆ ಕುಳಿತು ಪ್ರತಿದಿನ ಮಹಾಭಾರತ ಬರೆಯುತ್ತಿದ್ದನೋ ಇವತ್ತಿಗೂ ಅದು ಕುಮಾರವ್ಯಾಸ ಕಂಬವೆಂದೇ ಪ್ರಸಿದ್ದಿಯಾಗಿದೆ.

ಹೊಯ್ಸಳ ದೊರೆ ಬಿಟ್ಟಿದೇವನು ಶ್ರೀ ರಾಮಾನುಜಾಚಾರ್ಯ ರಿಂದ ದೀಕ್ಷೆ ಪಡೆದು ವೈಷ್ಣವನಾದ ಮೇಲೆ ಗುರುವಿನ ಆಜ್ಞೆಯಂತೆ ೧೧೧೭ರಲ್ಲಿ ಶ್ರೀ ವೀರನಾರಾಯಣ ದೇವಸ್ಥಾನ ಕಟ್ಟಿಸಿದನೆಂದು ಪ್ರತೀತಿ ಇದೆ. ಈತ ಕಟ್ಟಿಸಿದ ಪಂಚನಾರಾಯಣ ದೇವಸ್ಥಾನಗಳಲ್ಲಿ ಇದೂ ಒಂದು. ಚಾಲುಕ್ಯ, ಹೊಯ್ಸಳ ಹಾಗೂ ವಿಜಯನಗರ ಶಿಲ್ಪಗಳ ಸುಂದರ ಸಂಗಮ ಶ್ರೀ ವೀರನಾರಾಯಣ ದೇವಸ್ಥಾನ, ಗರ್ಭಗುಡಿ ಹಾಗೂ ಅದರ ಮೇಲಿನ ಶಿಲಾಗೋಪುರ ಚಾಲುಕ್ಯ ಶಿಲ್ಪದ ಮಾದರಿಯಲ್ಲಿದ್ದರೆ, ಗರುಡಗಂಭ, ರಂಗಮಂಟಪಗಳು ಹೊಯ್ಸಳ ಶಿಲ್ಪದ ಮಾದರಿಗಳಾಗಿವೆ. ಗುಡಿಯ ಮಹಾದ್ವಾರ ಗೋಪುರ ವಿಜಯನಗರ ಶೈಲಿಯದು.

**ತ್ರಿಕೂಟೇಶ್ವರ ದೇವಸ್ಥಾನ :**

"ಸ್ವಯಂಭೂ ಈಶ್ವರ". "ತ್ರೈಪುರುಷ", "ಸ್ವಯಂ ಭೂ ತ್ರಿಕೂಟೇಶ್ವರ" ಎಂದು ಕಾಲದಿಂದ ಕಾಲಕ್ಕೆ ಕರೆಯಿಸಿಕೊಂಡ ತ್ರಿಕೂಟೇಶ್ವರ ದೇವಸ್ಥಾನ ಕ್ರಿ. ಶ. ೧೦೦೨ ರಲ್ಲಿ ನಿರ್ಮಾಣವಾಗಿದೆ. ಇದು ಕಲ್ಯಾಣ ಚಾಲುಕ್ಯ- ವಾಸ್ತುಶಿಲ್ಪವಾಗಿದ್ದು, ಹೊಯ್ಸಳ ಹಾಗೂ ವಿಜಯನಗರ ಅರಸರಿಂದ ಇದು ಅಭಿವೃದ್ಧಿಗೊಂಡಿದೆ. ಗರ್ಭಗುಡಿಯಲ್ಲಿ ತ್ರಿಕೂಟೇಶ್ವರ ಸ್ಥಿತನಾಗಿದ್ದು ಇದು ಸ್ವಯಂಭೂ ಎಂದೂ, ಬ್ರಹ್ಮ, ವಿಷ್ಣು, ಮಹೇಶ್ವರರ ಪ್ರತಿರೂಪವೆಂದೂ "ಕೃತಪುರ ಮಹಾತ್ಮೆ" ಯಲ್ಲಿ ವಿವರಿಸಲಾಗಿದೆ.

**ಸರಸ್ವತಿ ದೇವಾಲಯ:**





ಗದುಗಿನ ತ್ರಿಕೂಟೇಶ್ವರ ದೇವಸ್ಥಾನದ ಪ್ರಾಕಾರದಲ್ಲಿರುವ ಸರಸ್ವತಿ ದೇವಾಲಯ "ಚಾಲುಕ್ಯರ ಶಿಲ್ಪಕಲೆಯ ವೈಭವಪೂರ್ಣ ಕಾಲಾವಧಿಯಲ್ಲಿ ನಿರ್ಮಾಣವಾದ ಉತ್ಕೃಷ್ಟ ದೇವಾಲಯಗಳಲ್ಲಿ ಒಂದು"ಎಂದು ವಿದ್ವಾಂಸರ ಪ್ರಶಂಸೆಗೆ ಪಾತ್ರವಾಗಿದೆ. ಈ ದೇವಾಲಯವು ಗರ್ಭಗೃಹ, ಅಂತರಾಳ, ಸಭಾಮಂಟಪ ಹಾಗೂ ಒಂದು ಮುಖ್ಯದ್ವಾರದಿಂದ ಕೂಡಿದೆ. ಗರ್ಭಗೃಹದಲ್ಲಿ ಸ್ಥಾಪಿತವಾದ ಸರಸ್ವತಿ ಮೂರ್ತಿ ಭಗ್ನಗೊಂಡಿದೆಯಾದರೂ ಅದರ ಮೂಲ ಚೆಲುವಿಕೆಗೆ ಸಾಕ್ಷಿಯಾಗಿ ನಿಂತಿದೆ. ಎತ್ತರದ ಪೀಠದಲ್ಲಿ ಹಂಸವಾಹಿನಿಯಾಗಿ ಪದ್ಮಾಸನದಲ್ಲಿ ಕುಳಿತಿರುವ ಶಾರದೆಯು ರತ್ನಹಾರ, ಸ್ತನಹಾರ, ಉದರಹಾರ, ತೋಳಬಂಧಿ, ಸೊಂಟಪಟ್ಟಿ, ಮುಕುಟ ಮುಂತಾದ ಆಭರಣಗಳಿಂದ ಅಲಂಕೃತಳಾಗಿದ್ದಾಳೆ. ಹೂವಿನ ಚಿತ್ರವುಳ್ಳ ನೆರಿಗೆಗಳಿಂದ ಕೂಡಿದ ಪಾರದರ್ಶಕದಂತಹ ಸೀರೆಯ ಕೆತ್ತನೆ ಶಿಲ್ಪಿಯ ಕಲಾಕೌಶಲ್ಯಕ್ಕೆ ಸಾಕ್ಷಿ ನುಡಿಯುವಂತಿದೆ. ಈ ಮೂರ್ತಿಯು ಭಗ್ನವಾಗಿದ್ದರಿಂದ ಕೆಲವು ವರ್ಷಗಳ ಹಿಂದೆ ಮತ್ತೊಂದು ಮೂರ್ತಿಯನ್ನು ಸ್ಥಾಪಿಸಲಾಗಿದೆ.

**ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ:**




ಈ ಮಠವು ೧೫ನೇಯ ಶತಮಾನದಲ್ಲಿ ಬದುಕಿ ಬಾಳಿದ ಶಿವಯೋಗಿ ಸೂರ್ಯ ಶ್ರೀ ಯಡೆಯೂರು ತೋಂಟದ ಶ್ರೀ ಸಿದ್ದಲಿಂಗ ಯತಿಗಳ ನೇರ ವಾರಸುದಾರಿಕೆಯ ಮಠ ಸದ್ಯ ಈ ಮಠದ ೧೯ ನೇಯ ಪೀಠಾಧಿಕಾರಿಗಳಾಗಿರುವವರು ಜಗದ್ಗುರು ಡಾ|| ಶ್ರೀ ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳು.

**ವೀರೇಶ್ವರ ಪುಣ್ಯಾಶ್ರಮ**



ಪೂಜ್ಯ ಶ್ರೀ ಹಾನಗಲ್ಲ ಕುಮಾರ ಸ್ವಾಮಿಗಳವರ ಕರುಣೆಯ ಕಂದರಾಗಿ ಬೆಳೆದ ಪೂಜ್ಯ ಶ್ರೀ ಪಂಚಾಕ್ಷರಿ ಗವಾಯಿಗಳವರಿಂದ ಶ್ರೀ ವೀರೇಶ್ವರ ಪುಣ್ಯಾಶ್ರಮ ಸ್ಥಾಪಿತವಾಯಿತು. ಈಗಿರುವ ಪೀಠಾಧಿಪತಿಗಳು ಉಭಯಗಾಯನ ವಿಶಾರದ ಪಂಡಿತ ಪೂಜ್ಯ ಡಾ. ಪಂ. ಪುಟ್ಟರಾಜ ಕವಿ ಗವಾಯಿಗಳವರು. ಗುರು ಶಿಷ್ಯರಿಬ್ಬರು ಅಂಧರಾಗಿದ್ದರು. ಇವರಿಂದ ಅಸಂಖ್ಯಾತ ದೀನರು, ಅನಾಥರು, ಅಂಧರು ತಮ್ಮ ಬದುಕಿಗೆ ಬೆಳಕನ್ನು ಕಂಡುಕೊಂಡಿದ್ದಾರೆ. ಈಗಲೂ ನೂರಾರು ಅನಾಥ ಅಂಧ ಮಕ್ಕಳಿಗೆ ಅನ್ನ ,ಆಶ್ರಯ, ಅರಿವು ನೀಡಿ ಸಲಹುತ್ತಿದ್ದಾರೆ

**ಮಸೀದಿಗಳು:**



ಕೆಲವು ಕಾಲ ವಿಜಾಪೂರ ಆದಿಲ್ ಶಾಹಿಗಳ ಆಡಳಿತಕ್ಕೆ ಒಳಪಟ್ಟ ಈ ನಗರದಲ್ಲಿ ಅನೇಕ ಮಸೀದಿಗಳು ದರ್ಗಾಗಳು ಇವೆ. ದಿಲೇರ್ ಖಾನ್ ಎಂಬ ಔರಂಗಜೇಬನ ಸೇನಾನಿ ಕಟ್ಟಿಸಿದನೆಂದು ಹೇಳಲಾಗುವ ಒಂದು ಕರೀಕಲ್ಲಿನ ಆಕರ್ಷಕ ಮಸೀದೆ ನಗರದ ಜವಳಿ ಬಜಾರ ಭಾಗದಲ್ಲಿ ಇದೆ. ಜಾಮೀ ಮಸೀದೆ, ವೀರನಾರಾಯಣ ಗುಡಿ ಹಾಗೂ ತ್ರಿಕೂಟೇಶ್ವರ ದೇವಾಲಯಕ್ಕೆ ಸಂಬಂಧಿಸಿದಂತೆ ಒಂದೇ ಟ್ರಸ್ಟ್ ಇರುವುದು ಉಲ್ಲೇಖಾರ್ಹ.

**ಚರ್ಚುಗಳು**



ರೆ.ಕ್ಯಾನಲ್ ಸಿಸಿಲ್ ಎಸ್. ರೇವ್ಹಿಂಗಟನ್ ರಿಂದ ೧೯೦೧ ರಲ್ಲಿ ಸ್ಥಾಪಿತವಾದ ಎಸ್.ಪಿ.ಜಿ.ಚರ್ಚ ಮೇ, ೭-೨೦೦೦ ದಂದು ತನ್ನ ಶತಮಾನೋತ್ಸವವನ್ನು ಆಚರಿಸಿಕೊಂಡಿದೆ. ಬೆಟಗೇರಿಯ ಬಾಸೆಲ್ ಮಿಶನ್ ಚರ್ಚ ಹಾಗೂ ರೋಮನ್ ಕೆಥೋಲಿಕ್ ಚರ್ಚಗಳು ಕ್ರಿಶ್ಚಿಯನ್ ಬಂಧುಗಳ ದೇವಾರಾಧನೆ, ಆತ್ಮೋಜೀವಿಕ ಹಾಗೂ ಸಾಮಾಜಿಕ ಚಟುವಟಿಕೆಗಳಲ್ಲಿ ನಿರಂತರವಾಗಿ ತೊಡಗಿಸಿಕೊಂಡಿವೆ.

**ಮಲ್ಲರಾಯನ ಕಟ್ಟೆ, ಬೆಟಗೇರಿ:**



ಕರ್ನಾಟಕದ ವೀರಪರಂಪರೆಗೆ ಗದಗ- ಬೆಟಗೇರಿಯೂ ಹೊರತಾಗಿಲ್ಲ ಗ್ರಾಮರಕ್ಷಣೆ ಹಾಗೂ ಮಹಿಳೆಯರ ಮಾನರಕ್ಷಣೆಗೆ ಹೋರಾಡಿ ಮಡಿದ ವೀರ ಸ್ಮಾರಕವಾಗಿ ನಿಲ್ಲಿಸಿದ ವೀರಗಲ್ಲುಗಳ ಸಮೂಹವೇ ಇಲ್ಲಿದೆ.

**ಭೀಷ್ಮ ಕೆರೆ :**

ಗದಗ-ಬೆಟಗೇರಿ ನಗರದ ಜೀವನಾಡಿಯಾಗಿರುವ ಭೀಷ್ಮಕೆರೆ ತುಂಬಾ ಪ್ರಾಚೀನವಾದದ್ದು. ಈ ಕೆರೆಯ ಒಟ್ಟು ೧೦೩ ಎಕರೆ ಕ್ಷೇತ್ರದ ಅಭಿವೃದ್ಧಿ ಕಾರ್ಯ ಕೈಗೊತ್ತಿಕೊಂಡಿದ್ದು ಈಗಾಗಲೇ ೪೪ ಎಕರೆ ಕ್ಷೇತ್ರದಲಿ ಹೂಳೆತ್ತುವ ಕಾರ್ಯ ಪೂರ್ತಿಗೊಂಡಿದೆ. ೧.೬೦ ಕಿಲೋ ಮೀಟರ್ ಉದ್ದದ ಜಾಗಿಂಗ್ ಪಥ ನಿರ್ಮಾಣವಾಗಿದೆಯಲ್ಲದೆ ಪಕ್ಷಿಗಳನ್ನಾಕರ್ಷಿಸಲು ಎರಡು ನಡುಗಡ್ಡೆಗಳು ನಿರ್ಮಾಣವಾಗಿವೆ. ಕೆರೆಯ ಸುತ್ತಲೂ ನೆಟ್ಟಿರುವ ಹೂ-ಗಿಡಗಳು, ವಿಶ್ರಾಂತಿಗಾಗಿ ನಿರ್ಮಿಸಿದ ಆಸನಗಳು, ಸಂಜೆ, ಕೆರೆಯನ್ನು ವಿಶಿಷ್ಟ ಕಾಂತಿಯಲ್ಲಿ ಮೀಯಿಸುವ ದೀಪಗಳಿಂದಾಗಿ ಕೆರೆ ಆಕರ್ಷಣೀಯವಾಗಿದೆ.

**ಪ್ರಾಣಿ ಸಂಗ್ರಹಾಲಯ:**



ಗದಗ ನಗರದಿಂದ ಸುಮಾರು ೩ಕಿಮಿ ದೂರದಲ್ಲಿರುವ ನಗರ ವ್ಯಾಪ್ತಿಗೆ ಸೇರಿದ ಬಿಂಕದಕಟ್ಟಿ ಪ್ರಾಣಿ ಸಂಗ್ರಹಾಲಯ ಗದಗ ನಗರದ ಜನತೆಗೆ ಮನರಂಜನೆಯ ಮತ್ತು ಆಕರ್ಷಕ ತಾಣವಾಗಿದೆ. ಬೆಟ್ಟದಲ್ಲಿ ದಟ್ಟವಾದ ಅರಣ್ಯವನ್ನು ಬೆಳಸಲಾಗಿದೆ. ಇಲ್ಲಿರುವ ಪರಿಸರದಲ್ಲಿ ಅನೇಕ ಪ್ರಾಣಿಗಳನ್ನು, ಪಕ್ಷಿಗಳನ್ನು ಇ೦೦µ◌೦uಇ ಮಾಡಲಾಗುತ್ತದೆ. ಉದ್ಯಾನವನಗಳು ಮಕ್ಕಳನ್ನು ಕೈ ಬೀಸಿ ಕರೆಯುತ್ತಿವೆ. ರಜಾ ದಿನಗಳಲ್ಲಿ ಪ್ರವಾಸಿಗಳಿಗೆ ವನಭೋಜನ ಸ್ಥಳವಾಗಿದೆ ಇಲ್ಲಿ ಅನೇಕ ಜಾತಿಯ ಗಿಡಮರ ಬೆಳೆಸಲಾಗುತ್ತದೆ. ನರ್ಸರಿ ಕೂಡಾ ಇದೆ.

# ಮುಂಡರಗಿ ತಾಲ್ಲೂಕು ಪ್ರವಾಸಿ ತಾಣಗಳು :
# ಡಂಬಳ, ಸೋಮೇಶ್ವರ ದೇವಾಲಯ, ತೋಂಟದದಾರ್ಯ ಮಠ, ಮಿನಿಡ್ಯಾಮ ಹಾಗೂ ವಿದ್ಯುತ್ ಉತ್ಪಾದನೆ, ಗುಮ್ಮಗೋಳ, ಕಪ್ಪತಗಿರಿ, ಗಂಗೆ ಭಾವಿ, ಶ್ರೀ ಕ್ಷೇತ್ರ ಶಿಂಗಟಾಲೂರು, ಕ್ಷೇತ್ರ ವನ

ಜಿಲ್ಲೆ: ೪೦ ಕಿ.ಮೀ.



ಮುಂಡರಗಿ ನಾಡು ಮೊದಲಿಗೆ ಧಾರವಾಡ ಜಿಲ್ಲೆಯಲ್ಲಿ ಲೀನವಾಗಿತ್ತು. ತದನಂತರದಲ್ಲಿ ಗದಗ ಜಿಲ್ಲೆಗೆ ಸೇರ್ಪಡೆಯಾಗಿದೆ. ಇದನ್ನು ನೋಡಿದಾಗ ಮುಂಡರಗಿಗೆ ೧೪ ಮಾಸವಾಡಿ ೧೪೦೦ರಲ್ಲಿ ಅಂತರಗತವಾಗಿದ್ದವು, ಈ ವಾಡಿ ಬಗೆಗೆ ಡಂಬಳ ಶಾಸನ ಒಂದು ತಿಳಿಸುತ್ತದೆ, ಇದರ ಕಾಲ ೧೨ನೇ ಶತಮಾನ.

"ಶ್ರೀ ಕುಂತಳ ವಿಷಯದ ದಕ್ಷಿಣ ಗಂಗಾ ನದಿಯೋತ್ತರ ತೀರಂ ಬಿಡಿದೊರ್ಪು ತಿರ್ಪ ಮಾಸವಾಡಿ ನಾಡಿದಮ್ಮ". ಹೀಗೆ ಈ ನಾಡನ್ನು ವರ್ಣಿಸಿದ್ದಾರೆ.

ಶ್ರೀ ಮತ್ಕುಂತ್ಯ ಭೂಮಿ ಕಾಮಿನಿಯ ವಕ್ತ್ರಾದರ್ಶಯಂ ವೊತ್ತ ಸದ್ದಾಮಂ ಶೋಭೆಗೆ ಮಾಸವಾಡಿಯ ಸುಗುಂನಾಡದಂತದಂ.

ಇದು ದಕ್ಷಿಣ ಗಂಗೆಯೆಂದು ಪ್ರಸಿದ್ದವಾಗಿದೆ. ತುಂಗಭದ್ರೆ ಉತ್ತರಕ್ಕಿರುವುದು ಸ್ಪಷ್ಟವಾಗಿ ತಿಳಿದುಬರುತ್ತದೆ.

ಮುಂಡರಗಿ ಎಂಬ ಗ್ರಾಮವು ಮುಂಡ ಎಂಬ ಆದಿವಾಸಿ ಜನಾಂಗದ ಮೂಲಕ ಬಂದಿರಬೇಕೆಂದು ಗ್ರಾಮನಾಮ ಶಾಸ್ತ್ರಜ್ಞರು ಅಭಿಪ್ರಾಯ ಪಟ್ಟಿದ್ದಾರೆ. (ಸಂಸ್ಕೃತ ನಿಷ್ಟರು ಮೃಡಗಿರಿ > ಮಂಡಗಿರಿ > ಮಂಡರಗಿ > ಮುಂಡರಗಿ ಆಗಿರಬೇಕೆಂದು ಊಹೆ. ಆನಪರರು ಈ ಪದವನ್ನು ಮುಂಡರಗಿಯ ಬೋಳಾದ ಗುಡ್ಡದಿಂದ ಮೊದಲು ಮಂಡರಗಿಯಾಗಿದ್ದು, ಮುಂದೆ ಮಂಡಗಿರಿ ಹೋಗಿ ಮುಂಡರಗಿ ಯಾಗಿರಬಹುದೆಂದು ಅಭಿಪ್ರಾಯ.

**ಡಂಬಳ**

ಜಿಲ್ಲೆ: ೨೦ ಕಿ.ಮೀ.

ಮುಂಡರಗಿ ತಾಲೂಕಿನ ಎರಡನೇ ದೊಡ್ಡ ಗ್ರಾಮವೇ ಡಂಬಳ. ಮುಂಡರಗಿಯಿಂದ ಗದಗಿಗೆ ಹೋಗುವ ಮಾರ್ಗದಲ್ಲಿ ೨೦ ಕಿ.ಮೀ. ಅಂತರದಲ್ಲಿದೆ ಬಾದಾಮಿಯ ಚಾಲುಕ್ಯರು ಕ್ರಿ.ಶ. ೫೪೦ ರಿಂದ ೭೫೨ರ ವರೆಗೆ ಆಳಿದರು ಎರಡನೇ ಪುಲಕೇಶಿ ಕಾಲದಲ್ಲಿ ಡಂಬಳವು ನೆಗಳೇ ಒಡತ್ತಿದೆಂಬುದನ್ನು ಕಾಣುತ್ತೇವೆ.

ಪುಲಕೇಶಿ ದೊರೆಯೊಳ ಕಲಕೆಲ್ಲ ತಿಳಿಯಾಗಿ ಬಲಕಾಣಕೇಳೊಡೆ ಬಸವ ಡಂಬಳದಲ್ಲಿ ಕಳಸದ ತೇರು ಎಳೆದಾಂವ.

ಕರೆ ಬಿತ್ತಿ ಡಂಬಳದ ದೋರೆಕೆರೆ ಬದಾಮಿ ಮರಗ್ಯಾನ ಕರುಣ ಪುಲಕೇಶಿ ಸಾರ್‍ಯಾನ ತೇರಿಗೆ ಜನದಾಗ ಕಡತಾವೋ ಡಂಬಳ ಶಾಸನಗಳಲ್ಲಿ ಧರ್ಮವೊಳಲು ಅಥವಾ ಧರ್ಮಪುರಿ ಎಂದು ಕರೆಯಲ್ಪಟ್ಟಿದೆ.

**ದೊಡ್ಡ ಬಸಪ್ಪನ ಗುಡಿ :**



ಇದರ ಕಾಲ ೧೨೮೩, ಈ ದೇವಾಲಯದ ದಕ್ಷಿಣದಲ್ಲಿ ಅಲಂಕೃತಗೊಂಡು ಮುಖಮಂಟಪ ಪೂರ್ವಕ್ಕೆ ನಂದಿ ಮಂಟಪ ಇದೆ. ಇಲ್ಲಿಯ ನಂದಿ ಸುಮಾರು ೫ ಅಡಿ ಎತ್ತರವಿದ್ದು, ಅತ್ಯಂತ ಆಕರ್ಷಕವಾಗಿದೆ. ಇದರ ಗರ್ಭಗುಡಿ ಹಾಗೂ ಮಂಟಪಗಳು ಚಚೌಕವಾಗಿದ್ದರು ಹೊರಭಾಗ ನಕ್ಷತ್ರ ಆಕಾರದಲ್ಲಿದೆ. ಗರ್ಭಗುಡಿಯಲ್ಲಿ ಲಿಂಗವಿದೆ. ಮಧ್ಯಭಾಗದ ಮಂಟಪದಲ್ಲಿ ಸುಮಾರು ೮೦ ಕ್ಕೂ ಹೆಚ್ಚು ಉಬ್ಬು ಮೂರ್ತಿಗಳು ಇವೆ. ಈ ದೇವಾಲಯವನ್ನು ರೆಬ್ಬರಸಬಾಚಿಕಬ್ಬೆಯ ಪುತ್ರ ಅಜ್ಜಯನಾಯಕ ಈ ದೇವಾಲಯವನ್ನು ಕಟ್ಟಿಸಿ ಹೆಮ್ಮಾಡಿ ಅರಸನಿಗೆ ೧೬ ಶೆಟ್ಟಿಗಳಿಂದ ಭೂಮಿಯನ್ನು ಕಂಡುಕೊಟ್ಟರು. ಈ ಪಟ್ಟಣದ ಸುತ್ತಮುತ್ತ ಸುಗಂಧವುಳ್ಳ ಭತ್ತದ ಕಾಲುವೆಗಳು ಆಡುವ ಹಂಸಗಳು, ಕೇಕೇ ಹಾಕುವ ನವಿಲುಗಳಿಂದ, ಅರಗಿಣಿಗಳಿಂದ ಶೋಭಾಯಮಾನವಾಗಿತ್ತೆಂದು ಶಾಸನಗಳಲ್ಲಿ ಬಣ್ಣಿಸಲಾಗಿದೆ.

**ಡಂಬಳದ ಕೆರೆ**:

ಕ್ರಿ.ಶ.೧೧೦೬ರಲ್ಲಿ ಕ್ರೋದಿ ನಾಮ ಸಂವತ್ಸರದಲ್ಲಿ ಪಶ್ಚಿಮ ಚಾಲುಕ್ಯ ಚಕ್ರವರ್ತಿ ಸೋಮೇಶ್ವರ ದೇವನು ಮಹಾಪ್ರಧಾನ, ತೇಗಿಮಯ್ಯ ದಂಡನಾಯಕನಾಗಿದ್ದು, ದೇವರಸ ಸ್ವಯಂಭೋಧೆಯವರ ಎದುರಿಗೆ ಗೋಣಸಮುದ್ರವೆಂದು ಕರೆಯಲ್ಪಡುವ ಕೆರೆಗೆ ಗೋಡೆ ನಿರ್ಮಿಸಿದ ವಿಷಯ ಅಬ್ಬೇಶ್ವರ ಶಾಸನದಲ್ಲಿ ತಿಳಿದುಬರುತ್ತದೆ. ಈ ಕೆರೆಯನ್ನು ವಿಕ್ಟೋರಿಯಾ ರಾಣಿ ಶಕೆ ೧೮೭೬-೭೭ ಈ ಕೆರೆಯನ್ನು ದುರಸ್ತಿ ಮಾಡಿಸಿ ಅದಕ್ಕೊಂಡು ಹೊಸ ತಿರುವನ್ನು ನೀಡಿದ್ದಾರೆ. ಈ ಕೆರೆಯಿಂದ ಜಲಾಯನ ಪ್ರದೇಶ ೪೪೫ ಎಕರೆ ಕೆರೆಯ ಉದ್ದ ೫೭೭೫ ಅಡಿ ಹೊಡಿಯ ಉದ್ದ ೩೦೦ ಅಡಿ, ನೀರಾವರಿ ಕ್ಷೇತ್ರ ೨೯೦೦ ಎಕರೆ, ಕಾಲುವೆ ಉದ್ದ ೫ ಕಿ.ಮೀ. ಗಳಿರುವ ವಿವರಗಳಿವೆ.

**ಸೋಮೇಶ್ವರ ದೇವಾಲಯ**



ಈ ದೇವಾಲಯವು ದೊಡ್ಡ ಬಸಪ್ಪನ ಗುಡಿಯ ಎದುರಿಗೆ ಕಾಣಿಸುತ್ತದೆ. ಅದರ ಮೇಲ್ಛಾವಣಿ ಆಕಾರದಿಂದಾಗಿ ಡಬ್ಬುಗಲ್ಲುಗುಡಿ ಯೆಂದು ಕರೆಯುವ ರೂಡಿಯಿದೆ. ಇದರ ಮಂಟಪ ಮುಂಜೂರು ಮೂರು ದಿಕ್ಕುಗಳಲ್ಲಿ ಮುಂಚಾಚಿದೆ. ಈ ಗುಡಿಯನ್ನು ಮಂಟಪ, ಅರ್ಧಮಂಟಪ (ಸುಕನಾಸಿ) ಹಾಗೂ ಗರ್ಭಗುಡಿಯೆಂದು ೩ ಭಾಗಗಳನ್ನಾಗಿ ವಿಗಂಡಿಸಿದ್ದಾರೆ. ಗರ್ಭಗುಡಿಯಲ್ಲಿರುವ ಶಿವಲಿಂಗ ಅರ್ಧಮಂಟಪದಲ್ಲಿ ನಂದಿ ಇರುವುದು.

**ತೋಂಟದದಾರ್ಯ ಮಠ:**



ಈ ಮಠವು ಕ್ರಿ.ಶ. ೧೯೭೨ ರಲ್ಲಿ ಶ್ರೀ ಜಗದ್ಗುರು ಅರ್ಧನಾರೀಶ್ವರ ಮಹಾಸ್ವಾಮಿಗಳಿಂದ ಸ್ಥಾಪಿಸಲ್ಪಟ್ಟಿದೆ. ಈ ಮಠವು ಡಂಬಳದ ಗದಗ ಸಂಸ್ಥಾನ ಮಠವೆಂದು ಹೆಸರಾಗಿದೆ. ೨೯-೦೭- ೧೯೭೪ರಲ್ಲಿ ೧೯ನೇ ಪೀಠಾಧಿಕಾರಿಗಳಾಗಿ ಈ ಶೂನ್ಯ ಸಿಂಹಾಸನವನ್ನೇರಿದ ಶ್ರೀ ಜಗದ್ಗುರು ಡಾ|| ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳು "ಶಿಷ್ಯರ ಸೇವೆಯೇ, ಶಿವನ ಪೂಜೆ" ಎಂಬ ಧ್ಯೇಯವನ್ನು ಶ್ರೀ ಮಠದ ಮೂಲಕ ಬಿತ್ತರಿಸುತ್ತಿದ್ದಾರೆ.

**ಮಿನಿಡ್ಯಾಮ ಹಾಗೂ ವಿದ್ಯುತ್ ಉತ್ಪಾದನೆ:**



ಮುಂಡರಗಿ ತಾಲೂಕ ಹಮ್ಮಿಗಿ ಗ್ರಾಮದ ಬಳಿ ತುಂಗಾಬದ್ರಾ ನದಿಗೆ ನಿರ್ಮಾಣಗೊಂಡ ಶಿಂಗಟಾಲೂರು ಏತನೀರಾವರಿ ಡ್ಯಾಮ ಹಾಗೂ ವಿದ್ಯುತ್ ಉತ್ಪಾದನಾ ಕೇಂದ್ರ ತಾಲೂಕಿನ ಪ್ರಮುಖ ಪ್ರೇಕ್ಷಣಿಯ ಸ್ಥಳಗಳಲ್ಲಿ ಒಂದು. ಜಿಲ್ಲಾ ಕೇಂದ್ರದಿಂದ ೬೭ ಕಿ.ಮೀ. ತಾಲೂಕಾ ಕೇಂದ್ರದಿಂದ ೨೭ ಕಿ.ಮೀ. ದೂರದಲ್ಲಿದ್ದು, ರೂ. ೭೦೦೦ ಕೋಟಿ ವೆಚ್ಚದ ಈ ಯೋಜನೆ ಮುಕ್ತಾಯದ ಹಂತದಲ್ಲಿದೆ.

**ಗುಮ್ಮಗೋಳ:**





ಗೋಣಿ ಬಸವೇಶ್ವರ ದೇವಸ್ಥಾನ ವಿಜಯನಗರ ಪತನದ ನಂತರ ಅಲ್ಲಲ್ಲಿ ಆಡಳಿತ ನಡೆಸಲು ಹುಟ್ಟಿಕೊಂಡ ಪಾಳೇಗಾರರ ಆಡಳಿತ ವ್ಯವಸ್ಥೆ ಬಳ್ಳಾರಿ ಜಿಲ್ಲೆಯ ಭಂಗಳಿಯಲ್ಲಿಯು ಇತ್ತು. ಆ ಸಮಯದಲ್ಲಿ ಪಂಚಗಣಾಧೀಶ್ವರಲ್ಲಿ ಒಬ್ಬರಾದ ಮದ್ವಾನಸ್ವಾಮಿಯ ಮಗನಾದ ಗೋಣಿ ಬಸವೇಶ್ವರರು ಧರ್ಮ ಪ್ರಚಾರಕ್ಕಾಗಿ ದೆಹಲಿ, ಸೂರತ ಸೇರಿದಂತೆ ೭೭೭ ಮಠಗಳನ್ನು ಕಟ್ಟಿಸಿದ ಉಲ್ಲೇಖವಿದೆ. ಅದರಲ್ಲಿ ಗುಮ್ಮಗೋಳ ಗೋಣಿಬಸವೇಶ್ವರ ಮಠವು ಒಂದು. ಈ ಮಠವು ಎರಡು ಭಾಗಗಳಲ್ಲಿ ವಿಗಂಡಿಸಲ್ಪಟ್ಟಿದೆ. ಗರ್ಭಗುಡಿಯ ಎದುರಿಗೆ ತೆರೆದ ಹೊಂಡ. ಇನ್ನೊಂದು ಭಾಗದಲ್ಲಿ ನವರಂಗವಿದ್ದು, ಕನ್ನಡ ನಾಡನ್ನಾಳಿದ ರಾಜರ ಲಾಂಛನಗಳನ್ನೆಲ್ಲ ಒಂದರ ಮೇಲೊಂದು ಜೋಡಿಸಿದಂತೆ ಸುಂದರವಾಗಿ ಕೆತ್ತಲ್ಪಟ್ಟ ಮೂರ್ತಿಗಳು ಆಕರ್ಷಕವಾಗಿವೆ. ಜಿಲ್ಲಾ ಕೇಂದ್ರದಿಂದ ೭೦ ಕಿ.ಮಿ. ತಾ.ಕೇಂದ್ರದಿಂದ ೩೦ ಕಿ.ಮೀ, ಇದ್ದು, ಮಿನಿ ಡ್ಯಾಮಗೆ ೨ ಕಿ.ಮೀ. ದೂರವಿದೆ.

**ಕಪ್ಪತಗಿರಿ**

ಜಿಲ್ಲಾ ಕೇಂದ್ರದಿಂದ ೩೦ ಕಿ.ಮೀ., ತಾಲೂಕಾ ಕೇಂದ್ರದಿಂದ ೩೦ ಕಿ.ಮೀ. ಅಂತರದಲ್ಲಿ ಮುಂಡರಗಿ ನಾಡಿನ ದಕ್ಷಿಣೋತ್ತರವಾಗಿ ಹಬ್ಬಿದೆ. ಎಪ್ಪತ್ತು ಗಿರಿಗಳನ್ನು ನೋಡುವುದಕ್ಕಿಂತ ಕಪ್ಪತ್ತಗಿರಿಯನ್ನು ನೋಡು ಎಂಬ ನಾಣ್ಣುಡಿ ಈ ಭಾಗದಲ್ಲಿ ಪ್ರಚಲಿತವಿದೆ. ಎಪ್ಪತ್ತಗಿರಿಗಳಲ್ಲಿ ಕಾಣುವ ಸೃಷ್ಟಿ ಸೌಂದರ್ಯ ಖಗಮೃಗಗಳು, ತರುಲತೆಗಳು, ಖನಿಜ ದ್ರವಗಳು, ವನಸ್ಪತಿಗಳು, ಗುಡಿಗುಂಡಾರಗಳು, ಪುಣ್ಯ ಕ್ಷೇತ್ರಗಳು ತೀರ್ಥಗಳೆಲ್ಲವು ಈ ಗುಡ್ಡದೊಂದಿಗೆ ಇವೆ. ಗದಗ, ಮುಂಡರಗಿ, ಶಿರಹಟ್ಟಿ ತಾಲೂಕುಗಳಿಗೆ ಆಸರೆಯಾಗಿ ನಿಂತ ಈ ಗಿರಿ ಮೂರು ಪರ್ವತಗಳ ಸಂಗಮ ಸ್ಥಾನ. ೧) ಎರಮಲೆ ಬೆಟ್ಟ, ೨) ದ್ರೋಣಗಿರಿ, ೩) ಕಪ್ಪತ್ತಗಿರಿ.

**ಗಂಗೆ ಭಾವಿ :**





ಈ ಬಾವಿಯ ನೀರು ಸೇವನೆ ಮಾಡುವುದರಿಂದ ಜನರ ರೋಗರುಜನಗಳು ದೂರವಾಗುತ್ತವೆ ಎಂಬ ಭಾವನೆಯಿದೆ. ಈ ಭಾವಿಯಿಂದ ತುಂಗಭದ್ರೆಯ ದಡದಲ್ಲಿರುವ ಶಿಂಗಟಾಲೂರು ವೀರಭದ್ರ ಸ್ವಾಮಿಯ ದೇವಾಲಯದ ವರೆಗೂ ಇದೆ. ಇದೇ ರಚನೆ ೧೧ ರಿಂದ ೧೬ ಶತಮಾನದಲ್ಲಿರಬೇಕೆಂಬ ಊಹೆ. ಕಪ್ಪತ್ತಮಲ್ಲಯ್ಯನ ದರ್ಶನಕ್ಕೆ ಬರುವವರೆಲ್ಲ ಗಂಗಿಭಾವಿಯ ಪುಣ್ಯೋದಕ ಸೇವಿಸಿಯೇ ಮಲ್ಲಯ್ಯನ ದರ್ಶನಕ್ಕೆ ಹೋಗುತ್ತಾರೆ. ಈ ಗುಡಿಯ ಪಕ್ಕದಲ್ಲಿ ೫೭ ಅಡಿ ಆಳ ಭಾವಿಯಿದ್ದು, ೫೭ ಕಲ್ಲಿನ ಪಾವುಟಿಗೆಗಳು ಇವೆ.

**ಕಪ್ಪತ್ತ ಮಲ್ಲಯ್ಯನ ಗುಡಿ:**



ಈ ಭಾಗದ ಎಲ್ಲಾ ದೇವಾಲಯಗಳಿಗಿಂತ ಹಿರಿದಾಗಿದೆ. ಮಲ್ಲಯ್ಯ ಗವಿಯಲ್ಲಿದ್ದು, ಮುಂದೆ ಗುಡಿ ರ್ಮಿಸಲಾಗಿದೆ. ಮುಂದೆ ಗುಡಿಯ ಮೇಲ್ಭಾಗದಲ್ಲಿ ಸುಂದರವಾದ ಗೋಪುರ ಕಳಸಗಳಿವೆ. ಶ್ರಾವಣ ಮಾಸದಲ್ಲಿ ಜಾತ್ರೆ ನಡೆಯುತ್ತದೆ. ಸತ್ಯಂ, ಶಿವಂ, ಸುಂದರಂ. ಎಂಬುದರ ಅರ್ಥವನ್ನು ಈ ಕಪ್ಪತ್ತೇಶ್ವರನ ಸಾನಿಧ್ಯದಲ್ಲಿ ಪಡೆಯಬಹುದಾಗಿದೆ.

**ಶ್ರೀ ಕ್ಷೇತ್ರ ಶಿಂಗಟಾಲೂರು:**



ತುಂಗಭದ್ರೆ ದಂಡೆಯ ಮೇಲಿರುವ ಪುಣ್ಯ ಕ್ಷೇತ್ರ ಜಿಲ್ಲಾ ಕೇಂದ್ರದಿಂದ ೭೦ ಕಿ.ಮೀ. ತಾಲೂಕಾ ಕೇಂದ್ರದಿಂದ ೨೫ ಕಿ.ಮೀ. ಅಂತರದಲ್ಲಿದೆ. ಈ ಪುಣ್ಯ ಕ್ಷೇತ್ರ ಆದಿದೇವತೆ ಶ್ರೀ ವೀರಭದ್ರೇಶ್ವರ. ಕಪ್ಪತ್ತಗಿರಿಯ ದಕ್ಷಿಣಕ್ಕೆ ಇರುವ ತುಂಗಭದ್ರೆ ಪೂರ್ವಾಭಿಮುಖವಾಗಿ ಹರಿದು, ಮುಂದೆ ವೀರಭದ್ರ ಸ್ವಾಮಿ ದೇವಸ್ಥಾನದ ಮುಂದೆ ಉತ್ತರಾಭಿಮುಖವಾಗಿ ಸುಮಾರು ೩-೪ ಪರ್ಲಾಂಗದ ಮೇಲೆ ಡೊಂಕಾಗಿ ಪೂರ್ವಕ್ಕೆ ಹರಿದಿದ್ದಾಳೆ. ಇದು ೧೦ನೇ ಶತಮಾನದಿಂದಲು ಪ್ರಸಿದ್ಧ ದೇವಸ್ಥಾನವಾಗಿದೆ. ಆಕಳುವೊಂದು ಈ ಗುಂಡಕ್ಕೆ ಮೇಲು ಬಂದಾಗ ಒಂದು ಮರಡಿಯ ಮೇಲೆ ಹಾಲು ಕರೆಯುತ್ತಿತ್ತಂತೆ ಅದನ್ನು ಕೆಲವು ಸಾಧುಗಳು ನೋಡಿ ಆ ಮರಡಿಯನ್ನು ಅಗೆದಾಗ ಅಲ್ಲಿ ಸುಂದರವಾದ ವೀರಭದ್ರ ಮೂರ್ತಿ ಗೋಚರಿಸಿತಂತೆ ಅಂದಿನಿಂದ ಈ ದೇವಸ್ಥಾನಕ್ಕೆ "ವೀರಣ್ಣ ಎದ್ದ ಮರಡಿ" ಎಂದು ಕರೆಯುತ್ತಾರೆ. ಕೊಪ್ಪಳ ತಾಲೂಕಿನ ಕವಲೂರಿನ ಶಾಸನವೊಂದರಲ್ಲಿ ಇದರ ಕಾಲ ೧೧೩೩ ರಿಂದ ೧೧೮೮ರ ಮಧ್ಯದಲ್ಲಿದ್ದು, ಇದರಲ್ಲಿ ಶಿಂಗಟಾಲೂರಿನ ಮಹಾಮಂಡಲೇಶ್ವರ ಬಾಚಿ ದೇವ ಆತನ ಕುಮಾರ ಚಿಡಿಗಿ ದೇವನ ಪ್ರಸ್ತಾಪವಿದೆ.

**ಕ್ಷೇತ್ರ ವನ**



ಶ್ರೀ ಕ್ಷೇತ್ರಕ್ಕೆ ಬರುವ ಭಕ್ತಾದಿಗಳ ಮನತಣಿಸಲು ಈಗ ಸುಂದರವಾದ ವನ ನಿರ್ಮಾಣ ಮಾಡಿದ್ದಾರೆ. ಈ ವನದಲ್ಲಿ ಕೆತ್ತನೆಯ ಸುಂದರವಾದ ಮಕ್ಕಳ ಮನ ತಣಿಸುವ ಮೂರ್ತಿಗಳು ಇವೆ.

**ನವೋದಯ ಶಾಲೆ – ಕೊರ್ಲಹಳ್ಳಿ:**



ತಾಲೂಕಾ ಕೇಂದ್ರದಿಂದ ೧೦ ಕಿ.ಮೀ. ದೂರದಲ್ಲಿದೆ. ಗದಗ ಜಿಲ್ಲೆಯ ಕೇಂದ್ರಿಯ ನವೋದಯ ಶಾಲೆ. ದಿನಾಂಕ: ೦೧-೦೨-೧೯೯೯ ರಂದು ಪ್ರಾರಂಭಗೊಂಡುಸುಸಜ್ಜಿತವಾದ ಕಟ್ಟಡವನ್ನು ಹೊಂದಿದೆ.

**ಮುಂಡರಗಿ ಅನ್ನದಾನೇಶ್ವರ ಮಠ:**

ಧರ್ಮ, ಸಂಸ್ಕೃತಿ ಪ್ರಸಾರ ಸಾಹಿತ್ಯ ಕೃತಿಗಳ ಪ್ರಕಟಣೆ ಶಿಕ್ಷಣ ದಾಸೋಹಗಳ ಮೂಲಕ ಈ ನಾಡಿನ ಗಮನ ಸೆಳೆದಿರುವ ಮುಂಡರಗಿ ಶ್ರೀ ಅನ್ನದಾನೇಶ್ವರ ಮಠ ಸಮಾಜಮುಖಿಯಾಗಿ ಕಾರ್ಯನಿರ್ವಹಿಸುತ್ತಿದೆ. ಸದ್ಯದ ಪೀಠಾಧಿಪತಿಗಳಾಗಿರುವ ಶ್ರೀ ಪೂಜ್ಯ ಜಗದ್ಗುರು ಡಾ|| ಅನ್ನದಾನೇಶ್ವರ ಮಹಾಸ್ವಾಮಿಗಳು ಕನ್ನಡ, ಸಂಸ್ಕೃತ, ಹಿಂದಿ ತ್ರಿಭಾಷಾ ಪಂಡಿತರಾಗಿದ್ದು, ಅನೇಕ ಸಾಹಿತ್ಯ ಕೃತಿಗಳನ್ನು ರಚಿಸಿದ ವಿದ್ವಾಂಸರಾಗಿದ್ದಾರೆ. ಸಾಹಿತ್ಯ ಸಾಧನೆಗಾಗಿ ಕರ್ನಾಟಕ ವಿಶ್ವವಿದ್ಯಾಲಯವು ಪೂಜ್ಯರಿಗೆ ಡಾಕ್ಟರೇಟ ಪದವಿ ನೀಡಿ ಗೌರವಿಸಿದೆ ಶ್ರೀ ಮಠದ ಪ್ರಕಾಶನ ಸಂಸ್ಥೆಯಿಂದ ನೂರಾರು ಪುಸ್ತಕಗಳು ಪ್ರಕಟವಾಗಿವೆ. ಹಸ್ತ ಪ್ರತಿಗಳ ಸಂಗ್ರಹಣೆಗಳು ಕೂಡಾ ಇವೆ.

**ಪವನ ಯಂತ್ರಗಳು**



ಕಪ್ಪತ್ತಗಿರಿಯಲ್ಲಿ ಅನೇಕ ಖನಿಜ ಸಂಪತ್ತುಗಳ ಸದ್ಬಳಕೆಯೊಂದಿಗೆ ಗಾಳಿಯಿಂದ ವಿದ್ಯುಚ್ಚಕ್ತಿ ತಯಾರಿಸುವ ಪವನ ಯಂತ್ರಗಳು ಬೆಟ್ಟದ ತುಂಬೆಲ್ಲ ಹರಡಿಕೊಂಡಿದ್ದು, ಸುತ್ತಮುತ್ತಲಿನ ಗ್ರಾಮಗಳಿಗೆ ವಿದ್ಯುತ್ತನ್ನು ಪೂರೈಸುತ್ತದೆ.

**ಇತರೆ ಪ್ರಾಚೀನ ದೇವಾಲಯಗಳು**

ನಾಗೇಶ್ವರ (ತ್ರೈಪುರುಷ) ದೇವಾಲಯ ಆಲೂರ, ಶ್ರೀ ಸಿದ್ದೇಶ್ವರ ಗುಡಿ ಡೋಣಿ, ಈಶ್ವರ ಗುಡಿ (ಮೂಲಸ್ಥಾನದ ಕಲಿದೇವೆ ಗುಡಿ) ತಾಂಮ್ರಗುಂಡಿ, ಅಹೋಬಲ ನರಸಿಂಹಸ್ವಾಮಿ ಗುಡಿ, ಭರತೇಶ್ವರ ಗುಡಿ ಬರದೂರು, ಸೋಮೇಶ್ವರ ಗುಡಿ, ಬಿದರಹಳ್ಳಿ, ಹನುಮಂತ ಗುಡಿ, ವೆಂಕಟೇಶ್ವರ ದೇವಾಲಯ ಈಶ್ವರಗುಡಿ, ದಿಡಿಗೇಶ್ವರ ಗುಡಿ ಮೇವುಂಡಿ ಬ್ರಹ್ಮ ದೇವರ ಗುಡಿ, ಮಹಾಬಲೇಶ್ವರ ಗುಡಿ, ಶಿರೂರು- ಇವು ಇತರ ಉಲ್ಲೇಖಾರ್ಹ ಪ್ರಾಚೀನ ದೇವಾಲಯಗಳು. ಬಿದರಹಳ್ಳಿಯಲ್ಲಿ ೧೨ ವರ್ಷಕ್ಕೊಮ್ಮೆ ವಿಶೇಷ ಕಾರ್ಯಕ್ರಮ ಸಿಡಿ ಹಬ್ಬ ನೋಡಲು ರುದ್ರಭಯಂಕರವಾಗಿರುತ್ತದೆ. ಇದನ್ನು ನೋಡಲು ಬೇರೆ ರಾಜ್ಯಗಳಿಂದ ಸಹಸ್ರ ಸಂಖ್ಯೆಯಲ್ಲಿ ಪಾಲ್ಗೊಳ್ಳುವರು. ಇದು ಐತಿಹಾಸಿಕ ಹಿನ್ನೆಲೆಯನ್ನು ಹೊಂದಿದೆ.

ಮುಂಡರಗಿ ನಾಡಿನಲ್ಲಿ ಹೇರಳವಾದ ಹಸ್ತ ಪ್ರತಿ ಭಂಡಾರ ಹಾಗೂ ಪ್ರಾಚೀನ ಶಾಸನಗಳು ಕೂಡಾ ದೊರೆತಿವೆ. ಇದರಿಂದ ಮುಂಡರಗಿ ನಾಡು ಶ್ರೀಮಂತವಾದ ಇತಿಹಾಸವನ್ನು ಸಾರಿ ಹೇಳುತ್ತದೆ.

# ನರಗುಂದ ತಾಲ್ಲೂಕು ಪ್ರವಾಸಿ ತಾಣಗಳು : ಹೋರಾಟದ ಪರಂಪರೆ, ದಂಡೇಶ್ವರ ಗುಡಿ, ಶಂಕರಲಿಂಗ ದೇವಸ್ಥಾನ, ಪತ್ರೀವನ, ವೆಂಕಟೇಶ್ವರ ದೇವಸ್ಥಾನ, ಪರಮೇಶ್ವರ ಗುಡಿ

ಜಿಲ್ಲೆ: ೭೦ ಕಿ.ಮೀ.



**ಹಿನ್ನೆಲೆ :**

ಪ್ರಾಚೀನ ಕಾಲದಿಂದಲೂ ನರಗುಂದವು ತನ್ನ ವಿಶಿಷ್ಟ ಪ್ರಾಕೃತಿಕ ವಿಶೇಷಗಳಿಂದಾಗಿ ಹೆಸರು ಪಡೆದ ವಸತಿ ಪ್ರದೇಶವಾಗಿದೆ. ಶಾಸನಗಳಲ್ಲಿ ಪಿರಿಯ ನರಗುಂದ ವೆಂದು ಉಲ್ಲೇಖಿತವಾಗಿರುವ ತಾಲೂಕ ಸ್ಥಳವಾದ ನರಗುಂದ ಕರ್ನಾಟಕದ ಗಂಡು ಮೆಟ್ಟಿನ ನಾಡು ಸಂಗ್ರಾಮ ಭೂಮಿ-ಯೆಂದೇ ಪ್ರಸಿದ್ಧ. ಬಂಡಾಯದ ಭೂಮಿ ಸಾಹಿತ್ಯ ಸಾಂಸ್ಕೃತಿಕ ಸೊಗಡನ್ನು ಹೊರಹೊಮ್ಮಿಸಿದ ಈ ನರುಗಂಪಿನ ಪ್ರದೇಶಕ್ಕೆ ಕರ್ನಾಟಕ ಐತಿಹಾಸಿಕ ಪರಂಪರೆಯಲ್ಲಿ ಒಂದು ವಿಶಿಷ್ಟವಾದ ಸ್ಥಾನವಿದೆ.

ಇದನ್ನು ಹಿಂದೆ ಮಹಾಂತಗಡ ಎಂದು ಕರೆಯುತ್ತಿದ್ದರು. ಇತಿಹಾಸ ಪ್ರಕಾರ ಬೆಳ್ವೂಲದ ೩೦೦ ನಾಡಿನಲ್ಲಿ ಕಳಸಪ್ರಾಯವಾದ ನರಗುಂದದ ಬಗೆಗೆ ಪ್ರಮುಖ ಉಲ್ಲೇಖವಿದೆ.

ಸುಮಾರು ಕ್ರಿ.ಶ. ೧೧-೧೨ ನೇಯ ಶತಮಾನದಲ್ಲಿ ಬೆಳ್ವೂಲ ೩೦೦ ಆಡಳಿತಕ್ಕೆ ಒಳಪಟ್ಟಿತ್ತು ೧೮ ಅಗ್ರಹಾರಗಳಲ್ಲಿ ಒಂದಾದ ಇದು ಸೌಂದರ್ಯದ ಬೀಡಾಗಿತ್ತೆಂದು ಅನೇಕ ಶಾಸನಗಳು, ಕವಿಗಳು ವರ್ಣಿಸಿದ್ದುಂಟು.

೧೯೯೭ ರಲ್ಲಾದ ಜಿಲ್ಲೆಗಳ ಪುನರ್ವಿಂಗಡಣೆಯ ವೇಳೆ ನರಗುಂದವು ಗದಗ ಜಿಲ್ಲೆಯ ಭಾಗವಾಯಿತು.

ಕೃಷಿಯು ಇಲ್ಲಿಯ ಜನರ ಜೀವನಾಧಾರ. ಪ್ರಮುಖವಾಗಿ ಗೋವಿನಜೋಳ, ಹತ್ತಿ, ಸೂರ್ಯಕಾಂತಿ, ಹೆಸರು, ಶೇಂಗಾ ಹಾಗೂ ಇತರ ದ್ವಿದಳ ದಾನ್ಯಗಳನ್ನು ಬೆಳೆಯುತ್ತಾರೆ. ಇಲ್ಲಿ ಮಲಪ್ರಭೆ ಹಾಗೂ ಬೆಣ್ಣಿಹಳ್ಳವು ಕೃಷಿಗೆ ನೀರುಣಿಸುವ ಜೀವನ ನದಿಗಳಾಗಿವೆ. ನೀರಾವರಿಯಿಂದ ಬಾಳೆ, ಕಬ್ಬು, ಭತ್ತ ಬೆಳೆಗಳನ್ನು ಬೆಳೆಯಲಾಗುತ್ತದೆ.

**ಹೋರಾಟದ ಪರಂಪರೆ**:



ನರಗುಂದವೆಂದೊಡನೆ ''ಬಂಡಾಯ'' ವೆಂಬ ಶಬ್ದ ಅವಿಭಾಜ್ಯ ಅಂಗವಾಗಿ ಹಿಂಬಾಲಿಸಿ ಬರುತ್ತದೆ. ಸ್ವಾತಂತ್ರ್ಯ ಹೋರಾಟದಲ್ಲಿ ಇಲ್ಲಿಯ ಜನ ಪ್ರಮುಖ ಪಾತ್ರ ವಹಿಸಿರುವುದು ಎಲ್ಲರಿಗೂ ತಿಳಿದ ವಿಚಾರ. ''ಹೆತ್ತ ತಾಯಿ, ಹೊತ್ತ ಭೂಮಿ ಸ್ವರ್ಗಕ್ಕಿಂತ ಶ್ರೇಷ್ಠ'. ಹಿರಿಯ ಕವಿ ಸಿದ್ದಯ್ಯ ಪುರಾಣಿಕರಿಗಿಂತಲೂ ''ನೆನೆದೊಡೆ ನರ-ನರಗಳಲ್ಲಿ ಸ್ವಾತಂತ್ರ್ಯ ಪ್ರೇಮವನ್ನು ಹರಿಸುವ ನರಗುಂದ'' ವೆಂದಿದ್ದಾರೆ. ನರಗುಂದ ಸ್ವಾತಂತ್ರ್ಯಗಾಥೆ ದೇಶದ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ಅಚ್ಚಳಿಯದ ಮೊದಲ ಪುಟವನ್ನು ಅಲಂಕರಿಸುತ್ತದೆ. ಈ ಗಾಥೆಗೆ ಬಂಡಾಯವೆನ್ನುವುದಕ್ಕಿಂತ

ಸ್ವಾತಂತ್ರ್ಯ ಹೋರಾಟವೆಂಬ ಹೆಸರೇ ಸರಿ ಹೊಂದುತ್ತದೆ. ಈ ಹೋರಾಟಕ್ಕೆ ಕಾರಣ ಪುರುಷನಾದ ವೀರಕಲಿ ಭಾಸ್ಕರರಾವ ಭಾವೆ (ಬಾಬಾಸಾಹೇಬ) ಸ್ವಾಭಿಮಾನದ ಉಜ್ವಲ ದೇಶಭಕ್ತಿಯ ಸಂಕೇತವಾಗಿದ್ದಾರೆ. ನಾಡಿನ ಜನಮನದಲ್ಲಿ ನರಗುಂದದ ಜನಪದದಲ್ಲಿ ಅಭಿಮಾನದ ಹೆಮ್ಮೆಯ ಹಾಡಾಗಿ ಹರಿದಾಡಿ ಹಾಸು ಹೊಕ್ಕಾಗಿದೆ.

ನರಗುಂದ ಕಂಡ ಪ್ರಥಮ ಸ್ವಾತಂತ್ರ್ಯಕ್ಕೆ ೧೫೦ ವರ್ಷಗಳು ತುಂಬಿದರೆ ರಾಜ್ಯವೇ ನೆನೆಯುವಂತಹ ರೈತ ಬಂಡಾಯ ೨೮ ವಸಂತಗಳನ್ನು ಪೂರೈಸಿದೆ. ಅಲ್ಲದೇ ಕರ್ನಾಟಕದ ಏಕೀಕರಣಕ್ಕಾಗಿ ಶ್ರೀ ಶಿವಮೂರ್ತಿ ಸುರೇಬಾನರಂತಹ ಹೋರಾಟದ ಕೊಡುಗೆಯನ್ನು ಕಾಣಬಹುದು. ಇದು ಕರ್ನಾಟಕದ ಪ್ರಖ್ಯಾತ ಗಣಿತತಜ್ಞನಾದ, ಜೈನನೂ ಆದ ಶ್ರೀಧರಾಚಾರ್ಯನ ತವರೂರು.

**ಐತಿಹಾಸಿಕ ಸ್ಥಳಗಳು :**

ನರಗುಂದ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸುಮಾರು ೨೨ ಕ್ಕಿಂತ ಹೆಚ್ಚು ಶಿಲಾಶಾಸನಗಳು ಉಪಲಬ್ಧವಾಗಿವೆ. ಇಲ್ಲಿನ ವಾಸನ ಗ್ರಾಮದಲ್ಲಿ ಶಾತವಾಹನ ವಸಿಷ್ಠಪುತ್ರ ಪುಳಮಾಯಿ ಕಾಲದ ಬ್ರಾಹ್ಮಿಲಿಪಿಯ ಪಾಕೃತ ಭಾಷೆಯ ಶಾಸನವಿದೆ. ಕೊಣ್ಣೂರ ಗ್ರಾಮದಲ್ಲಿ ಪರಮೇಶ್ವರ ದೇವಾಲಯದಲ್ಲಿ ೧೨ನೇ ಶತಮಾನದಲ್ಲಿನ ಕನ್ನಡ ಶಾಸನ ಹಾಗೂ ಕ್ರಿ.ಶ. ೮೬೦ರ ಅಮೋಘವರ್ಷ ನೃಪತುಂಗನ ಕಾಲದ ತಾಮ್ರಶಾಸನ ಇದೆ. ಹದಲಿ ಗ್ರಾಮದಲ್ಲಿ ೧೦೪೮ರ ಕನ್ನಡ ಶಾಸನವಿದೆ. ಚಿಕ್ಕನರಗುಂದದಲ್ಲಿ ಶ್ರೀ ಬಸವೇಶ್ವರ ದೇವಾಲಯ ಹಾಗೂ ನರಗುಂದದ ೧೧೪೮ರ ಕನ್ನಡ ಶಾಸನ ಹಾಗೂ ಜೋಡು ಹನಮಂತ ದೇವಾಲಯವಿದೆ.

**ದಂಡೇಶ್ವರ ಗುಡಿ**



ಎದುರು ಬದುರಾಗಿ ಗರ್ಭಗ್ರಹ, ತೆರೆದ ಅರ್ಧಮಂಟಪವನ್ನು ಹೊಂದಿರುವ ದಂಡೇಶ್ವರ ಗುಡಿ ದ್ವಿಕೂಟವಾಗಿದೆ. ಈ ದ್ವಿಕೂಟಗಳಿಗೆ ಒಂದೇ ನವರಂಗವಿದ್ದು, ನವರಂಗದ ಉತ್ತರ ಭಾಗದಲ್ಲಿರುವ ಹೆಚ್ಚುವರಿ ಅಂಕಣವು ಇದನ್ನು ತ್ರಿಕೂಟವೆಂದು ಭ್ರಮೆ ಹುಟ್ಟಿಸುತ್ತದೆ. ನಕ್ಷತ್ರಾಕಾರದಲ್ಲಿರುವ ಈ ಗರ್ಭಗೃಹಗಳಲ್ಲಿ ಪ್ರಧಾನ ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಎದುರಿನ ಗರ್ಭಗೃಹದಲ್ಲಿ ಸೂರ್ಯವೀರನ ಮೇಲೆ ನಾರಾಯಣಮೂರ್ತಿ ಇದೆ. ಅರ್ಧಮಂಟಪಗಳನ್ನು ಆಕರ್ಷಕವಾದ ಮಕರ ತೋರಣಗಳನ್ನು ಅಲಂಕರಿಸಿದ್ದು, ಒಂದರಲ್ಲಿ ಆಸೀನ ಬ್ರಹ್ಮ, ಮಹೇಶ್ವರ, ವಿಷ್ಣು ಇತರೆ ಕೆತ್ತನೆ ಇದ್ದರೆ, ಇನ್ನೊಂದರಲ್ಲಿ ಸೂರ್ಯನ ಕೆತ್ತನೆ ಇದೆ. ಹೊರಭಿತ್ತಿಯ ವಿವಿಧ ಶಿಖರ ಮಾದರಿಗಳಿಂದ ಅಲಂಕೃತ ಕಂಬಗಳಿಂದ ಕೂಡಿದೆ.

**ಶಂಕರಲಿಂಗ ದೇವಸ್ಥಾನ**



ವಿಶಾಲವಾದ ಪ್ರಾಕಾರದೊಳಗಿರುವ ಶಂಕರಲಿಂಗ ದೇವಾಲಯ ಗರ್ಭಗೃಹ, ಅಂತರಾಳ, ನವರಂಗ, ಸಭಾಮಂಟಪ, ಪಂಚಶಿಖರಗಳಿಂದ ಕೂಡಿರುವ ಈ ಗುಡಿಯ ಶಿಖರಗಳು ಎತ್ತರವಾಗಿದ್ದು, ದ್ರಾವಿಡ ಶೈಲಿಯಲ್ಲಿವೆ. ನವರಂಗದ ಒಳಭಾಗದಲ್ಲಿ ಮೊಗಸಾಲೆ ಇದೆ. ಗರ್ಭಗೃಹದಲ್ಲಿ ವೆಂಕಟೇಶ್ವರ ಮೂರ್ತಿ ಇದೆ. ಗುಡಿಯ ಆವರಣದಲ್ಲಿ ಗೋವಿಂದರಾಜ, ವರಾಹ, ಹರಿಹರೇಶ್ವರ ಗುಡಿಗಳಿವೆ.

**ಪತ್ರೀವನ:**

ಗುಡ್ಡದ ಇಳಿಜಾರಿನಲ್ಲಿ ಪತ್ರಿವನವಿದ್ದು, ಇದರ ಆವರಣದಲ್ಲಿ ಪಂಚಗ್ರಹ ಪೀಠದ ಪ್ರಭು ಸಿದ್ದೇಶ್ವರ ಹಾಗೂ ಅಜ್ಜಪ್ಪನ ಗುಡಿಗಳಿವೆ.

**ವೆಂಕಟೇಶ್ವರ ದೇವಸ್ಥಾನ:**



ಕ್ರಾಂತಿಯ ಕಿಡಿ ಹೊತ್ತಿಸಿದ ನಾಡು ನರಗುಂದ ಅಂತಹ ಕಿಡಿಯನ್ನು ಹೊತ್ತಿಸಿದ ಬ್ರಿಟಿಷರ ವಿರುದ್ಧ ಬಂಡಾಯವೆದ್ದ ಅರಸ ಬಾಬಾಸಾಹೇಬ ಭಾವೆ ಅವರ ಪೂರ್ವಜರು ತಮ್ಮ ಆಡಳಿತಾವಧಿಯಲ್ಲಿ ತಿರುಪತಿ ತಿರುಮಲ ವೆಂಕಟೇಶ್ವರ ಮಾದರಿಯಲ್ಲೇ ನರಗುಂದ ಸಂಸ್ಥಾನದಲ್ಲಿ ೨೯೨ ವರ್ಷಗಳ ಹಿಂದೆ ವೆಂಕಟೇಶ್ವರ ದೇವಸ್ಥಾನವನ್ನು ನಿರ್ಮಿಸಿದರು.

ತಿರುಪತಿ ತಿರುಮಲ ವೆಂಕಟೇಶ್ವರ ನರಗುಂದ ಸಂಸ್ಥಾನದ ಅರಸ ಭಾವೆ ಅವರ ಆರಾಧ್ಯ ದೇವರು. ಬಾಬಾಸಾಹೇಬರ ತಾತ ದಾದಾಜಿರಾವ ಭಾವೆ ಪ್ರತಿವರ್ಷ ತಮ್ಮ ಸಾವಿರಾರು ಸೈನಿಕರೊಂದಿಗೆ ತಿರುಪತಿಗೆ ತೆರಳಿ ನವರಾತ್ರಿ ಉತ್ಸವದಲ್ಲಿ ಪಾಲ್ಗೊಳ್ಳುವುದು ಸಂಪ್ರದಾಯ. ದಾದಾಜಿರಾವ ಭಾವೆ ತಿರುಪತಿ ದರ್ಶನ ಪಡೆದು ಹಿಂತಿರುಗುತ್ತಿದ್ದರು. ಹೀಗೆ ಭಾವೆ ಅವರ ದಂಡು ನಡೆದುಕೊಂಡು ಹೋಗುವ ಮಧ್ಯಮಾರ್ಗದಲ್ಲಿ ದರೋಡೆಕೋರರ ಲೂಟಿಗೆ ಒಳಗಾಗುತ್ತಿತ್ತು. ಇದರಿಂದ ಚಿಂತಿತರಾದ ದಾದಾಸಾಹೇಬರ ಕನಸಿನಲ್ಲಿ ತಿರುಪತಿ ದೇವರು ಪ್ರತ್ಯಕ್ಷನಾಗಿ ತಿರುಪತಿವರೆಗೂ ಬರುವ ಕಷ್ಟಬೇಡ. ಅಲ್ಲಿಯೇ ಒಂದು ದೇವಸ್ಥಾನ ನಿರ್ಮಿಸಿ ನನ್ನ ದರ್ಶನ ಪಡೆ ಎಂಬ ಆಜ್ಞೆ ನೀಡಿದರು. ಇದನ್ನು ಪರಿಪಾಲಿಸಿದ ದಾದಾಜಿರಾವ ಭಾವೆ ನರಗುಂದ ಗುಡ್ಡದ ಪಕ್ಕದಲ್ಲಿಯೇ ತಿರುಪತಿ ತಿರುಮಲ ಮಾದರಿಯಲ್ಲೇ ಕ್ರಿ.ಶ. ೧೭೧೦ ರಲ್ಲಿ ದೇವಸ್ಥಾನ ನಿರ್ಮಿಸಿದರು ಎಂಬುದು ಪ್ರತೀತಿ.

ಇಂತಹ ಐತಿಹಾಸಿಕ ಹಿನ್ನಲೆಯುಳ್ಳ ಶ್ರೀ ದೇವಸ್ಥಾನದಲ್ಲಿ ಕಳೆದ ೨೯೨ ವರ್ಷಗಳಿಂದ ಮೈಸೂರ ದಸರಾ ಮತ್ತು ತಿರುಪತಿ ಉತ್ಸವದಂದೆ ನರಗುಂದ ವೆಂಕಟೇಶ್ವರನ ಉತ್ಸವಕ್ಕೆ ಚಾಲನೆ ದೊರೆಯುತ್ತದೆ.

**ಪರಮೇಶ್ವರ ಗುಡಿ:**

ಪ್ರಾಚೀನ ಶಾಸನಗಳಲ್ಲಿ ಕೋಳನೂರು ಎಂದು ಉಲ್ಲೇಖಗೊಂಡಿರುವ ಕೊಣ್ಣೂರ ನರಗುಂದದಿಂದ ಈಶಾನ್ಯಕ್ಕೆ ೧೦ ಕಿ.ಮೀ. ದೂರದಲ್ಲಿ ಮಲಪ್ರಭಾ ನದಿಯ ಬಲದಂಡೆಯ ಮೇಲೆ ಇದೆ. ಬೃಹತ್ ಶಿಲಾಯುಗಕ್ಕೆ ಸೇರಿದ ಸಮಾಧಿಗಳು ಇಲ್ಲಿ ಲಭಿಸಿವೆ. ಕೊಣ್ಣೂರಿನಲ್ಲಿ ಊರ ನಡುವೆ ಇರುವ ಈಗಿನ ಪರಮೇಶ್ವರ ದೇವಾಲಯ ರಾಷ್ಟ್ರಕೂಟರ ಕಾಲದ ವಾಸ್ತುಶಿಲ್ಪಗಳಿದ್ದು, ಈ ಪರಮೇಶ್ವರ ದೇವಾಲಯವು ಮೂಲತಃ ಜೈನ ಬಸದಿ ಗರ್ಭಗುಡಿಯ ದ್ವಾರ ಮೇಲಿನ ಲಲಾಟ ಬಿಂಬದಲ್ಲಿ ಜೈನ ಮೂರ್ತಿ ಇದೆ. ಪರಮೇಶ್ವರ ಗುಡಿ ನಕ್ಷತ್ರಾಕಾರದ ತಳವಿನ್ಯಾಸವುಳ್ಳ ರಾಜ್ಯದ ಅತ್ಯಂತ ಪ್ರಾಚೀನ ಉದಾಹರಣೆಯಾಗಿದೆ. ಇದು ಪೂರ್ವಾಭಿಮುಖವಾಗಿದ್ದು, ಸುಮಾರು ೨೭೧೧ ಚದುರ ಮೀಟರ ವಿಸ್ತಾರವಾಗಿದೆ. ಗರ್ಭಗೃಹ ಅಂತರಾಳ, ಸಭಾಮಂಟಪ, ಮತ್ತು ಮುಖಮಂಟಪದಿಂದ ಕೂಡಿದ ಈ ದೇವಾಲಯದ ವಾಸ್ತುಶಿಲ್ಪ ಲಕ್ಷಣದಲ್ಲಿ ಅತ್ಯಂತ ವಿಶೇಷವಾದುದೆಂದರೆ ಅದರ ಗರ್ಭಗುಡಿಯ ತಳವಿನ್ಯಾಸ ಏರಿಳಿತದಿಂದ ಕೂಡಿ ಮೂರು ಬದಿಗಳಿಂದ ಒಟ್ಟು ೧೩ ಲಘು ಶಟಕೋನಗಳುಳ್ಳದಾಗಿದ್ದು, ವೃತ್ತಾಕಾರದ ನಕ್ಷತ್ರಾಕೃತಿಯಲ್ಲಿ ಬಿಡಿಸಿವೆ. ಇದನ್ನು ರಾಷ್ಟ್ರಕೂಟರ ಆಳ್ವಿಕೆಯ ಕಾಲದಲ್ಲಿ ಸೇನಾನಿ ಬಂಕೆಯನು ಕ್ರಿ.ಶ. ೮೭೦ ರಲ್ಲಿ ನಿರ್ಮಿಸಿದ್ದನು. ಮರುಳು ಮಿಶ್ರಿತ ಕೆಂಪುಕಲ್ಲನ್ನು ಬಳಸಿ ನಿರ್ಮಿಸಿದ ಈ ಗುಡಿಯು ಶಿಥಿಲಾವಸ್ಥೆಯಲ್ಲಿದೆ.

# ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆಗಳು

**ಸಮಸ್ಯೆ ಇದ್ದಲ್ಲಿ ತಾಲ್ಲೂಕು / ಜಿಲ್ಲಾ ಕಛೇರಿಗಳನ್ನು ಸಂಪರ್ಕಿಸುವುದು ಹಾಗೂ ಅನಿವಾರ್ಯ ಸಂದರ್ಭಗಳಲ್ಲಿ ರಾಜ್ಯ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ**

**ರಾಜ್ಯ ಯೋಜನಾ ಕಛೇರಿ, ಸರ್ವಶಿಕ್ಷಣ ಅಭಿಯಾನ, ಬೆಂಗಳೂರು**

ದೂರವಾಣಿ: ೦೮೦೨೨೪೮೩೫೮೦/೨೨೪೮೪೭೨೦/೨೨೪೮೪೭೫೧

ಮೊ : ೯೪೪೮೯೯೯೪೨೫/೯೪೪೮೯೯೯೩೦೭/೯೪೪೮೯೯೯೩೧೨

**ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ, ಗದಗ**

ದೂರವಾಣಿ : ೦೮೩೭೨-೨೨೦೬೪೪

ಮೊ: ೦೮೩೭೨-೨೨೦೬೪೪

**ಪ್ರಾಚಾರ್ಯರು ಡಯಟ್, ಗದಗ**

ದೂರವಾಣಿ : ೦೮೩೭೨-೨೩೯೫೧೭

ಮೊ : ೯೪೪೮೯೯೯೩೬೯

**ಡಿ,. ವಾಯ್.ಪಿ.ಸಿ. ಸಾಶಿಇ, ಗದಗ**

ಮೊ : ೯೪೪೮೯೯೯೩೯೬

ಕ್ಷೇತ್ರ ಶಿಕ್ಷಣಾಧಿಕಾರಿಗಳು ಗದಗ ಶಹರ – ೯೪೮೦೬೯೫೧೯೬

ಕ್ಷೇತ್ರ ಶಿಕ್ಷಣಾಧಿಕಾರಿಗಳು ಗದಗ ಗ್ರಾಮೀಣ : ೯೪೮೦೬೯೫೧೯೭

ಕ್ಷೇತ್ರ ಶಿಕ್ಷಣಾಧಿಕಾರಿಗಳು ಮುಂಡರಗಿ – ೯೪೮೦೬೯೫೧೯೮

ಕ್ಷೇತ್ರ ಶಿಕ್ಷಣಾಧಿಕಾರಿಗಳು ನರಗುಂದ – ೯೪೮೦೬೯೫೧೯೯

ಕ್ಷೇತ್ರ ಶಿಕ್ಷಣಾಧಿಕಾರಿಗಳು ರೋಣ – ೯೪೮೦೬೯೫೨೦೦

ಕ್ಷೇತ್ರ ಶಿಕ್ಷಣಾಧಿಕಾರಿಗಳು ಶಿರಹಟ್ಟಿ – ೯೪೮೦೬೯೫೨೦೧

# ವಿದ್ಯಾರ್ಥಿಗಳಿಗೆ ಉಚಿತ ಶೈಕ್ಷಣಿಕ ಪ್ರವಾಸ ಕಾರ್ಯಕ್ರಮ

**ಚಿಣ್ಣರ ಗದಗ ಜಿಲ್ಲಾ ದರ್ಶನ**

**ವಿದ್ಯಾರ್ಥಿಗಳಿಗೆ ಉಚಿತ ಶೈಕ್ಷಣಿಕ ಪ್ರವಾಸ ಕಾರ್ಯಕ್ರಮ**

ಶಿಕ್ಷಣ ಪ್ರತಿಯೊಂದು ಮಗುವಿನ ಮೂಲಭೂತ ಹಕ್ಕುಗಳಲ್ಲಿ ಒಂದು. ಶಾಲಾ ವಯಸ್ಸಿನ ಎಲ್ಲಾ ಮಕ್ಕಳನ್ನು ಶಾಲೆಗೆ ದಾಖಲಿಸಿ ಪ್ರಾಥಮಿಕ ಶಿಕ್ಷಣವನ್ನು ಅರ್ಥಪೂರ್ಣವಾಗಿ ಪ್ರತಿಯೊಬ್ಬ ವಿದ್ಯಾರ್ಥಿಯೂ ಪೂರ್ಣಗೊಳಿಸುವ ಉದ್ದೇಶದಿಂದ ಅನೇಕ ಪರಿಣಾಮಕಾರಿ ಅನುಭವಗಳನ್ನು ನೀಡುವುದರೊಂದಿಗೆ ಗುಣಮಟ್ಟದ ಶಿಕ್ಷಣವನ್ನು ಒದಗಿಸುವುದು ಸರ್ಕಾರದ ಆದ್ಯ ಕರ್ತವ್ಯವಾಗಿದೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಪಾಲುಗಾರಿಕೆಯ ಬೃಹತ್ ಯೋಜನೆಯಾದ ಸರ್ವ ಶಿಕ್ಷಣ ಅಭಿಯಾನ ಯೋಜನೆಯ ಗುರಿ ಸಾಧಿಸಲು ಮೇಲ್ಕಂಡ ವಿವಿಧೋದ್ದೇಶ ಚಟಿವಟಿಕೆಗಳನ್ನು ಆಯೋಜಿಸಿದೆ. ಈ ನಿಟ್ಟಿನಲ್ಲಿ ೫,೬, ಮತ್ತು ೭ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಸರ್ಕಾರಿ ಶಾಲೆಗಳ ಆಯ್ದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಹಾಗೂ ಇತರೆ ಹೆಣ್ಣು ಮಕ್ಕಳಿಗಾಗಿ **" ಚಿಣ್ಣರ ಸುವರ್ಣ ಜಿಲ್ಲಾ ದರ್ಶನ"** ಎಂಬ ಶೈಕ್ಷಣಿಕ ಪ್ರವಾಸ ಕಾರ್ಯಕ್ರಮವನ್ನು ಸರ್ವ ಶಿಕ್ಷಣ ಅಭಿಯಾನ, ಹಾಗೂ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಮಂಡ್ಯ ಇವರ ಸಹಯೋಗದೊಂದಿಗೆ ಅನುಷ್ಠಾನಗೊಳ್ಳುತ್ತಿದೆ.

**ಪ್ರವಾಸದ ಪ್ರಾಮುಖ್ಯತೆ :**

- ವೈವಿಧ್ಯಮಯ ಜನಜೀವನ, ಶಿಲ್ಪಕಲೆ, ಐತಿಹಾಸಿಕ ಕಟ್ಟಡಗಳ ಬಗ್ಗೆ ಧನಾತ್ಮಕ ಮನೋಭಾವನೆಗಳ ಸಂವರ್ಧನೆ.
- ವಿವಿಧ ಪ್ರದೇಶಗಳ ಸಂಸ್ಕೃತಿ ಹಾಗೂ ಪರಂಪರೆಗಳ ಪರಿಚಯ ಮತ್ತು ನಾಡು-ನುಡಿ ಕುರಿತಾಗಿ ಅಭಿಮಾನ ಬೆಳೆಸುವುದು.
- ವಾಸ್ತವ ಜೀವನ ಕುರಿತ ಮನೋಭಾವನೆಯಲ್ಲಿ ಬದಲಾವಣೆ.
- ಸಹಬಾಳ್ವೆ ಹಾಗೂ ಸಹಭಾಗಿತ್ವದ ಮಹತ್ವ ತಿಳಿಸುವುದು.
- ಇತರೆ ಧರ್ಮ, ಜಾತಿ ಹಾಗೂ ಪ್ರಾಂತ್ಯದ ಜನರೊಂದಿಗೆ ಸಂವೇದನೆ ಮತ್ತು ಸಹಕಾರ ಮನೋಭಾವ ಬೆಳೆಸುವುದು.
- ತನ್ನ ಸ್ಥಾನ ಹಾಗೂ ಕರ್ತವ್ಯಗಳ ಬಗ್ಗೆ ಅರಿವನ್ನು ಉಂಟುಮಾಡುವುದು.
- ಸರ್ವತೋಮುಖ ವ್ಯಕ್ತಿತ್ವ ವಿಕಾಸವನ್ನುಂಟು ಮಾಡುವುದು.
- ವೈಜ್ಞಾನಿಕ ಹಾಗೂ ತಾಂತ್ರಿಕ ಅಭಿವೃದ್ಧಿಯ ಬಗ್ಗೆ ಜ್ಞಾನವನ್ನು ಪಡೆಯುವುದು.

**ವಿದ್ಯಾರ್ಥಿ ಜೀವನದಲ್ಲಿ ಶೈಕ್ಷಣಿಕ ಪ್ರವಾಸದ ಅಗತ್ಯತೆ**

- ಮಕ್ಕಳು ಶಿಕ್ಷಣದಲ್ಲಿ ಆಸಕ್ತಿ ಬೆಳೆಸಿಕೊಂಡು ಪಠ್ಯೇತರ ಹಾಗೂ ಶೈಕ್ಷಣಿಕ ಚಟುವಟಿಕೆಗಳಲ್ಲಿ ಹೆಚ್ಚು ಉತ್ಸಾಹದಿಂದ ಭಾಗವಹಿಸುವುದು.
- ಮಕ್ಕಳು ಶಾಲೆಯತ್ತ ಹೆಚ್ಚು ಆಕರ್ಷಿತರಾಗಿ ಹಿರಿಯ ಪ್ರಾಥಮಿಕ ಹಂತದಲ್ಲಿ ಶಾಲೆ ಬಿಡುವ ಸಾಧ್ಯತೆಗಳನ್ನು ಕಡಿಮೆ ಮಾಡುವುದು.
- ಮಕ್ಕಳಲ್ಲಿ ಪಠ್ಯವಸ್ತುವಿನ ಸಾಮರ್ಥ್ಯಗಳ ಬೆಳವಣಿಗೆಗೆ ಸಹಕಾರಿಯಾಗುವುದು.
- ವಿದ್ಯಾರ್ಥಿಗಳಲ್ಲಿ ವೀಕ್ಷಣೆ, ಮೌಖಿಕ ಹಾಗೂ ಲಿಖಿತ ಕೌಶಲಗಳ ಸಂವರ್ಧನೆ ಮಾಡುವುದು.
- ಮಕ್ಕಳಲ್ಲಿ ಕೀಳರಿಮೆ ಹೋಗಲಾಡಿಸುವುದು.
- ಮಕ್ಕಳಲ್ಲಿ ಸಹಬಾಳ್ವೆಯ ಮಹತ್ವ ಬೆಳೆಸುವುದು.

- ಸ್ವಾಭಾವಿಕ ಸನ್ನಿವೇಶಗಳ ಮುಖಾಂತರ ಶಿಕ್ಷಣವನ್ನು ದೊರಕಿಸುವುದು.
- ಮಕ್ಕಳಲ್ಲಿ ಜ್ಞಾನ, ಕಲಾಭಿರುಚಿ ಹಾಗೂ ಕುತೂಹಲಗಳನ್ನು ಬೆಳೆಸುವುದು.
- ಪಠ್ಯಪುಸ್ತಕದಲ್ಲಿನ ಮಾಹಿತಿ ಹಾಗೂ ಹೊರ ಪ್ರಪಂಚದ ವಾಸ್ತವ್ಯದ ನಡುವೆ ಇರುವ ಅಂತರವನ್ನು ಅರ್ಥೈಸುವುದು.
- ಸೆಮಿಸ್ಟರ್ ಪದ್ಧತಿಯ ಗುಂಪು ಚಟುವಟಿಕೆ ಹಾಗೂ ವೈಯಕ್ತಿಕ ಚಟುವಟಿಕೆಗಳನ್ನೊಳಗೊಂಡ ಯೋಜನೆಗಳನ್ನು ತಯಾರಿಸಲು ಮಕ್ಕಳಲ್ಲಿ ಮನೋಸ್ಥೈರ್ಯ ಬೆಳೆಸುವುದು.
- ವಿವಿಧ ಪ್ರದೇಶಗಳ ಸಂಸ್ಕೃತಿ ಪರಂಪರೆ, ನಾಡು-ನುಡಿಯನ್ನು ಪರಿಚಯಿಸುವುದು.
- ಮಕ್ಕಳ ಸೃಜನಾತ್ಮಕ ಚಟುವಟಿಕೆಗಳನ್ನು ಪ್ರೋತ್ಸಾಹಿಸುವುದು.
- ಕಲಿಯುವಿಕೆಗೆ ಸ್ವತಂತ್ರವಾದ ವಾತಾವರಣವನ್ನು ನಿರ್ಮಿಸುವುದು.
- ಕಲಿಕೆಯನ್ನು ಶಾಶ್ವತಗೊಳಿಸುವುದು.
- ವಿದ್ಯಾರ್ಥಿಗಳನ್ನು ಸ್ವಯಂ ಪ್ರೇರಣೆಯಿಂದ ಪಾಲ್ಗೊಳ್ಳಲು ಪ್ರೋತ್ಸಾಹಿಸುವುದು.

ವಿದ್ಯಾರ್ಥಿಗಳಲ್ಲಿ ರಾಷ್ಟ್ರೀಯ ಭಾವನೆ, ಸಮಾಜ ಸೇವೆ ಭಾವೈಕ್ಯತೆ, ದೇಶಪ್ರೇಮ ಮುಂತಾದ ಸದ್ಗುಣಗಳನ್ನು ಬೆಳೆಸುವುದು.

**ಪ್ರವಾಸದ ಸ್ಥಳಗಳ ಆಯ್ಕೆ :**

ಐತಿಹಾಸಿಕ, ಧಾರ್ಮಿಕ, ನೈಸರ್ಗಿಕ ಹಾಗೂ ಶೈಕ್ಷಣಿಕ ಮಹತ್ವದ ಜಿಲ್ಲೆಯಲ್ಲಿನ ಪ್ರೇಕ್ಷಣೀಯ ಸ್ಥಳಗಳು.

ವಿದ್ಯಾರ್ಥಿಗಳಿಗೆ ಹೊಸ ಅನುಭವವನ್ನು ನೀಡುವ ರಾಜ್ಯದಲ್ಲಿನ ದೂರದ ಪ್ರದೇಶಗಳು

**ಪ್ರವಾಸದ ಮುಖ್ಯಾಂಶಗಳು :**

- ಎರಡು ದಿನ ಹಾಗೂ ಒಂದು ರಾತ್ರಿಯ ಉಚಿತ ಪ್ರವಾಸ.
- ಉತ್ತಮವಾದ ಊಟ, ಕಾಫಿ, ತಿಂಡಿ, ವಸತಿ ಇತ್ಯಾದಿ.
- ಎಲ್ಲಾ ಪ್ರೇಕ್ಷಣೀಯ ಸ್ಥಳಗಳಲ್ಲಿ ಉಚಿತ ಪ್ರವೇಶ ವ್ಯವಸ್ಥೆ.
- ಪ್ರತಿ ತಂಡಕ್ಕೆ ಅನುಭವಿ ಶಿಕ್ಷಕರು ಹಾಗೂ ಪ್ರವಾಸೋದ್ಯಮ ಇಲಾಖೆಯ ಮಾರ್ಗದರ್ಶಕರು.
- ಪ್ರವಾಸದ ಅವಧಿಯಲ್ಲಿ ತಾಲ್ಲೂಕು, ಜಿಲ್ಲೆಯಲ್ಲಿನ ಮಾಹಿತಿ ಕೇಂದ್ರಗಳು.
- ಪ್ರಥಮ ಚಿಕಿತ್ಸೆ ಸೌಲಭ್ಯ.
- ಪ್ರತಿ ತಂಡದ ಮೌಲ್ಯಮಾಪನ ಮತ್ತು ದಾಖಲೀಕರಣ. ಮಕ್ಕಳಿಗೆ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಿ ವಿಜೇತ ಮಕ್ಕಳಿಗೆ ಬಹುಮಾನ.
- ಮಾರ್ಗಸೂಚಿ, ಜಿಲ್ಲೆಯ ನಕ್ಷೆ, ನೋಟ್ ಪುಸ್ತಕ, ಪೆನ್, ಚಿತ್ರಕಲೆ ಹಾಗೂ ಇತರೆ ಚಟುವಟಿಕೆಗಳಿಗೆ ಅವಶ್ಯಕ ಲೇಖನ ಸಾಮಗ್ರಿಗಳನ್ನು ಮತ್ತು ಟೋಪಿಗಳನ್ನು ಉಚಿತವಾಗಿ ಒದಗಿಸುವ ವ್ಯವಸ್ಥೆ.

**ವಿದ್ಯಾರ್ಥಿಗಳು ಪ್ರವಾಸದ ಸಮಯದಲ್ಲಿ ಪಾಲಿಸಬೇಕಾದ ನಿಯಮಗಳು :ನೀವು ಪಾಲಿಸಬೇಕಾದ ಅಂಶಗಳು :**

- ಬಸ್ಸಿನಲ್ಲಿ ಪ್ರಯಾಣ ಮಾಡುವಾಗ ಸುತ್ತಲಿನ ಪರಿಸರವನ್ನು ತಪ್ಪದೆ ಗಮನಿಸಬೇಕು.

- ವಿವಿಧ ಸ್ಥಳಗಳಲ್ಲಿ ಜನರ ಭಾಷೆ, ಧರಿಸುವ ಉಡುಪು, ಗುಣ-ನಡತೆ, ಆದರ-ಸತ್ಕಾರಗಳು, ಜೀವನ ಶೈಲಿ, ತಿಂಡಿ-ತಿನಿಸುಗಳಲ್ಲಿ ಇರುವ ವೈವಿಧ್ಯತೆಗಳನ್ನು ಗಮನಿಸಬೇಕು.
- ಪ್ರತಿ ದಿನದ ದಿನಚರಿಯನ್ನು ಬರೆಯುವುದು.
- ಸ್ಥಳಗಳ ಬಗ್ಗೆ ಮಾಹಿತಿಯನ್ನು ಶಿಕ್ಷಕರಿಂದ ಅಥವಾ ಮಾರ್ಗದರ್ಶಕರಿಂದ ಕೇಳಿ ತಿಳಿಯಬೇಕು.
- ವೇಳಾಪಟ್ಟಿಯಂತೆ, ವಿದ್ಯಾರ್ಥಿ ಗುಂಪಿನ ನಾಯಕರು, ಪ್ರವಾಸಿ ಮಾರ್ಗದರ್ಶಕರು ಹಾಗೂ ಶಿಕ್ಷಕರು ನೀಡುವ ಸೂಚನೆಯಂತೆ ಸಮಯ ಪಾಲನೆ ಮಾಡಬೇಕು.
- ಪ್ರವಾಸದಲ್ಲಿ ನಿಮಗೆ ಅಥವಾ ನಿಮ್ಮ ಸ್ನೇಹಿತರಿಗೆ ಉಂಟಾಗುವ ತೊಂದರೆಗಳಿಗೆ ಕೂಡಲೇ ಶಿಕ್ಷಕರನ್ನು ಸಂಪರ್ಕಿಸಬೇಕು.
- ಬಸ್ಸಿನಿಂದ ಇಳಿದು ಸ್ಥಳಗಳ ವೀಕ್ಷಣೆಗೆ ಸಾಲಾಗಿ ಸಾಗಬೇಕು.
- ನೀರು ಅಥವಾ ಇಳಿಜಾರು ಸ್ಥಳಕ್ಕೆ ಭೇಟಿ ನೀಡಿದಾಗ ಶಿಕ್ಷಕರು ನೀಡುವ ಸೂಚನೆಗಳನ್ನು ಪಾಲಿಸಿ ಎಚ್ಚರದಿಂದಿರಬೇಕು.
- ಚಳಿಗಾಲದಲ್ಲಿ ಬೆಚ್ಚನೆಯ ಉಡುಪುಗಳನ್ನು ಒಯ್ಯುವುದು.
- ಪ್ರವಾಸ ಕಾಲದಲ್ಲಿ ವೈಯಕ್ತಿಕ ಕೆಲಸವನ್ನು ಪ್ರತಿಯೊಬ್ಬರು ತಾವೇ ನಿರ್ವಹಿಸಬೇಕು.
- ಶುಚಿಯಾದ ನೀರನ್ನೇ ಕೇಳಿ ಪಡೆದು ಕುಡಿಯಬೇಕು.
- ನಿಮಗೆ ಹಂಚಿಕೆ ಮಾಡಲಾಗುವ ಮಲಗುವ ಕೋಣೆಯಲ್ಲಿಯೇ ನೀವು ಮಲಗಬೇಕು.
- ಪ್ರತಿ ದಿನದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಕಡ್ಡಾಯವಾಗಿ ಎಲ್ಲರೂ ಭಾಗವಹಿಸಬೇಕು.
- ನಿಮ್ಮ ವಸ್ತುಗಳ ಬಗ್ಗೆ ಎಚ್ಚರಿಕೆ ವಹಿಸಬೇಕು.
- ಕುಡಿಯುವ ನೀರು ಹಾಗೂ ಒಂದು ಕೈ ಒರೆಸುವ ಬಟ್ಟೆ ನಿಮ್ಮ ಕೈಗೆ ಕೂಡಲೆ ಸಿಗುವಂತೆ ಇಟ್ಟುಕೊಳ್ಳಿ.
- ನಿಮ್ಮ ಶಿಕ್ಷಕರು ಹಾಜರಾತಿಯನ್ನು ತೆಗೆದುಕೊಳ್ಳುವಾಗ ನಿಶ್ಯಬ್ದತೆಯಿಂದ ಇರಬೇಕು.
- ಪ್ರತಿ ಮುಂಜಾನೆ ಹಾಗೂ ರಾತ್ರಿ ಶಿಕ್ಷಕರು ಹೇಳಿಕೊಡುವ ಪ್ರಾರ್ಥನೆಯಲ್ಲಿ ಭಾಗವಹಿಸಬೇಕು.

ವಾತಾವರಣವನ್ನು ಕಲುಷಿತಗೊಳಿಸದಿರಿ. ಶಿಸ್ತು ಮತ್ತು ಸಭ್ಯತೆಯಿಂದ ನಡೆದುಕೊಳ್ಳಬೇಕು.

**ನೀವು ಹೀಗೆ ಮಾಡದಿರಿ**

- ಬಸ್ಸಿನ ಕಿಟಕಿಗಳಿಂದ ತಲೆ ಅಥವಾ ಕೈಗಳನ್ನು ಹೊರ ಚಾಚಬಾರದು.
- ಬೆಲೆ ಬಾಳುವ ವಸ್ತು/ಆಭರಣಗಳನ್ನು ಕೊಂಡೊಯ್ಯಬಾರದು.
- ಪ್ರವಾಸ ಸಮಯದಲ್ಲಿ ಅಂಗಡಿ ತಿಂಡಿಗಳನ್ನಾಗಲಿ ಅಥವಾ ಮನೆಯಿಂದ ತಂದ ಕರಿದ ತಿಂಡಿಗಳನ್ನು ತಿನ್ನಬಾರದು.
- ಅರ್ಧರಾತ್ರಿಯಲ್ಲಿ ಒಬ್ಬರೆ ಎದ್ದು ಹೊರಗೆ ಹೋಗಬಾರದು.
- ನೀವು ಕೋಪ ಮಾಡಿಕೊಳ್ಳುವುದಾಗಲಿ/ತುಂಟತನವನ್ನಾಗಲಿ ಮಾಡಿಕೊಳ್ಳಬಾರದು.

**ಶಿಕ್ಷಕರಿಗೆ ಮಾರ್ಗಸೂಚಿ ಮತ್ತು ಸೂಚನೆಗಳು, ನಿರ್ವಹಿಸಬೇಕಾದ ಅಂಶಗಳು**

- ಪ್ರವಾಸ ಕಾಲದಲ್ಲಿ ಮಗುವಿಗೆ ಕಲಿಯುವ ಅನುಭವಗಳನ್ನು ಹಾಗೂ ವಾತಾವರಣವನ್ನು ಸೃಷ್ಟಿಸಬೇಕು.
- ಪ್ರತಿಯೊಂದು ಮಗುವನ್ನು ಸಮಾನವಾಗಿ ಕಂಡು ಎಲ್ಲರಿಗೂ ಸಮಾನ ಅವಕಾಶ ಕಲ್ಪಿಸಬೇಕು.
- ವಿದ್ಯಾರ್ಥಿಗಳಿಗೆ ಯಾವುದೇ ಸಂದರ್ಭದಲ್ಲಿ ತೊಂದರೆಯಾಗದಂತೆ ಶಿಕ್ಷಕರು ಜವಾಬ್ದಾರಿಯನ್ನು ವಹಿಸಬೇಕು.
- ವಿದ್ಯಾರ್ಥಿಗಳು ಬಸ್ಸಿನ ಕಿಟಕಿಗಳಿಂದ ಕೈ ಅಥವಾ ತಲೆಯನ್ನು ಹೊರಚಾಚದಂತೆ ಎಚ್ಚರಿಕೆ ವಹಿಸಬೇಕು.

- ವಿದ್ಯಾರ್ಥಿಗಳನ್ನು ತಂಡಗಳಾಗಿ ವಿಂಗಡಿಸಿ ಹೆಣ್ಣು ಮಕ್ಕಳ ಗುಂಪಿನ ಜವಾಬ್ದಾರಿಯನ್ನು ಶಿಕ್ಷಕಿಯರು ವಹಿಸಬೇಕು.
- ಪ್ರತಿ ಹಂತದಲ್ಲಿ ವಿದ್ಯಾರ್ಥಿಗಳ ಹಾಜರಾತಿ ಪರೀಕ್ಷಿಸಬೇಕು.
- ಎಲ್ಲಾ ಶಿಕ್ಷಕರು ಸಹಕಾರ ಮನೋಭಾವದಿಂದ ಹೊಣೆಗಾರಿಕೆಯನ್ನು ನಿರ್ವಹಿಸಬೇಕು.
- ವಿದ್ಯಾರ್ಥಿಗಳು ಸಮಯಕ್ಕೆ ಸರಿಯಾಗಿ ಸಿದ್ಧರಾಗಲು ಪ್ರೇರೇಪಿಸಬೇಕು.
- ಪ್ರತಿ ಮಗುವಿನ ಹಿನ್ನೆಲೆಯನ್ನು ಅರಿಯಲು ಪ್ರಯತ್ನಿಸಬೇಕು ಹಾಗೂ ಅಗತ್ಯ ಸಹಕಾರವನ್ನು ನೀಡಬೇಕು.
- ಹೆಣ್ಣು ಮಕ್ಕಳ ಕೋಣೆಯಲ್ಲಿ ಶಿಕ್ಷಕಿಯರು ಕಡ್ಡಾಯವಾಗಿ ಮಲಗಬೇಕು.
- ಹೆಣ್ಣುಮಕ್ಕಳಲ್ಲಿ ಉಂಟಾಗುವ ತೊಂದರೆಗಳಿಗೆ ಶಿಕ್ಷಕಿಯರು ಗಮನಹರಿಸಬೇಕು.
- ಎಲ್ಲಾ ವಿದ್ಯಾರ್ಥಿಗಳಿಗೆ ನಿಯಮಿತ ಹಾಗೂ ಮಿತವಾದ ಭೋಜನ ಮಾಡುವಂತೆ ತಿಳಿಹೇಳಬೇಕು.
- ವಿದ್ಯಾರ್ಥಿಗಳಿಗೆ ಶುದ್ಧ ನೀರು ಒದಗಿಸಲು ವ್ಯವಸ್ಥೆ ಮಾಡುವುದು.
- ಗಂಭೀರವಾಗಿ ಅನಾರೋಗ್ಯದಿಂದ ಬಳಲುವ ಮಗುವಿನ ಆರೈಕೆ ಶಿಕ್ಷಕರ ಜವಾಬ್ದಾರಿಯಾಗಿರುತ್ತದೆ.
- ನೀರು ಅಥವಾ ಇಳಿಜಾರು ಸ್ಥಳಗಳಲ್ಲಿ ಮಕ್ಕಳ ಬಗ್ಗೆ ಎಚ್ಚರಿಕೆ ವಹಿಸಬೇಕು.
- ಎಲ್ಲಾ ಸ್ಥಳಗಳಲ್ಲಿ ಶಿಸ್ತು ಹಾಗೂ ಸಭ್ಯತೆಯಿಂದ ವರ್ತಿಸಲು ಮಕ್ಕಳಿಗೆ ಪ್ರೇರೇಪಿಸಬೇಕು.
- ಯಾವುದೇ ಮಗು ಗುಂಪನ್ನು ಬಿಟ್ಟು ಹೋಗದಂತೆ ನಿಗಾ ವಹಿಸಬೇಕು.
- ಪ್ರತಿದಿನ ಮುಂಜಾನೆ ಸಾಮೂಹಿಕ ಪ್ರಾರ್ಥನೆ ಮತ್ತು ರಾತ್ರಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಬೇಕು.
- ಪ್ರತಿದಿನದ ದಿನಚರಿಯನ್ನು ವಿದ್ಯಾರ್ಥಿಗಳಾದಿಯಾಗಿ ಶಿಕ್ಷಕರೂ ನಿರ್ವಹಿಸಬೇಕು.
- ಕೆಳಕಂಡ ದಾಖಲೆಗಳನ್ನು ಕಡ್ಡಾಯವಾಗಿ ನಿರ್ವಹಿಸಬೇಕು.
- ಈ ವಿದ್ಯಾರ್ಥಿಗಳ ಹಾಜರಾತಿ ಮತ್ತು ಶಿಕ್ಷಕರ ವಿವರ
- ಈ ದಿನಚರಿ
- ಈ ಸಾಂಸ್ಕೃತಿಕ ಕಾರ್ಯಕ್ರಮಗಳ ವಿವರ
- ಈ ವಿದ್ಯಾರ್ಥಿಗಳು ಬರೆದ ಕವನ/ಚುಟುಕ/ಚಿತ್ರಕಲೆ ಇತ್ಯಾದಿ.
- ಇಡೀ ಪ್ರವಾಸದ ಸಂದರ್ಭದಲ್ಲಿ ಸನ್ನಡತೆಯಿಂದ ನಡೆದುಕೊಂಡು ಸಹಕರಿಸಿದ ವಿದ್ಯಾರ್ಥಿಗಳನ್ನು ಗುರುತಿಸಬೇಕು.
- ವಿದ್ಯಾರ್ಥಿಗಳಿಗೆ ನೀಡಲಾಗುವ ಜಿಲ್ಲೆಯ ನಕ್ಷೆಯಲ್ಲಿ ವೀಕ್ಷಿಸಿದ ಸ್ಥಳಗಳನ್ನು ಗುರುತಿಸಲು ಸಹಕರಿಸಬೇಕು.
- ಶಿಕ್ಷಕರು ಒಟ್ಟಾಗಿ ಸೇರಿ ತಮ್ಮ ತಂಡದ ವರದಿಯನ್ನು ಸಿದ್ಧಗೊಳಿಸಿ ಪ್ರವಾಸದ ಅಂತ್ಯದಲ್ಲಿ ತಮ್ಮ ಅಧಿಕಾರಿಗಳಿಗೆ ಸಲ್ಲಿಸಬೇಕು.

ಪ್ರವಾಸೋದ್ಯಮ ಇಲಾಖೆಯಿಂದ ನಿಯೋಜಿಸಿರುವ ಪ್ರವಾಸೋದ್ಯಮ ಇಲಾಖೆಯ ಸಮನ್ವಯಾಧಿಕಾರಿಗಳು ಕಾಲಕಾಲಕ್ಕೆ ನೀಡಲಾಗುವ ಸಲಹೆ ಮತ್ತು ಸೂಚನೆಗಳನ್ನು ಪಾಲಿಸಬೇಕು.

**ಶಿಕ್ಷಕರೆ ಹೀಗೆ ಮಾಡದಿರಿ !**

- ಶಿಕ್ಷಕರ ನಡುವೆ ಯಾವುದೇ ಭಿನ್ನಾಭಿಪ್ರಾಯಕ್ಕೆ ಅವಕಾಶ ನೀಡಬಾರದು.
- ಬೆಲೆಬಾಳುವ ವಸ್ತುಗಳನ್ನು ವಿದ್ಯಾರ್ಥಿಗಳಾದಿಯಾಗಿ ಶಿಕ್ಷಕರೂ ಸಹ ಹೊಂದಿರಬಾರದು.
- ಬಸ್ಸಿನಲ್ಲಿ ಎಲ್ಲಾ ಶಿಕ್ಷಕರು ಒಂದೇ ಕಡೆ ಕುಳಿತುಕೊಳ್ಳಬಾರದು.
- ಮಕ್ಕಳಿಗಿಂತ ಮೊದಲು ಸ್ಥಳಗಳನ್ನು ಕಾಯ್ದಿರಿಸಲು ಮುನ್ನುಗ್ಗಬಾರದು.
- ಯಾವುದೇ ಶಿಕ್ಷಕರು ತಾವು ಭೇಟಿ ನೀಡಿದ ಸ್ಥಳಗಳಲ್ಲಿ ತಮ್ಮ ಪರಿಚಯದವರನ್ನು,

- ಸಂಬಂಧಿಗಳನ್ನು ನೋಡುವ ಅಥವಾ ವೈಯಕ್ತಿಕ ಕಾರ್ಯಗಳ ಸಲುವಾಗಿ ತಂಡವನ್ನು ಬಿಟ್ಟು ತೆರಳಬಾರದು.
- ಶಿಕ್ಷಕರು ಧೂಮಪಾನ ಮಾಡುವುದು ಅಥವಾ ಇನ್ನಿತರೆ ದುಶ್ಚಟಗಳಲ್ಲಿ ತೊಡಗಬಾರದು.
- ಈ ಕುರಿತು ಇಲಾಖೆಯ ಗಮನಕ್ಕೆ ಬಂದಲ್ಲಿ ಶಿಸ್ತಿನ ಕ್ರಮ ಜರುಗಿಸಲಾಗುವುದು.
- ಯಾವುದೇ ಹೆಚ್ಚಿನ ಅನಾರೋಗ್ಯದಿಂದ ಪ್ರವಾಸದ ಮಾರ್ಗಮಧ್ಯದಲ್ಲಿ ಬಳಲುತ್ತಿದ್ದಲ್ಲಿ,  ಮಗುವನ್ನು ಒಂಟಿಯಾಗಿ ಬಿಡಬಾರದು.

***